# ರಿಚರ್ಡ್ ಎಂ. ಡಾರ್ಸನ್



ಡಾ. ಕೆ.ಆರ್. ಸಂಧ್ಯಾರೆಡ್ಡಿ

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ
೧೪/೩, ನೃಪತುಂಗ ರಸ್ತೆ, ಬೆಂಗಳೂರು-೫೬೦ ೦೦೨

# ರಿಚರ್ಡ್ ಎಂ. ಡಾರ್ಸನ್

ಪ್ರಧಾನ ಸಂಪಾದಕ

ಡಾ. ಜೀ. ಶಂ. ಪರಮಶಿವಯ್ಯ

ಲೇಖಕಿ

ಡಾ. ಕೆ. ಆರ್. ಸಂಧ್ಯಾರೆಡ್ಡಿ

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ

೧೪/೩, ನೃಪತುಂಗ ರಸ್ತೆ, ಬೆಂಗಳೂರು-೫೬೦ ೦೦೨

*RICHARD M. DORSAN-A book about Life Histoy of Richard M. Dorsan. written by Dr. Sandhya Reddy, Published by Karnataka Jaanapada and Yakshagana Academy, Nripatunga Road, Bangalore-560 002. pp. iv +56*

ಮೊದಲ ಮುದ್ರಣ : ೧೯೯೪

© ಹಕ್ಕುಗಳನ್ನು ಕಾದಿರಿಸಲಾಗಿದೆ

ಬೆಲೆ : ರೂ. 00000

ಮುಖಪುಟ ವಿನ್ಯಾಸ : ಬಿ. ಜಿ. ಕನಕೇಶಮೂರ್ತಿ

ಮುದ್ರಕರು : ಜಯಲಕ್ಷ್ಮಿ ಪ್ರಿಂಟ

೧೪ನೇ ತಿರುವು, ರಾಮಾನುಜ ರಸ್ತೆ, ಮೈಸೂರು-೪

# ಪ್ರಧಾನ ಸಂಪಾದಕರ ಮಾತು

ಜಾನಪದ ಅಧ್ಯಯನದಲ್ಲಿ ಪಾಶ್ಚಾತ್ಯ ವಿದ್ವಾಂಸರುಗಳು ತೋರಿರುವ ಸಾಧನೆ ಬಹುದೊಡ್ಡದು, ಅದರಲ್ಲೂ ಅಮೆರಿಕದ ಇಂಡಿಯಾನ ವಿಶ್ವವಿದ್ಯಾಲಯದಲ್ಲಿನ ವಿದ್ವಾಂಸರ ಪರಂಪರೆ ಈ ಕ್ಷೇತ್ರಕ್ಕೆ ಕೊಟ್ಟಿರುವ ಕೊಡುಗೆ ಬಹು ದೊಡ್ಡದು ರಿಚರ್ಡ್ ಎಂ. ಡಾರ್ಸನ್ ಅವರು ಜನಪದ ಕ್ಷೇತ್ರಕ್ಕೆ ನೀಡಿರುವ ಕೊಡುಗೆ ತುಂಬ ಗಣನೀಯವಾದದ್ದು, ವಿಶ್ವದ ಬೇರೆಬೇರೆ ರಾಷ್ಟ್ರಗಳ ಜನಪದ ಕಥೆಗಳನ್ನು ಒಂದೊಂದು ಸಂಕಲನದ ಮೂಲಕ ಅವರು ಸಂಪಾದಿಸಿಕೊಟ್ಟಿದ್ದಾರೆ. ಜೊತೆಗೆ ಆಯಾ ದೇಶಗಳಲ್ಲಿ ನಡೆದ ಜಾನಪದ ಸಂಶೋಧನ ಕಾರ್ಯವನ್ನು ವಿವರವಾಗಿ ಪರಿಚಯಿಸಿದ್ದಾರೆ. ಇಂತಹ ಒಬ್ಬ ಗಮನಾರ್ಹ ವಿದ್ವಾಂಸನನ್ನು ಕುರಿತಂತೆ ಒಂದು ಪುಟ್ಟ ಗ್ರಂಥವನ್ನು ರಚಿಸಿಕೊಡುವಂತೆ ಕೇಳಿಕೊಂಡಾಗ ಅತ್ಯಂತ ಸಂತೋಷದಿಂದ ಆ ಕೆಲಸವನ್ನು ಮುಗಿಸಿಕೊಟ್ಟ ಡಾ. ಕೆ. ಆರ್. ಸಂಧ್ಯಾರೆಡ್ಡಿಯವರಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

ಈ ಗ್ರಂಥವನ್ನು ಅಂದವಾಗಿ ಮುದ್ರಿಸಿಕೊಟ್ಟ ಜಯಲಕ್ಷ್ಮಿ ಪ್ರಿಂಟರ್ ಮಾಲಿಕರಾದ ಶ್ರೀ ಜಯಣ್ಣ ಹಾಗೂ ಅವರ ಶ್ರೀಮತಿ ಮಂಜುಳ ಅವರಿಗೂ ಸುಂದರ ವಾದ ಮುಖಪುಟದ ವಿನ್ಯಾಸವನ್ನು ರಚಿಸಿಕೊಟ್ಟ ಶ್ರೀ ಕನಕೇಶಮೂರ್ತಿಯವರಿಗೂ ಕರಡು ತಿದ್ದುವುದರಲ್ಲಿ ನೆರವಾದ ಡಾ. ಅಕ್ಕಮಹಾದೇವಿಯವರಿಗೂ ನಮ್ಮ ವಂದನೆಗಳು ಸಲ್ಲುತ್ತವೆ.

**ಜೀ. ಶಂ. ಪರಮಶಿವಯ್ಯ**

**ರಿಚರ್ಡ್ ಎಂ. ಡಾರ್ಸನ್**

---

ಜಾನಪದ ಅಧ್ಯಯನವನ್ನು ಹುಟ್ಟು ಹಾಕಿದವರು ಬ್ರಿಟಿಷರು. ಆದರೆ ಅದು ಹೆಮ್ಮರವಾಗಿ ಬೆಳೆದು ಅರಳಿದ್ದು ಅಮೆರಿಕನ್ ನೆಲದಲ್ಲಿ, ಏನು ಮಾಡಿದರೂ ದೊಡ್ಡ ದಾಗಿಯೇ ಮಾಡುವುದು, ಎಲ್ಲರ ಗಮನ ಸೆಳೆಯುವಂತೆ ಮಾಡುವುದು, ಮೊದಲಿನ ವರನ್ನೂ ಮರೆಸುವಷ್ಟು ಚೆನ್ನಾಗಿ ಮಾಡುವುದು ಅಮೆರಿಕನ್ ಕಾರ್ಯಶೈಲಿ. ಜಾನಪದ ಅಧ್ಯಯನದ ವಿಷಯಕ್ಕೂ ಈ ಮಾತು ಅನ್ವಯಿಸುತ್ತದೆ. ಸ್ಯಾಂಡಿನೇವಿಯಾ, ಇಂಗ್ಲೆಂಡ್, ಭಾರತ, ಚೀನಾ ಮೊದಲಾದ ದೇಶಗಳಂತೆ ಅಮೆರಿಕನ್ ಜಾನಪದ ಎಂದು ಹೇಳಿಕೊಳ್ಳುವಂತಹ ಒಂದು ಜಾನಪದವೇ ಇಲ್ಲದ ಅಮೆರಿಕೆಯಲ್ಲಿ ಜಾನಪದ ಅಧ್ಯಯನ ಸ್ಥಾಪಿತವಾಗಿ ಬೆಳೆದಿರುವ ಬಗ್ಗೆ ಯಾರಿಗಾದರೂ ಅಚ್ಚರಿ ತರುತ್ತದೆ. ಶ್ರೀಮಂತ ಜಾನಪದ ಪರಂಪರೆಗಳಿರುವ ಎಷ್ಟೋ ದೇಶಗಳಲ್ಲಿ ಜಾನಪದದ ಅಧ್ಯಯನ ತೀರಾ ಶೈಶವಾವಸ್ಥೆಯಲ್ಲಿದ್ದರೆ ಅಮೆರಿಕೆಯಲ್ಲಿ ಅದು ಹೊಸ ಹೊಸ ನೆಲೆ, ದಿಕ್ಕು ಗಳನ್ನು ಕಂಡುಕೊಳ್ಳುತ್ತ ಸಾಗಾಲೋಟದಲ್ಲಿ ಬೆಳೆಯುತ್ತಿದೆ. ಈ ಸಂದರ್ಭದಲ್ಲಿ ಅಮೆರಿಕನರನ್ನು ಕುರಿತು ಪ್ರಚಲಿತವಿರುವ ಒಂದು ಅಂತರರಾಷ್ಟ್ರೀಯ ಜೋಕ್ ಅನ್ನು ಉಲ್ಲೇಖಿಸಿದರೆ ಅಪ್ರಸ್ತುತವಾಗದು. 'ಆನೆ'ಯನ್ನು ಕುರಿತು ಒಂದು ಅಂತರರಾಷ್ಟ್ರೀಯ ಒರ ಸಂಕಿರಣ ನಡೆಯುತ್ತದೆ. ಆನೆಯ ವಿವಿಧ ವಿಷಯಗಳ ಬಗ್ಗೆ ಬೇರೆ ಬೇರೆ. ದೇಶಗಳ ವಿದ್ವಾಂಸರು ವಿದ್ವತ್ಪೂರ್ಣವಾದ ಪ್ರಬಂಧಗಳನ್ನು ಮಂಡಿಸುತ್ತಾರೆ. ಕೊನೆಗೆ ಅಮೆರಿಕಾದವನು ತನ್ನ ಪ್ರಬಂಧ ಮಂಡಿಸುತ್ತಾನೆ. ಅವನ ಪ್ರಬಂಧದ ಶೀರ್ಷಿಕೆ "How to build a bigger and better Elephant"ಅಮೆರಿಕಾ

ದವರಿಗೆ ಗಾತ್ರ ಮತ್ತು ವಾಣಿಜ್ಯ ಸಾಹಸಗಳು ಇರುವ ಬಲವನ್ನು ಉತ್ತೇಕ್ಷಿಸುವ ಈ ಜೋಕ್ಸ್‌ನಲ್ಲಿ ನಾವು ಗಮನಿಸಬೇಕಾದ ಮತ್ತೊಂದು ಅಂಶವೆಂದರೆ ಆನೆಗಳೇ ಇಲ್ಲದ ಅಮೆರಿಕಾ ದೇಶದವರು ಹೊಸತಳಿಯ ಆನೆಗಳನ್ನು ಅಭಿವೃದ್ಧಿ ಪಡಿಸಲು ಮುಂದಾಗ ಬಲ್ಲರು ಎಂಬುದು. ಅಮೆರಿಕೆಯಲ್ಲಿ ಹೇಗೆ ಆನೆಗಳಿಲ್ಲವೋ ಅದೇ ರೀತಿ ತನ್ನದೆಂದು ಹೇಳಿಕೊಳ್ಳುವ ಜಾನಪದವೂ ಇಲ್ಲ. ಇಂತಹ ಅಮೆರಿಕಾ ಇಂದು ಜಾನಪದ ಅಧ್ಯಯನದ ಬಗ್ಗೆ ಜಗತ್ತಿಗೇ ಮಾರ್ಗದರ್ಶನ ನೀಡುವ ಸ್ಥಾನದಲ್ಲಿರುವ ಅಂಶವನ್ನು ಗಮನಿಸಬೇಕು. ಜಾನಪದದ ಈ ಭವ್ಯಸ್ಥಿತಿಗೆ ಕಾರಣರಾದ ವ್ಯಕ್ತಿಗಳಲ್ಲಿ ಪ್ರಮುಖವಾದ ಹೆಸರು ರಿಚರ್ಡ್ ಎಂ, ಡಾರ್ಸನ್, ಮೇಲೆ ಉಲ್ಲೇಖಿಸಿರುವ ಜೋಕಿಗೆ ಸ್ವತಃ ಡಾರ್ಸನ್ ಅವರೇ ಒಂದು ಉತ್ತಮ ಉದಾಹರಣೆ. ಏಕೆಂದರೆ, ಅವರು ಮೂಲತಃ ಚರಿತ್ರೆಯ ಪದವೀಧರರು. ಅಮೆರಿಕನ್ ನಾಗರಿಕತೆಯ ಇತಿಹಾಸ' ಕುರಿಾದ ಸಂಶೋಧನೆಗಾಗಿ ಪಿಎಚ್.ಡಿ ಪಡೆದವರು. ಹಾರ್ವರ್ಡ್‌್ರ, ಮಿಚಿಗನ್ ಸ್ಟೇಟ್ ಯೂನಿವರ್ಸಿಟಿ ಮತ್ತು ಇಂಡಿಯಾನಾ ಯೂನಿವರ್ಸಿಟಿಗಳಲ್ಲಿ ಇತಿಹಾಸದ ಪ್ರಾಧ್ಯಾಪಕರಾಗಿ ಕಾರ್ಯ ನಿರ್ವಹಿಸಿದವರು. ಹೀಗೆ ಚರಿತ್ರೆಯ ಮೂಲಕ ಜಾನಪದ ಕ್ಷೇತ್ರಕ್ಕೆ ಕಾಲಿಟ್ಟ ಡಾರ್ಸನ್, ಜಾನಪದದ ಅಗ್ರಗಣ್ಯ ವಿದ್ವಾಂಸರಾಗಿ ಮಿಂಚಿದ್ದು ಒಂದು ದೊಡ್ಡ ವಿಸ್ಮಯ.

ಜಾನಪದ ಕ್ಷೇತ್ರಕ್ಕೆ ಕಾಲಿಟ್ಟ ನಂತರ ಡಾರ್ಸನ್, ಮೂರು ದಶಕಗಳಿಗೂ ಹೆಚ್ಚು ಕಾಲ ಜಾನಪದ ಅಧ್ಯಯನ, ಭೋದನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡರ ಎ ಹೀಗೆ ಅವರು ಜಾನಪದದಲ್ಲಿ ತಮ್ಮನ್ನು ತೊಡಗಿಸಿಕೊಂಡ ಕಾಲದಲ್ಲಿ ಜಾನ ಪದದ ಬಗ್ಗೆ ವಿಶ್ವ ವಿದ್ಯಾಲಯಗಳಲ್ಲಿ ವಿದ್ವಾಂಸರಲ್ಲಿ ಹಾಗೂ ಜನಸಾಮಾನ್ಯರಲ್ಲಿ ಒಂದು ರೀತಿಯ ಅಸಡ್ಡೆ ಹೀಯಾಳಿಕೆಯ ಮನೋಭಾವನೆ ಇತ್ತು. ಅನೇಕ ತಪ್ಪು ಪರಿಕಲ್ಪನೆಗಳಿದ್ದವು. ಸ್ವತಃ ಜಾನಪದ ವಿದ್ಯಾರ್ಥಿಗಳಿಗೆ ಜಾನಪದ ಪರಿಭಾಷೆ, ಪರಿಕಲ್ಪನೆಗಳ ಬಗ್ಗೆ ಸ್ಪಷ್ಟವಾದ ಅರಿವಿರಲಿಲ್ಲ. ಜಾನಪದವು ಒಂದು ಅಧ್ಯಯನದ ಶಿಸ್ತಾಗಿ ಬೆಳೆದುಕೊಂಡು ಹೋಗುವುದಕ್ಕೆ ಸೂಕ್ತವಾದ ವ್ಯವಸ್ಥೆ, ವಾತಾವರಣ ಬೆಂಬಲಗಳು ಇರಲಿಲ್ಲ. ಈ ಮೂರೂ ದಿಕ್ಕಿನಲ್ಲಿ ಅವರು ಕಾರ್ಯಪ್ರವೃತ್ತರಾದರು. ತಮ್ಮ ಅಧಿಕಾರ, ಅಧ್ಯಯನ ಹಾಗೂ ಬರಹಗಳನ್ನು ಜಾನಪದಕ್ಕಾಗಿ ಮೀಸಲಿಟ್ಟರು. ಇಂಡಿಯಾನಾ ವಿಶ್ವವಿದ್ಯಾಲಯದ ಜಾನಪದ ವಿಭಾಗದ ಮುಖ್ಯಸ್ಥರಾಗಿ ಅವರು ಅನೇಕ ದೂರದೃಷ್ಟಿಯ ಯೋಜನೆಗಳನ್ನು ರೂಪಿಸಿದರು. ಜಾನಪದವು ತನ್ನದೇ ಆದ ಮೆಥಡಾಲಜಿ ಹಾಗೂ ವಸ್ತುವಿನೊಂದಿಗೆ ಒಂದು ವೈಜ್ಞಾನಿಕ ಶಿಸ್ತಾಗಿ ಬೆಳೆಯುವುದಕ್ಕೆ ಬೇಕಾದಂತಹ ಭದ್ರಬುನಾದಿ ಹಾಕಿಕೊಟ್ಟರು. ಇದರ ಜೊತೆಗೆ ವಿದ್ವಾಂಸರ ವಲಯದಲ್ಲಿ ಅದನ್ನು ಜನಪ್ರಿಯಗೊಳಿಸಲು, ತರುಣರನ್ನು ಈ ಕ್ಷೇತ್ರಕ್ಕೆ ಆಕರ್ಷಿಸಲು, ಇದೆಲ್ಲಕ್ಕಿಂತ ಹೆಚ್ಚಾಗಿ ಜಾನಪದವು ಇತರ ಅಧ್ಯಯನ ಕ್ಷೇತ್ರಗಳಿಗೆ

**ರಿಚರ್ಡ್ ಎಂ. ಡಾರ್ಸನ್**

ಸರಿಮಿಗಿಲಾದ ಕ್ಷೇತ್ರ ಎಂಬುದನ್ನು ಮನವರಿಕೆ ಮಾಡಿಕೊಡಲು ಅವರು ನಡೆಸಿದ ಪ್ರಚಾರ, ವಾದ ಹಾಗೂ ಯುದ್ಧ ಸಮವಾದ ಹೋರಾಟಗಳಿಗೆ ಕೊನೆಯೇ ಇಲ್ಲ.

ಸುಮಾರು 23ಕ್ಕೂ ಹೆಚ್ಚು ಜಾನಪದ ಗ್ರಂಥಗಳ ಸಂಪಾದನೆ, ವಿಶ್ವ ಜನಪದ ಕಥಾ ಸರಣಿಯಲ್ಲಿ 12 ದೇಶಗಳ ಕಥಾ-ಸಂಕಲನಗಳ ಪ್ರಧಾನ ಸಂಪಾದಕತ್ವ, 250ಕ್ಕೂ ಹೆಚ್ಚು ಜಾನಪದೀಯ ಲೇಖನಗಳು ಮತ್ತು ಪ್ರಬಂಧಗಳು ಇವು ಅವರು ೨ ರುಜುವಾತು. ಈ ಕ್ಷೇತ್ರದಲ್ಲಿ ಮಾಡಿರುವ ದೈತ್ಯಗಾತ್ರದ

ಅವರ ದೃಷ್ಟಿಯಲ್ಲಿ ಜಾನಪದವು ಒಂದು ಜೀವಂತವಾದ ಸ್ವತಂತ್ರವಾದ, ಅತ್ಯಂತ ಪರಿಷ್ಕೃತವಾದ ಜ್ಞಾನದ ಕ್ಷೇತ್ರ, ಗಂಭೀರ ಅಧ್ಯಯನಕ್ಕೆ ಯೋಗ್ಯವಾಗಿರು ವಂಥದ್ದು ಹಾಗೂ ಅತ್ಯಾಧುನಿಕವಾದದ್ದು. 'ಇಂದಿನ ಯಾತನಾ ಪೂರ್ಣ ಜಗತ್ತಿನಲ್ಲಿ ಇದು ಖಂಡಿತ ಅವಶ್ಯಕ. ಇದನ್ನು ಪ್ರತಿಯೊಂದು ಕಾಲೇಜಿನ ಕ್ಯಾಂಪಸಿನಲ್ಲಿ ಕಲಿಸ ಬೇಕು. ಇದು ಜಾನಪದವನ್ನು ಕುರಿತಾದ ನನ್ನ ದರ್ಶನ”2 ಎಂದು ಅವರು ಸ್ವಷ್ಟ ಪಡಿಸಿದ್ದಾರೆ.

ಡಾರ್ಸನ್ ಹುಟ್ಟು ಹಾಕಿದ ಕೆಲವು ಪರಿಕಲ್ಪನೆಗಳು ಜಾನಪದ ಅಧ್ಯಯನಕ್ಕೆ ಹೊಸ ತಿರುವು ತಂದುಕೊಟ್ಟವು. ಇಂಥವುಗಳಲ್ಲಿ ಬಹು ಪ್ರಸಿದ್ಧವಾದದ್ದು ಫೇಕ್ ಲೋರ್ (Fake lore) ಮತ್ತು ಫೋಕ್ ಲೋರ್ ಅಂಡ್ ಫೋಕ್ ಲೈಫ್‌ಗಳ ಪರಿಕಲ್ಪನೆ. “ಫೇಕ್ ಪರಿಕಲ್ಪನೆ ಹುಟ್ಟು ಹಾಕಿದ ಈತ 20ನೇ ಶತಮಾನದ ವಿಲಿಯಂ ಥಾಂಸ್ 23 ಎಂದು ಕರೆಯುವ ಮೂಲಕ ಪ್ರಸಿದ್ಧ ಜಾನಪದ ವಿದ್ವಾಂಸ ನಾದ ಮ್ಯಾಕ್ ಎಡ್ವರ್ಡ್ ಲೀಚ್ ಈತನನ್ನು ಗೌರವಿಸಿದ. ಇದು ಸಮಕಾಲೀನ ಜಾನಪದ ವಿದ್ವಾಂಸರಲ್ಲಿ ಡಾರ್ಸನ್ ಪಡೆದಿದ್ದ ಮನ್ನಣೆಗೆ ಸಾಕ್ಷಿ.

ಡಾರ್ಸನ್ ಅವರು ಜಾನಪದದ ಬಗ್ಗೆ ಸ್ಪಷ್ಟ ಪರಿಕಲ್ಪನೆ ಹೊಂದಿದ್ದ ಒಬ್ಬ ಅಪೂರ್ವ ವಿದ್ವಾಂಸರಾಗಿದ್ದರು. ಯಾವುದೇ ಸಂದರ್ಭದಲ್ಲಿನ ಜಾನಪದವನ್ನು ಗುರುತಿಸುವ ಒಂದು ವಿಶಿಷ್ಟ ಸಾಮರ್ಥ್ಯ ಅವರಿಗೆ ಇತ್ತು. ಜಗತ್ತಿನ ಬಹುತೇಕ ಎಲ್ಲ ದೇಶಗಳ ಜಾನಪದ ಅಧ್ಯಯನಗಳ ಬಗ್ಗೆ ಅವರಿಗೆ ಅಪಾರ ಮಾಹಿತಿ ಇತ್ತು. ಈ ಪ್ರತಿಯೊಂದು ಜಾನಪದವನ್ನೂ ಅಯಾ ದೇಶದ ರಾಜಕೀಯ, ಸಾಂಸ್ಕೃತಿಕ, ಭೌಗೋಳಿಕ ಹಿನ್ನೆಲೆಯಲ್ಲಿ ಅರ್ಥಮಾಡಿಕೊಂಡಿದ್ದರು. ಅಮೆರಿಕಾದಂಥದ ಧುನಿಕ ದೇಶದ, ಆಫ್ರಿಕಾದಂಥ ಆದಿವಾಸಿ ಸಂಸ್ಕೃತಿ ಪ್ರಧಾನ ದೇಶದ ಜಾನಪದ ಅಧ್ಯಯನವು ಒಡ್ಡುವ ಸವಾಲುಗಳನ್ನು ಸ್ವೀಕರಿಸಿ ಅಲ್ಲಿನ ಜಾನಪದಗಳನ್ನು ಸರಿಯಾದ ನೆಲೆಯಲ್ಲಿ ಅಧ್ಯಯನಿಸಿದ ವಿಶೇಷ ವಿದ್ವಾಂಸರಾಗಿದ್ದರು. ಇದಲ್ಲದೆ ಅವರು

ಸಾಂಪ್ರದಾಯಿಕ ಪರಿಕಲ್ಪನೆಯ ಜಾನಪದದ ಬಗ್ಗೆ ಎಷ್ಟು ವ್ಯಾಪಕವಾದ ಜ್ಞಾನವನ್ನು ಹೊಂದಿದ್ದರೋ ಆಧುನಿಕ ಪರಿಕಲ್ಪನೆಯ ಸಮಕಾಲೀನ ಜಾನಪದದ ಬಗ್ಗೆಯೂ ಹೊಂದಿದ್ದರು. ಈ ಎರಡೂ ಪರಿಕಲ್ಪನೆಗಳ ಖಚಿತ ಪರಿಕಲ್ಪನೆಗಳನ್ನು ಮೂಡಿಸುವ ಸಂಪಾದಿಸಿದ ಅಷ್ಟೇ ವ್ಯಾಪಕವಾದ ನೋಡಿ ಖ * ಅವರು ರಚಿಸಿದ ಇಲ್ಲವೇ ಮಾಡಿದರು, ಈ ಮಾತಿಗೆ ದೃಷ್ಟಿಯಿಂದ ಜಾನಪದವನ್ನು ಅವಶ್ಯ ಕೆಲಸವನ್ನು ಮಾಡಿದರು ಕೃತಿಗಳಾದ ಬ್ರಿಟಿಷ್ ಫೋಕ್‌ಲೋರಿಸ್ಟ್-ಎ ಹಿಸ್ಟರಿ, ಪೆಸೆಂಟ್ ಕಸ್ಟಮ್ಸ್ ಅಂಡ್ ಸ್ಯಾವೇಜ್ ಮಿಕ್ಸ್ ಇನ್ನೊಂದು ಕಡೆ ಅಮೆರಿಕನ್ ಫೋಕ್‌ಲೊ, ಫೋಕ್ ಲೋರ್ ಇನ್ ದಿ ಮಾಡರ್ನ್ ವರ್ ನಂತಹ ಕೃತಿಗಳು ಸಾಕ್ಷಿಯಾಗಿವೆ. ಈ ಹಿನ್ನೆಲೆಯಲ್ಲಿ ಡಾರ್ಸನ್‌ರ ಪ್ರತಿಪಾದನೆಗಳಿಗೆ ವಿಶೇಷ ಮಹತ್ವವಿದೆ. ಏಕೆಂದರೆ ಬಹುತೇಕ ವಿದ್ವಾಂಸರ ಪ್ರತಿಪಾದನೆಗಳು ಒಂದು ದೇಶ, ಒಂದು ಭಾಷೆ ಅಥವಾ ಒಂದು ಮ ಜನಾಂಗದ ಅಧ್ಯಯನಕ್ಕೆ ಸೀಮಿತವಾಗಿದ್ದು ಸಮಗ್ರ ಒಳನೋಟಗಳನ್ನು ಕೊಡಲು ಅಸಮರ್ಥ ವಾಗಿದ್ದರೆ, ತಮ್ಮ ವ್ಯಾಪಕ ಪ್ರವಾಸ, ಅಧ್ಯಯನ, ಕ್ಷೇತ್ರಕಾರ್ಯಗಳ ಆಧಾರದ ಮೇಲೆ ಡಾರ್ಸನ್ ಮಂಡಿಸುವ ವಿಚಾರಗಳು ಜಾನಪದ ವಿದ್ಯಾರ್ಥಿಗಳಿಗೆ ಬಹಳ ಉಪಯುಕ್ತವಾಗಿದ್ದು, ಜಾನಪದ ಅಧ್ಯಯನದಲ್ಲಿ ತಾಳಬೇಕಾದ ನಿಲುವುಗಳ ಬಗ್ಗೆ ಅನುಸರಿಸ ಬೇಕಾದ ವಿಧಾನಗಳ ಬಗ್ಗೆ ಒಳ್ಳೆಯ ಮಾರ್ಗದರ್ಶನ ನೀಡುತ್ತವೆ.

ಆಧುನಿಕ ಜಗತ್ತಿನಲ್ಲಿ ಜಾನಪದ ಅಥವಾ ನಗರ ಜನಪದ ಮತ್ತು ಜಾನಪದದ ಸಮಕಾಲೀನತೆ ಇವು ಅವರನ್ನು ವಿಶೇಷವಾಗಿ ಆಕರ್ಷಿಸಿದ ಕ್ಷೇತ್ರಗಳು. * ಅಮೆರಿಕನ್ ಜಾನಪದದ ಬಗ್ಗೆ ಅವರು ನಡೆಸಿದ ಆಳವಾದ ಅಧ್ಯಯನ ಇದಕ್ಕೆ ಕಾರಣವಿರಬಹುದು. ಜಾನಪದ ತಜ್ಞ ನಗರದಲ್ಲಿ ತನ್ನ ವ್ಯವಹಾರವನ್ನು ನಡೆಸಲು ಸಾಧ್ಯವೆ ! ನಗರದಲ್ಲಿ ಜನಪದರು ಇದ್ದಾರೆಯೆ ? ಇದೇ ಮೊದಲಾದ ಪ್ರಶ್ನೆಗಳನ್ನು ಹಾಕಿಕೊಂಡು ವಿಶ್ಲೇಷಿಸಿ ಅವರು ಕಂಡುಕೊಂಡ ಸಮಾಧಾನಗಳು ಜಾನಪದವನ್ನು ಹೊಸದೃಷ್ಟಿಯಿಂದ ನೋಡುವುದಕ್ಕೆ ಪ್ರೇರಣೆಯಾದವು. ತರುಣ ಸಂಶೋಧಕರು ಈ ಕ್ಷೇತ್ರದಲ್ಲಿ ತೊಡಗಿ ಅಪಾರ ಮಾಹಿತಿ ಸಂಗ್ರಹಿಸಿದರು. ಇದರಿಂದ, ಜಾನಪದವೇ ಇಲ್ಲವೆಂದು ಹೇಳುವ ಅಮೆರಿಕಾದಲ್ಲಿಯೂ ಸಹ ಯಾವುದೇ ಪ್ರಾಚೀನ ಪರಂಪರೆಗಳಲ್ಲಿರುವಷ್ಟೇ ಅಪಾರ ಪ್ರಮಾಣದ ಜಾನಪದವಿದೆ ಎಂಬ ಅಂಶ ಸ್ಪಷ್ಟವಾಯಿತು.

ಜಾನಪದವು ತನ್ನದೇ ಆದ ತತ್ವ, ಅಧ್ಯಯನ ವಿಧಾನಗಳನ್ನು ಹೊಂದಿರುವ ಕ್ಷೇತ್ರವಾಗಿರುವುದರ ಜೊತೆಗೆ ಅಂತರ್ ಶಿಸ್ತೀಯ ಸಂಬಂಧಗಳನ್ನು ಹೊಂದಿರುವ ಕ್ಷೇತ್ರ ಎಂಬುದು ಡಾರ್ಸನ್ ದೃಢವಾಗಿ ಪ್ರತಿಪಾದಿಸುತ್ತಿದ್ದ ವಿಚಾರವಾಗಿತ್ತು. ಬಹುತೇಕ ಜಾನಪದ ವಿದ್ವಾಂಸರು ಮಾನವಶಾಸ್ತ್ರ, ಸಮಾಜಶಾಸ್ತ್ರಗಳ ಹಿನ್ನೆಲೆಯಿಂದ ಬಂದವ ರಾದ್ದರಿಂದ ಅವರ ತೌಲನಿಕ ಅಧ್ಯಯನಗಳು ಈ ಎರಡು ಕ್ಷೇತ್ರಗಳಿಗೇ ಹೆಚ್ಚು

ಸಂಬಂಧಿಸಿರುತ್ತಿದ್ದವು. ಆದರೆ ಡಾರ್ಸನ್, ಇತಿಹಾಸ ವಿದ್ವಾಂಸರಾಗಿದ್ದ ಕಾರಣ ದಿಂದಲೇ ಶಿಷ್ಟ ಇತಿಹಾಸ ಮತ್ತು ಮೌಖಿಕ ಪರಂಪರೆಯ ಇತಿಹಾಸದ ಸಂಬಂಧ, ಕೊಳುಕೊಡುಗೆಗಳ ಅಧ್ಯಯನ ಅವರನ್ನು ಹೆಚ್ಚು ಆಕರ್ಷಿಸಿತು. ಈ ಬಗ್ಗೆ ಅವರು ಆಳವಾಗಿ ಅಭ್ಯಾಸ ಮಾಡಿದರು. ಅವರು ನಡೆಸಿದ ಆಫ್ರಿಕಾ, ಅಮೆರಿಕಾ ಜಾನಪದ ಅಧ್ಯಯನಗಳಲ್ಲಿ ಈ ಅಧ್ಯಯನದ ಛಾಯೆಯನ್ನು ಕಾಣಬಹುದು.

ಅಮೆರಿಕನ್ ಜಾನಪದ ಅಧ್ಯಯನಕ್ಕಿಂತ ಡಾರ್ಸನ್ ಅವರ ಕೊಡುಗೆ . The Scholary Study of Meal eal American folk- lore as an entity itself is only 30 years old and Darsan in its father, Son and holy ghost, Both that he has raised and laid-on 22) ಒಬ್ಬ ವಿಮರ್ಶಕ ಡಾರ್ಸನ್‌ರನ್ನ ಪ್ರಶಂಸಿಸಿದ್ದಾನೆ.

ಜಾನಪದವನ್ನು ಕುರಿತು ಪ್ರಚಲಿತವಿರುವ ವಿವಿಧ ಸಿದ್ಧಾಂತಗಳ ಬಗ್ಗೆ ಡಾರ್ಸನ್ನರು ತುಂಬ ವಿವರವಾದ ಹಾಗೂ ವಿಶ್ಲೇಷಣಾತ್ಮಕವಾದ ಅಧ್ಯಯನಗಳನ್ನು ಮಾಡಿದ್ದರು. ಚಾರಿತ್ರಿಕ ಭೌಗೋಳಿಕ ಸಿದ್ಧಾಂತ ಅವರಿಗೆ ಪ್ರಿಯವಾದ ಸಿದ್ಧಾಂತ ವಾಗಿತ್ತು. ಈ ಸಿದ್ಧಾಂತದ ಬಗ್ಗೆ ಬಂದ ಟೀಕೆಗಳಿಗೆಲ್ಲ ಲ್ಲ ಸಮಾಧಾನ ನೀಡುವಂತಹ ವಿವರಣೆಗಳನ್ನು ಅವರು ಕೊಟ್ಟರು. Henmispher c ಎಂಬುದು ಅವರದೇ ಹೊಸ ಸಿದ್ಧಾಂತ. ಅಮೆರಿಕಾದ ಇತಿಹಾಸವನ್ನು ಗಮನದಲ್ಲಿಟ್ಟುಕೊಂಡು ಮಂಡಿಸ ಲಾದ ಈ ಸಿದ್ಧಾಂತ ಹಳೆ ಮತ್ತು ಹೊಸ ಸ ಜಗತ್ತುಗಳ ಜಾನಪದವನ್ನು ಬೇರ್ಪಡಿಸಿ ನೋಡುತ್ತದೆ. ವಿವಿಧ ಜನಾಂಗಗಳ ಬೆರಕೆಯಿಂದ ಬೆರಕೆಯಿಂದ ಒಂದು ಸಮ್ಮಿಶ್ರ ಜನಾಂಗಗಳ ದೇಶವಾಗಿ ರೂಪುಗೊಂಡಿರುವ ಅಮೆರಿಕಾದಂತಹ ಹೊಸ ಜಗತ್ತಿನ ಜಾನಪದವನ್ನು ಅದರ ದೇಶೀಯ, ಜನಾಂಗಿಕ ಹಾಗೂ ಚಾರಿತ್ರಿಕ ಅಂಶಗಳ ದೃಷ್ಟಿಯಿಂದ ವಿಶ್ಲೇಷಿಸ ವಲಸೆಬಂದ ಜನಾಂಗವೊಂದರ ಜಾನಪದವು ಅಂತಿಮವಾಗಿ ರೂಪುಗೊಳ್ಳುವಾಗ ಅಲ್ಲಿ ನಡೆಯುವ ಹೊಂದಾಣಿಕೆ, ಸ್ವೀಕರಣ, ಸಾಂಸ್ಕೃತೀಕರಣ, ಉಳಿಕೆ, ಪುನರುಜ್ಜಿವನ ಹಾಗೂ ಹಿನ್ನಡಿ ಇವೇ ಮೊದಲಾದ ಪ್ರಕ್ರಿಯೆಗಳನ್ನು ಗಮನಿಸಬೇಕು ಮತ್ತು ಈ ಪರಂಪರೆಗಳನ್ನು ರೂಪಿಸಿದ ವಿಶೇಷ ಚಾರಿತ್ರಿಕ ಹಾಗೂ ಪರಿಸರಾತ್ಮಕ ಅಂಶಗಳನ್ನೂ ಅಧ್ಯಯನಿಸಬೇಕು ಎಂದು ಅವರು ಈ ಸಿದ್ಧಾಂತದಲ್ಲಿ ಪ್ರತಿಪಾದಿಸಿದ್ದಾರೆ. ವಿಶ್ವ ವಿದ್ಯಾಲಯಗಳಲ್ಲಿ ಒಂದು ಅಕಾಡೆಮಿಕ್ ಶಿಸ್ತಾಗಿ ಜಾನಪದ ಬೆಳೆಯಬೇಕು ಎಂಬುದು ಡಾರ್ಸನ್ ಅವರ ನಿಲುವಾಗಿತ್ತು. ಜಾನಪದಕ್ಕಾಗೇ ಪ್ರತ್ಯೇಕ ವಿಭಾಗವಿರಬೇಕು, ಜಾನಪದ ತಜ್ಞರು ಜಾನಪದ ತಜ್ಞರಾಗಿಯೇ ತಮ್ಮ ಕೊಡುಗೆ ನೀಡುವುದಕ್ಕೆ ವಿಶ್ವವಿದ್ಯಾಲಯಗಳು ಅವಕಾಶ ಮಾಡಿಕೊಡಬೇಕೇ ಹೊರತು ಬೇರೆ ವಿಭಾಗದ ಟೋಪಿಯಲ್ಲಿ ತಲೆಮರೆಸಿಕೊಳ್ಳುವುದಕ್ಕಲ್ಲ. ಯಾವುದೇ ವಿಶ್ವ

ವಿದ್ಯಾಲಯ ತನ್ನ ಶೈಕ್ಷಣಿಕ ಪಟ್ಟಿಯಲ್ಲಿ ಜಾನಪದದಂಥ ವರ್ಣಮಯ, ರೋಚಕ ವಾದ ಅಧ್ಯಯನ ವಿಭಾಗವಿದೆ ಎಂದು ಹೆಮ್ಮೆಯಿಂದ ಹೇಳಿಕೊಳ್ಳುವಂತಿರಬೇಕು. ಜಾನಪದವನ್ನು ಕಂಠೋಕ್ತವಾಗಿ ಪ್ರತಿಪಾದಿಸುವ ಪ್ರಾಚಾರ್ಯರುಗಳಿರಬೇಕು ಎಂದು ಡಾರ್ಸನ್ ಹೇಳುತ್ತಿದ್ದರು. ಜಾನಪದದ ಬಗ್ಗೆ ಅವರಿಗಿದ್ದ ಅಚಲ ಶ್ರದ್ಧೆ ಹಾಗೂ ಅಭಿಮಾನಗಳು ಈ ಮಾತುಗಳಲ್ಲಿ ವ್ಯಕ್ತವಾಗುತ್ತವೆ.

ಜಾನಪದ, ಡಾರ್ಸನ್ ಅವರ ಬದುಕಿನ ಉಸಿರಾಗಿತ್ತು ಎಂದರೆ ಉತ್ಪ್ರೇಕ್ಷ ಏನಲ್ಲ ಅವರು ಎಷ್ಟರ ಮಟ್ಟಿಗೆ ಒಬ್ಬ ಪೂರ್ಣಾವಧಿ ಜಾನಪದ ತಜ್ಞರಾಗಿದ್ದರೆಂದರೆ ತಮ್ಮ ಅರ್ಟಿರಿಯೊರೊಸಿಸ್ ಹಾಗೂ ತೆರೆದ ಹೃದಯದ ಶಸ್ತ್ರ ಚಿಕಿತ್ಸೆಯಂತಹ ಗಂಭೀರ ಸಂದರ್ಭವನ್ನೂ ಒಂದು ಯಶಸ್ವಿಯಾದ ಸಂಶೋಧನ ಕೆಲಸವಾಗಿ ಪರಿವರ್ತಿಸಿದರು. 1972ರಲ್ಲಿ ಅಮೆರಿಕನ್ ಜಾನಪದ ಸಂಸ್ಥೆಯ ವಾರ್ಷಿಕ ಸಭೆಯಲ್ಲಿ ಭಾಗವಹಿಸಿದ್ದಾಗ ಅವರಿಗೆ ಹೃದಯಾಘಾತವಾಯಿತು. ಇದರಿಂದ ಚೇತರಿಸಿಕೊಂಡ ಅವರು ಮಾರನೇ ವರ್ಷ ಪುನಃ ಅಮೆರಿಕನ್ ಜಾನಪದ ಸಂಸ್ಥೆಯ ವಾರ್ಷಿಕ ಸಭೆಯಲ್ಲಿ ಭಾಗವಹಿಸಿದರು. ಅಷ್ಟೆ ಅಲ್ಲದೆ ಚಿಕಿತ್ಸೆಗಾಗಿ ಆಸ್ಪತ್ರೆಯಲ್ಲಿದ್ದಾಗ ತಾವು ಪಡೆದ ಅನುಭವಗಳನ್ನೂ ಮತ್ತು ವಿವಿಧ ಜೀವನ ಶೈಲಿಗಳಿಗೂ ಒತ್ತಡದ ಬದುಕಿನಿಂದ ಹುಟ್ಟುವ ಹೃದ್ರೋಗಗಳಿಗೂ ಇರುವ ಸಂಬಂಧವನ್ನು ಚರ್ಚಿಸುವ Heart Disease and Folklore ಎಂಬ ಪ್ರಬಂಧವನ್ನು ಮಂಡಿಸಿದರು. ಇ ಇದೊಂದು ಚುರುಕಾದ ಹಾಗೂ ಮಾಹಿತಿ ಪೂರ್ಣವಾದ ಪ್ರಬಂಧ. ಇದರಲ್ಲಿ ಜಾನಪದವನ್ನು ಕುರಿತಂತೆ ಸ್ವಲ್ಪ ಮಟ್ಟಿಗೆ ಹಾಸ್ಯ on "Folklore lived, than Studied is the Surest preventive of Heart Disease" ಎಂದು ಪ್ರತಿಪಾದಿಸಿದರು. ಇತರ ರೋಗಿಗಳಿಂದ ಕೇಳಿದ ಶಸ್ತ್ರಚಿಕಿತ್ಸಾ ಪವಾಡಗಳ ಅದ್ಭುತಗಳನ್ನೂ ಈ ಲೇಖನದಲ್ಲಿ ತಿಳಿಸಿದ್ದಾರೆ. ಆಸ್ಪತ್ರೆಯ ಜಾನಪದ (ಮುಖ್ಯವಾಗಿ ವೈದ್ಯರು, ನರ್ಸುಗಳು ಮುಂತಾದ ವೃತ್ತಿ ಗುಂಪುಗಳಿಗೆ ಸಂಬಂಧಿಸಿದ್ದು)ಇನ್ನೂ ಆರಂಭಾವಸ್ಥೆಯಲ್ಲಿಯೇ ಇದ್ದ ಕಾಲದಲ್ಲಿ ಡಾರ್ಸನ್ ಸಂಗ್ರಹಿಸಿದ ಹೃದ್ರೋಗ ಜಾನಪದ ಉಲ್ಲೇಖನೀಯವಾದದ್ದು.

ಡಾರ್ಸನ್ನರ ಕಾರ್ಯ ಚಟುವಟಿಕೆಯ ಸಾಮರ್ಥ್ಯ ಅವರಿಗೆ ವಿವಿಧ ಗೌರವ ಗಳನ್ನು ದೊರಕಿಸಿಕೊಟ್ಟಿತು. ಇಂಡಿಯಾನಾ ವಿಶ್ವವಿದ್ಯಾಲಯದಲ್ಲಿ, ಸ್ಟಿತ್ ಥಾಂಸನ್ನರ ನಿವೃತ್ತಿಯ ನಂತರ ಅಲ್ಲಿನ ಜಾನಪದ ಸಂಸ್ಥೆಯ ನಿರ್ದೇಶಕರಾದರು. ಬಹಳಕಾಲ ಅವರು ಅಮೆರಿಕನ್ ಜಾನಪದ ಸಂಸ್ಥೆಯ (American Folklore Society) ಅಧ್ಯಕ್ಷರಾಗಿದ್ದರು. ಜನಾಂಗಿಕ ಶಾಸ್ತ್ರ ಮತ್ತು ಜಾನಪದ ಅಂತರ ರಾಷ್ಟ್ರೀಯ ಸಂಸ್ಥೆಯ ಉಪಾಧ್ಯಕ್ಷರೂ ಸೊಸೈಟಿ ಫಾರ್ ಅಮೆರಿಕನ್ ಫೋಕ್ ಲೋರ್‌ನ ಕಾರ್ಯಕಾರಿ ಮಂಡಳಿಯ ಅಧ್ಯಕ್ಷರೂ ಆಗಿದ್ದರು. ಪ್ರತಿಷ್ಠಿತವಾದ

ಗಗೆನ್ ಹಿಮ್ ಪ್ರಶಸ್ತಿಯನ್ನು ಮೂರು ಬಾರಿ ಪಡೆದಿದ್ದರು. ತಮಗೆ ದೊರತ ಹುದ್ದೆ ಗೌರವಗಳನ್ನು ಜಾನಪದ ಅಧ ಯನದ ಪ್ರವರ್ಧನೆಗಾಗಿ ಸಮರ್ಥವಾಗಿ ಬಳಸಿ ಕೊಂಡರು.

ಡಾರ್ಸನ್ 1978ರಲ್ಲಿ ಕಲ್ಕತ್ತೆಯಲ್ಲಿ ನಡೆದ ಜನಾಂಗಿಕ ಹಾಗೂ ಜಾನಪದ ಸಮಾವೇಶದಲ್ಲಿ ಭಾಗವಹಿಸುವುದಕ್ಕಾಗಿ ಭಾರತಕ್ಕೆ ಬಂದಿದ್ದರು. ಸಮ್ಮೇಳನ ಮುಗಿದ ನಂತರ ಮೈಸೂರಿಗೂ ಭೇಟಿ ನೀಡಿದ್ದ ಅವರು ಇಲ್ಲಿನ ಜಾನಪದಾಸಕಾರನು ಉದ್ದೇಶಿಸಿ ಹೇಳಿದ ಮಾತುಗಳು ತುಗಳು ಇವು : “ಅಚ್ಚ ಜಾನಪದದ ಸಾಗರದಂತಿರುವ  ಭಾರತದಲ್ಲಿ ಈ ಕ್ಷೇತ್ರದಲ್ಲಿ ನಡೆಸಬಹುದಾದ ಸಂಶೋಧನೆಗಳಿಗೆ ಅನನ್ನವೂ ಅನಂತವೂ ಆದ ಅವಕಾಶಗಳಿವೆ. ಭಾರತದಂಥ ಜಾನಪದೀಯ ರಾ ರಾಷ್ಟ್ರದಲ್ಲಿ ನಾನು ಜಾನಪದ ಅಧ್ಯಯನದ ಸ್ವರೂಪವನ್ನು ಹೇಳುವುದೆಂದರೆ ಅಭಾಸಕರವಾಗಿ ತೋರುತ್ತದೆ. ಇಲ್ಲಿಯ ನುರಿತ ಜಾನಪದ ತಜ್ಞರು ವಿಶ್ವದ ಇತರರಿಗೆ ಮಾರ್ಗದರ್ಶನ ಒದಗಿಸಬಲ್ಲರು. ಅದ್ದರಿಂದ ಈ ಕ್ಷೇತ್ರದಲ್ಲಿ ಆಸಕ್ತರು ತೀವ್ರವಾಗಿ ತೊಡಗಿಕೊಳ್ಳುವುದು ಶ್ರೇಯಸ್ಕರ6 ಮೈಸೂರು ವಿಶ್ವ ವಿದ್ಯಾನಿಲಯದ ಜಾನಪದ ವಸ್ತುಸಂಗ್ರಹಾಲಯವನ್ನು ವೀಕ್ಷಿಸಿ ಅಲ್ಲಿರುವ ಸಂದರ್ಶಕರ ವಹಿಯಲ್ಲಿ 'The Folklore Musum is breath taking' ಎಂದು ಮೆಚ್ಚು ನುಡಿ ಬರೆದಿದ್ದಾರೆ.

ಡಾರ್ಸನ್‌ರನ್ನು ಕುರಿತು ಕೆಲ್ಸಿ ಹೆರ್ಡರ್ ಎಂಬ ವಿಮರ್ಶಕ ಹೇಳಿರುವ "....He is Doing for folklore what kinsey did for sex, He made us aware of It He made it respectable, even enjoyable”7 ಮಾತುಗಳನ್ನು ಗಮನಿಸಿದರೆ ಸಾಕು ಜಾನಪದಕ್ಕೆ ಡಾರ್ಸನ್‌ರ ಕೊಡುಗೆ ಏನು ಎಂಬುದು ಸ್ಪಷ್ಟವಾಗುತ್ತದೆ.

ಜಾನಪದದ ಪರಿಕಲ್ಪನೆ, ಅಧ್ಯಯನ ಮಾರ್ಗಗಳು ಅಂತರ್ ಶಿಸ್ತೀಯ ಸಂಬಂಧ, ಕ್ಷೇತ್ರಕಾರ್ಯ, ಅಧ್ಯಯನದ ಪ್ರಯೋಜನ, ಜಾನಪದದ ಭವಿಷ್ಯ, ನಗರ ಜಾನಪದ. ಇವೇ ಮೊದಲಾದ ಹಲವಾರು ಮೂಲಭೂತ ವಿಷಯಗಳಿಗೆ ಸಂಬಂಧಿಸಿದಂತೆ ಡಾರ್ಸನ್ ಅವರ ವಿಚಾರಗಳು ಹಾಗೂ ಅವರ ಕೃತಿಗಳ ಪರಿಚಯವನ್ನು ಈ ಮುಂದಿನ ಪುಟಗಳಲ್ಲಿ ಕೊಡಲಾಗಿದೆ. ಡಾರ್ಸನ್ ಬರೆದಿರುವ ಮತ್ತು ಸಂಪಾದಿಸಿರುವ ಕೃತಿಗಳ ಪೀಠಿಕೆ, ಪ್ರಸ್ತಾವನೆಗಳಲ್ಲಿ ಮತ್ತು ಹಲವಾರು ಲೇಖನ, ಉಪನ್ಯಾಸಗಳಲ್ಲಿ ಅವರ ವಿಚಾರಗಳು ಹರಡಿಹೋಗಿವೆ. ಇವುಗಳ ಒಟ್ಟು ಪರಿಶೀಲನೆಯಿಂದ ನಮಗೆ ತಿಳಿಯುವುದು ಇಷ್ಟು ಡಾರ್ಸನ್‌ರಂತೆ ಜಾನಪದಕ್ಕಾಗಿ ಸರ್ವತೋಮುಖವಾಗಿ ದುಡಿದ ಮತ್ತೊಬ್ಬ ವ್ಯಕ್ತಿ ಜಾನಪದ ಅಧ್ಯಯನದ ಚರಿತ್ರೆಯಲ್ಲಿ ಸಿಗುವುದಿಲ್ಲ.

**ಅಡಿಟಿಪ್ಪಣಿಗಳು :**


1. Alan Dundes. "ways of Studying Folklore" P. 49 American Folklore, ed: Tristram coffin. Higgin Bothems Ltd, Madras 1969.are
2. R. M. Darson. "The Academic future of Folk lore" Folklore, Selected Essays. Indiana University Press, Bloomington /Londan 1972
3. Mac Edward leach. "The men who made Folk lore a Scholarly discipline" P. 25. American Folklore Ed. Tristram Coffin. Higgin Bothems Ltd. Madras 1969.
4. R. M.Darson(ed) Folklore in the Modern wolrd The Hague Mouton, 1978
5. R. M. Darson "The Academic future of folklore" Folklore Selected essays.
6. ಡಾ. ನಂ. ತಪಸ್ವೀಕುಮಾರ್ ಜಾನಪದ ಅಧ್ಯಯನದ ಸಂಕ್ಷಿಪ್ತ ಇತಿಹಾಸ ಕನ್ನಡ ಸಾಹಿತ್ಯ ಪರಿಷತ್ತು.

   1981
7. Folklore. Selected essays g

# ಡಾರ್ಸನ್ ಅವರ ಜಾನಪದ ಪರಿಕಲ್ಪನೆಗಳು

---

ಜಾನಪದ ಎಂದರೇನು ? ಜಾನಪದ ಅಧ್ಯಯನದ ಸ್ವರೂಪವೇನು? ಎಂಬ ಪ್ರಶ್ನೆ ಗಳ ವಿಶ್ಲೇಷಣೆಯೇ ಡಾರ್ಸನ್ನರ ಬಹುತೇಕ ಕ ಬರಹಗಳ ವಿಷಯ. ಇದು, ಜಾನಪದದ ಬಗ್ಗೆ ಸ್ಪಷ್ಟ ಅರಿವು ಮೂಡಿಸುವುದಕ್ಕಾಗಿ ಡಾರ್ಸನ್ ಮಾಡುತ್ತಿದ್ದ ಪ್ರಯತ್ನಗಳಿಗೆ ಸಾಕ್ಷಿ.

ಡಾರ್ಸನ್ ವ್ಯಾಖ್ಯಾನದಲ್ಲಿ ಜಾನಪದವೆಂದರೆ ಶತಶತಮಾನಗಳಿಂದ ಬಾಯಿ ಮಾತಿನ ಮೂಲಕ ಹರಿದು ಬಂದಿರುವ ಮಖಿಕ ಪರಂಪರೆ. ಜಾನಪದದ ಪರಿಕಲ್ಪನೆ ಯನ್ನು ಸ್ವಲ್ಪ ಹಿಗ್ಗಿಸಿದರೆ ಅದು ಧಾನ್ಯದ ಕಣಜ, ಬ್ರೆಡ್ ಮಾಡುವ ಅಚ್ಚು ಲಾದ ವಸ್ತು ರೂಪಗಳನ್ನೂ, ಮೌಖಿಕವಾಗಿ ಮಖಿಕವಾಗಿ ಹರಿದು ಬಂದ ಕಥೆ, ಹಾಡು, ಹೇಳಿಕೆ, ನಂಬಿಕೆ ಅಥವಾ ಗ್ರಾಮೀಣ ಹಬ್ಬ, ಕುಟುಂಬ ಪದ್ಧತಿಗಳು. ರೈತಾಪಿವರ್ಗದ ಆಚರಣೆ ಗಳು ಇಂಥವನ್ನೆಲ್ಲ ಒಳಗೊಳ್ಳುತ್ತದೆ. ಈ ಎಲ್ಲದರ ಸಮಾನ ಅಂಶವೆಂದರೆ ಅವುಗಳ ಪಾರಂಪರಿಕತೆ, ಜಾನಪದವನ್ನು ಜಾನಪದವೆಂದು ಪರಿಗಣಿಸಬೇಕಾದರೆ ಅದು ಅನೇಕ ತಲೆಮಾರುಗಳ ಕಾಲ ಜನರ ಬಾಯಲ್ಲಿ ಉಳಿದಿರಬೇಕು ಇಲ್ಲಿ ಜಾನಪದದ ಎರಡು ಮುಖ್ಯ ಅಂಶಗಳಾದ ಮೌಖಿಕತೆ ಮತ್ತು ಪಾರಂಪರಿಕತೆ ಎಂಬುದರಲ್ಲಿ ಡಾರ್ಸನ್ನರು ಪಾರಂಪರಿಕತೆಗೆ ಹೆಚ್ಚು ಒತ್ತು ಕೊಟ್ಟಂತೆ ಕಾಣುತ್ತದೆ. ಆದರೆ ಬಹುತೇಕವಾಗಿ ಅವರು ಜಾನಪದವನ್ನು ವ್ಯಾಖ್ಯಾನಿಸುವುದು ಮೌಖಿಕವಾದ ಪಾರಂಪರಿಕ ಸಾಹಿತ್ಯ ಎಂದೇ.

ಡಾರ್ಸನ್ ಕಾಲಕ್ಕಾಗಲೇ ಜಾನಪದದ ಬಗ್ಗೆ ಇದ್ದ ಹಳೆಯ ಪರಿಕಲ್ಪನೆ ದೂರ ನಾಗುತ್ತ ಬಂದಿತ್ತು. ಜಾನಪದವೆಂದರೆ ಕೇವಲ ಗತಕಾಲದ ಉಳಿಕೆ, ಗ್ರಾಮೀಣ

ಸಂಸ್ಕೃತಿಗೆ ಮಾತ್ರ ಸೀಮಿತವಾದದ್ದು, ಸಮಾಜದ ಕೆಳ ಸ್ಥರಗಳಲ್ಲಷ್ಟೇ ಇರುವಂಥದ್ದು ಎಂಬ ಅಭಿಪ್ರಾಯ ಬದಲಾಗಿತ್ತು.

ಜಾನಪದವು ಸಮಕಾಲೀನ, ಅದು ಇಂದಿಗೆ, ಇಂದಿನ ನಗರ ಕೇಂದ್ರಗಳಿಗೆ ಕೈಗಾರಿಕಾ ಕ್ರಾಂತಿಗೆ ಹಾಗೂ ಇಂದಿನ ಲೋಕದೃಷ್ಟಿಗೆ ಸಂಬಂಧಿಸಿದೆ. ಈ ಅರ್ಥದಲ್ಲಿ ಜಾನಪದವು ಸಕ್ರಿಯವಾಗಿದೆಯೇ ಹೊರತು ನಿಂತ ನೀರಾಗಿಲ್ಲ ಎಂಬ ಅಭಿಪ್ರಾಯ ಮೂಡಿತ್ತು. ಈ ಅಭಿಪ್ರಾಯದ ನೆಲೆಯ ಮೇಲೆ ಡಾರ್ಸನ್ ಅವರು, ಜಾನಪದ" (Folk) ಎಂಬುದು ಗ್ರಾಮೀಣ ಜನಪದರಿಗಷ್ಟೇ ಸೀಮಿತವಾಗಬೇಕಿಲ್ಲ. ಅದು ಪರಂಪರೆಯತ್ತ ಮುಖಮಾಡಿದ ಅನಾಮಧೇಯ ಜನಸಮೂಹಗಳನ್ನು ಸೂಚಿಸುತ್ತದೆ. ಎಂದರು. 2 ಗ್ರಾಮೀಣ ಜನ ನಗರಗಳತ್ತ ಚಲಿಸಿದರೆ ಅವರು ಜಾನಪದತ್ವವನ್ನೇನೂ ಕಳೆದುಕೊಳ್ಳುವುದಿಲ್ಲ. ಅದೇ ರೀತಿ ನಗರಗಳಲ್ಲಿರುವ ಜನರನ್ನು ಜನಪದ ಗುಂಪು ಗಳೆಂದು ಕರೆಯದಿರುವುದೂ ಆಗದು. ಏಕೆಂದರೆ ಅವರ ಬದುಕೂ ಸಹ ಪಾರಂಪರಿಕ ಮುದ್ರೆಯ ನಡವಳಿಕೆ, ಉಡುಪು, ಅಡುಗೆ ಪದ್ಧತಿ, ಅಭಿವ್ಯಕ್ತಿ ವಿಧಾನ ಹಾಗೂ ಲೋಕದರ್ಶನಗಳಿಂದ ರೂಪುಗೊಂಡಿರುತ್ತದೆ. ಆದ್ದರಿಂದ ಜಾನಪದಕ್ಕೆ ಅಂಟಿರುವ ಪ್ರಾಚೀನತೆ' (Antiquarianism)ಯ ಸೋಂಕನ್ನು ನಿವಾರಿಸುವುದಕ್ಕಾಗಿ ನಾವು ಜಾನಪದವನ್ನು ಮರುವ್ಯಾಖ್ಯಾನಿಸುವುದು ಒಳಿತು ಎಂದು ಡಾರ್ಸನ್ ಅಭಿಪ್ರಾಯಪಟ್ಟರು. ಜನಪ್ರಿಯ ಪ್ರಾಚೀನ ನಡಾವಳಿಗಳು ಎಂಬ ಪದಕ್ಕೆ ಮಖಿಕ ಸಂಸ್ಕೃತಿ' (oral culture) ಅಥವಾ ಪಾರಂಪರಿಕ ಸಂಸ್ಕೃತಿ (Tradi- tional culture) ಅಥವಾ ಅನಧಿಕೃತ ಸಂಸ್ಕೃತಿ(un-official culture) ಎಂಬ ಪದಗಳನ್ನಿಟ್ಟುಕೊಂಡರೆ ನಾವು ಜಾನಪದತಜ್ಞರ ನಿಜವಾದ ಕಾಳಜಿಗಳಿಗೆ ಹತ್ತಿರ ಬರುತ್ತೇವೆ. ಪರಂಪರೆಯೂ ಪದೇ ಪದೇ ನವೀಕರಣಗೊಳ್ಳುತ್ತಿರುತ್ತದೆ. ಅನಧಿಕೃತ ಸಂಸ್ಕೃತಿ ಎಂಬುದು ಚರ್ಚು, ರಾಜ್ಯ, ವಿಶ್ವವಿದ್ಯಾಲಯ, ವೃತ್ತಿ, ಸಂಘ ಸಂಸ್ಥೆ, ಲಲಿತಕಲೆ ಹಾಗೂ ವಿಜ್ಞಾನಗಳಂತಹ ಉಚ್ಚ, ಗೋಚರ, ಸಾಂಸ್ಥಿಕ ಸಂಸ್ಕೃತಿ ಗಳಿಗೆ ಪ್ರತಿಯಾದದ್ದು. ಇದು ತನ್ನದೇ ಆದ ಅಭಿವ್ಯಕ್ತಿ ವಿಧಾನಗಳನ್ನು ಹೊಂದಿರು ಇದೆ ಆದಾಗ್ಯೂ ಅದು ಅಧಿಕೃತ ಸಂಸ್ಕೃತಿಯಂತೆಯೇ ತನ್ನ ಕಾಲದ ಮನೋಧರ್ಮ ಗಳನ್ನು ಪ್ರತಿಬಿಂಭಿಸುತ್ತದೆ. ಏಕೆಂದರೆ ಇವೆರಡೂಒಂದೇ ಇತಿಹಾಸಕಾಲದಲ್ಲಿ ನೆಲೆಯೂರಿ ದಂತವು."3 ಎಂದು ಡಾರ್ಸನ್ ವ್ಯಾಖ್ಯಾನಿಸಿದರು. ಜಾನಪದವನ್ನು ಈವಿವರಣೆಯ ನೆಲೆಯಲ್ಲಿ ಅಧ್ಯಯನಿಸತೊಡಗಿದಾಗ ನಗರ-ಹಳ್ಳಿ, ಅಕ್ಷರಸ್ಥ, ಅನಕ್ಷರಸ್ಥ ಪ್ರಾಚೀನ- ಆಧುನಿಕ ಮುಂತಾದ ಯಾವುದೇ ಭೇದಗಳನ್ನು ಗಣನೆಗೆ ತೆಗೆದುಕೊಳ್ಳದೆ ತಮ್ಮದೇ ಆದ ಸಾಂಸ್ಕೃತಿಕ ಪರಂಪರೆಗಳನ್ನು ಹೊಂದಿರುವ ಪ್ರತಿಯೊಂದು ಗುಂಪನ್ನೂ, 'ಜನಪದ' ಎಂಬ ವ್ಯಾಖ್ಯೆಗೆ ಒಳಪಡಿಸಬಹುದು. 'ಜನಪದ'ಕ್ಕೆ ಅಲನ್ ಡಂಡಸ್ ನೀಡಿರುವ ವ್ಯಾಖ್ಯಾನವೂ ಈ ವ್ಯಾಖ್ಯಾನಕ್ಕೆ ಸಂವಾದಿಯಾಗಿರುವುದನ್ನು ಗಮನಿಸಬಹುದು.

ಜಾನಪದವು ಸಮಕಾಲೀನ ಎಂಬುದು ಡಾರ್ಸನ್ನರ ದೃಢವಾದ ಪ್ರತಿಪಾದನೆ, ಜಾನಪದ ಸಮಕಾಲೀನ `ಎಂಬು ವಿಚಾರವನ್ನು ಡಾರ್ಸನ್‌ರು ಅಮೆರಿಕಾದ ಇತಿಹಾಸ ಗತಿ ಯಲ್ಲಿ ಬದಲಾಗುತ್ತ ಬಂದ ಜೀವನಶೈಲಿಗಳನ್ನು ಅಭ್ಯಾಸಮಾಡುವಾಗ ಕಂಡುಕೊಂಡರು. * ವಿಚಾರಗಳು ಉತ ಉಳಿದ ಕಡೆಯ ಜಾನಪದಗಳಿಗೂ ಸರಿಯ ಸರಿಯಾಗಿ ಅನ್ವಯವಾಗುವುದ ರಿಂದ ಅವುಗಳನ್ನು ಗಮನಿಸಬಹುದು: ಅಮೆರಿಕನ್ ಜೀವನಶೈಲಿಗಳನ್ನು ಧಾರ್ಮಿಕ, ಪ್ರಜಾಸತ್ತಾತ್ಮಕ, ಆರ್ಥಿಕ ಹಾಗೂ ಉದಾರ ಎಂದು ವಿಂಗಡಿಸಿಕೊಂಡು ನೋಡಿದಾಗ ಪ್ರತಿಯೊಂದು ಅವಧಿಯ ಜಾನಪದವು ಆಯಾ ಅವಧಿಯಲ್ಲಿ ಪ್ರಧಾನವಾಗಿದ್ದ ಜೀವನ ಶೈಲಿಯನ್ನು ಪ್ರತಿಬಿಂಭಿಸುವುದನ್ನು ಕಾಣಬಹುದು. ಉದಾಹರಣೆಗೆ, ಧಾರ್ಮಿಕ ಯುಗದಲ್ಲಿ ದೈವದ ಪ್ರಭುತ್ವ ಹಾಗೂ ದೆವ್ವ, ಮಾಟಗಾತಿಯರಬಗ್ಗೆ ಮತ್ತು ಮಂತ್ರ ಮಾಟಗಳ ಬಗ್ಗೆ ನಂಬಿಕೆ ಪ್ರಧಾನವಾಗಿದೆ. ಪ್ರಜಾಸತ್ತಾತ್ಮಕ ಯುಗದಲ್ಲಿ ಅನೇಕ ಜನ ನಾಯಕರು ಸೃಷ್ಟಿಯಾದರು. ಆರ್ಥಿಕ ಜೀವನ ಶೈಲಿಯಲ್ಲಿ ಕೌಬಾಯ್, ಲಂಬ ಜಾಕ್, ಗಣಿಕಾರ, ರೈಲ್ ರೋಡ್ ಇಂಜಿನಿಯರ್ ಇವೇ ಮೊದಲಾದ ವೃತ್ತಿಗಳ ಜಾನಪದ ಹುಟ್ಟಿಕೊಂಡಿತು. ಈ ಕೊಂಡಿತ್ತು. ಈ ಸಿದ್ಧಾಂತದ ಪ್ರಕಾರ ಒಂದು ಅವಧಿಯಲ್ಲಿ ಜೀವಂತ ವಾಗಿದ್ದ ಹಾಗೂ ಕ್ರಿಯಾಶೀಲವಾಗಿದ್ದ ಜಾನಪದವು ಅದರ ಮುಂದಿನ ಹಂತದಲ್ಲಿ ಮಸುಕಾಗುತ್ತದೆ. ಅಥವಾ ಹಿನ್ನೆಲೆಗೆ ಸರಿಯುತ್ತದೆ. ಹದಿನೇಳನೇ ಶತಮಾನದಲ್ಲಿ ೨ ಮ್ಯಾಜಿಸ್ಟ್ರೇಟರು, ಕಾಲೇಜು ಪ್ರೆಸಿಡೆಂಟರಿಂದಾರಂಭಿಸಿ ರೈತರು, ನಾವಿಕರವರೆಗೆ ಸಮಾಜದಾದ್ಯಂತ ವ್ಯಾಪಿಸಿದ್ದ ಮಾಟದ ನಂಬಿಕೆಗಳು ಈಗ ಯಾವುದೋ ಮೂಲೆ ಯಲ್ಲಿ ಮಾತ್ರ ಕಾಣಸಿಗುತ್ತವೆ. "ನಮ್ಮ ಕಾಲದಲ್ಲಿ ಕೌಬಾಯ್ ಜನಪ್ರಿಯ ಸಿನೆಮಾ ಗಳ ನಾಯಕನಾಗಿದ್ದಾನೆಯೇ ಹೊರತು ಜನಪದ ಕಥೆ ಗೀತೆಗಳ ಪ್ರಸಾರಕನಾಗಿಲ್ಲ. ಅದಕ್ಕೆ ಬದಲು ಈಗಿನ ಯುವಜನತೆ ಮಾದಕದ್ರವ್ಯಗಳ ಜಾನಪದ (Druglore) ಹಾಗೂ ರಾಕ್ ನೃತ್ಯೋತ್ಸವಗಳನ್ನು ಸೃಷ್ಟಿಸಿದೆ....ಹೀಗೆ ಜಾನಪದದ ಸಮಕಾಲೀನತೆ ಎಂಬ ಅಂಶ ಡಾರ್ಸನ್‌ರ ಪರಿಕಲ್ಪನೆಯಲ್ಲಿ ಪ್ರಧಾನತೆ ಪಡೆದುಕೊಂಡಿರುವುದನ್ನು ಗಮನಿಸಬಹುದು.

**ಜಾನಪದ ಮತ್ತು ಜನಪದ ಜೀವನ**

ಜಾನಪದ ತಜ್ಞರು ಶಾಬ್ದಿಕ ಪ್ರಕಾರಗಳತ್ತಲೇ ಹೆಚ್ಚು ಗಮನಕೇಂದ್ರೀಕರಿಸಿ ಜನಪದ ಕುಶಲ ಕೆಲಸಗಾರರ ಉತ್ಪನ್ನಗಳನ್ನು ಕಡೆಗಣಿಸಿದ್ದಾರೆ, ಆದ್ದರಿಂದ ಮೌಖಿಕ ಜಾನಪದವೂ ಸೇರಿದಂತೆ ಪಾರಂಪರಿಕ ಸಂಸ್ಕೃತಿಯ ಎಲ್ಲ ಪ್ರಕಾರಗಳನ್ನೂ ಒಳ ಗೊಳ್ಳುವ ಜನಪದಜೀವನ ಎಂಬ ಪರಿಕಲ್ಪನೆಯೇ ಹೆಚ್ಚು ಸೂಕ್ತ ಎಂಬ ಒಂದು ವಾದ ತಲೆಯೆತ್ತಿತ್ತು. ಈ ವಾದದಲ್ಲಿನ ಸತ್ವವನ್ನ ಡಾರ್ಸನ್ ಗ್ರಹಿಸಿದರು. ಜಾನಪದ ಎಂಬ ಪದವನ್ನು ಮಸುಕುಗೊಳಿಸುವಷ್ಟು ಪ್ರಭಾವಶಾಲಿಯಾಗಿ ಈ ಪರಿಕಲ್ಪನೆ

ಬೆಳೆಯುತ್ತಿರುವುದನ್ನು ಕಂಡು ತಮ್ಮ ಅಧ್ಯಯನವನ್ನೂ ಜಾನಪದ ಮತ್ತು ಜನಪದ ಜೀವನ (Folklore and Folklife) ಎಂಬ ಸಂಯುಕ್ತ ಪರಿಕಲ್ಪನೆಯ ಪ್ರಕಾರ ಮುಂದುವರೆಸಿದರು.

ಮತ್ತು ಜನಪದ ಜೀವನ ಎಂಬ ಶೀರ್ಷಿಕೆಯು ಒಳಗೊಳ್ಳುವ ವಿಷಯ ಗಳನ್ನು ಅವರು ನಾಲ್ಕು ದೊಡ್ಡ ಗುಂಪುಗಳಲ್ಲಿ ಅಳವಡಿಸುತ್ತಾರೆ. ಇದರಲ್ಲಿ ಮೊದಲನೆ ಯದು ಮೌಖಿಕ ಸಾಹಿತ್ಯ (oral literature) ಇದನ್ನು ಶಾಬ್ಲಿಕ ಕಲೆ (verbal art) ಅಥವಾ ಅಭಿವ್ಯಕ್ತಿ ಸಾಹಿತ್ಯ ಎಂತಲೂ ಕರೆಯಬಹುದು. ಇದರಲ್ಲಿ ಪುನರಾವೃತ್ತಿಯ ವಿನ್ಯಾಸವನ್ನುಳ್ಳ ಮಾತು, ಹಾಡು, ಹಾಗೂ ಧ್ವನಿರೂಪದ ಪಾರಂಪ ರಿಕ ಅಭಿವ್ಯಕ್ತಿಗಳನ್ನು ಗುರುತಿಸಬಹುದು. ಜನಪದಕಥೆ ಇದರ ಪ್ರಧಾನಗುಂಪು. ಇದರಲ್ಲಿ ಮತ್ತೆ ಅನೇಕ ಉಪವಿಭಾಗಗಳಿವೆ. ಇನ್ನೊಂದು ಮುಖ್ಯ ಗುಂಪು ಹಾಡು. ಗಾದೆ, ಒಗಟುಗಳಂತಹ ಸಂಕ್ಷಿಪ್ತ ರೂಪದ ಪ್ರಕಾರಗಳೂ ಇದರಲ್ಲಿ ಸೇರುತ್ತವೆ. ಈ ಮೌಖಿಕ ಸಾಹಿತ್ಯ ಅನೇಕ ಸಂದರ್ಭಗಳಲ್ಲಿ ಲಿಖಿತ ಸಾಹಿತ್ಯವನ್ನೂ ಪ್ರವೇಶಿಸಬಹುದು.

ಜನಪದ ಜೀವನದಲ್ಲಿ ಒಳಪಡುವ ಎರಡನೆಯ ಗುಂಪು ವಸ್ತು ಸಂಸ್ಕೃತಿ (Material culture). ಇದರಲ್ಲಿ ಯಾಂತ್ರೀಕೃತ ಕೈಗಾರಿಕೆಯ ಪೂರ್ವದಲ್ಲಿ ಅಸ್ತಿತ್ವದಲ್ಲಿದ್ದ ಮತ್ತು ಇದರೊಂದಿಗೆ ಮುಂದುವರೆದಿರುವ ಮೂರ್ತವಾದ ಭೌತಿಕ ಅಂಶಗಳು ಸೇರುತ್ತವೆ. ಇವುಗಳ ತಂತ್ರ, ಕುಶಲತೆ, ಸೂತ್ರ, ವಿಧಾನಗಳು ತಲೆಮಾರಿ ನಿಂದ ತಲೆಮಾರಿಗೆ ಪರಂಪರಾಗತವಾಗಿ ಬರುತ್ತದೆ, ಮತ್ತು ಶಾಕ ಸಾಹಿತ್ಯ ದಂತೆಯೇ ಸಾಂಪ್ರದಾಯಿಕ ಪರಂಪರೆಯ ಹಾಗೂ ವೈಯಕ್ತಿಕವಾದ ವ್ಯತ್ಯಾಸಗಳಿಗೆ ಈಡಾಗುತ್ತವೆ. ಮನೆ, ಉಡುಪು, ಉಪಕರಣ, ಪೀಠೋಪಕರಣ, ಅಡುಗೆ, ಪಾತ್ರೆ ಇತ್ಯಾದಿಗಳು ವಸ್ತು ಸಂಸ್ಕೃತಿಯ ವಿದ್ಯಾರ್ಥಿ ಪರಿಶೀಲಿಸಬೇಕಾದ ಅಂಶಗಳು, ಆದಿವಾಸಿ ಸಂಸ್ಕೃತಿಯಲ್ಲಿ ಎಲ್ಲವೂ ಪಾರಂಪರಿಕ ಹಾಗೂ ಕೈಯಿಂದ ಮಾಡಿದ್ದು. ಆದರೆ ಉಚ್ಚ ನಾಗರಿಕತೆಗಳಲ್ಲಿ ಗ್ರಾಮೀಣ ಮತ್ತು ಪರಂಪರಾಗತ ಜೀವನ ಶೈಲಿಗಳ ಮೇಲೆ ಕೈಗಾರಿಕಾ ಸಂಸ್ಕೃತಿಯ ನೆರಳು ಮುಸುಕಿರುತ್ತದೆ.

ಮೂರನೆಯದು ಸಾಮಾಜಿಕ ಜನಪದ ಪದ್ಧತಿ (Social folk cultur) ಇದು ಮೌಖಿಕ ಸಾಹಿತ್ಯ ಮತ್ತು ವಸ್ತು ಸಂಸ್ಕೃತಿ ದಿಕ್ಕುಗಳತ್ತ ಮಾಡಿರುವಂಥದ್ದು, ಇಲ್ಲಿ ವೈಯಕ್ತಿಕ ಕುಶಲತೆ ಮತ್ತು ನಿರ್ವಹಣೆಗಿಂತ ಸಮೂಹ ನಡವಳಿಕೆಯತ್ತ ಹೆಚ್ಚು ಒತ್ತು. ಕೌಟುಂಬಿಕ, ಸಾಮಾಜಿಕ ಆಚರಣೆಗಳು, ಸಂಪ್ರ ದಾಯಗಳು, ನಂಬಿಕೆಗಳು ಈ ಗುಂಪಿನಲ್ಲಿ ಬರುತ್ತವೆ. ಈ ಆಚರಣೆಗಳಿಗೆ ಆಳವಾಗಿ ಬೇರೂರಿದ ನಂಬಿಕೆಗಳೊಂದಿಗೆ ನಿಕಟ ಸಂಬಂಧವಿದೆ. ಕೆಲವು ಪದ್ಧತಿಗಳು ಸ್ಥಳೀಯ ಮತ್ತು ಆಯಾ ಸಂಸ್ಕೃತಿಗೇ ವಿಶಿಷ್ಟ, ಸಾಕಷ್ಟು ಮಾಂತ್ರಿಕ ಮತ್ತು ಪಾವಿತ್ರ್ಯ ಗುಣ ಗಳನ್ನು ಮೈಗೂಡಿಸಿಕೊಂಡ ಪದ್ಧತಿಗಳು ಧಾರ್ಮಿಕ ಆಚರಣೆಗಳಾಗುತ್ತವೆ.

ಸಾರ್ವಜನಿಕ ನಿರೂಪಣೆ ಮತ್ತು ಮನರಂಜನೆಗಳಲ್ಲಿ ಬೇರೆ ಬೇರೆಯ ಸಾಮಾಜಿಕ ಘಟಕ ಗಳು ಭಾಗವಹಿಸಿದಾಗ ಅದು ಹಬ್ಬ ಅಥವಾ ಉತ್ಸವ ಆಗುತ್ತದೆ. ಇದರಲ್ಲಿ ಸಂಗೀತ, ನೃತ್ಯ, ವೇಷಭೂಷಣ, ಮೆರವಣಿಗೆ ಮುಂತಾದ ಪ್ರಕಾರಗಳೆಲ್ಲ ಬೆರೆಯುತ್ತವೆ. ಕೆಲವು ಆಟ ಮತ್ತು ಕ್ರೀಡೆಗಳೂ ಇದೇ ಗುಂಪಿಗೆ ಸೇರುತ್ತವೆ. ಸಾಮಾಜಿಕ ಜನಪದ ಪದ್ಧತಿಯ ಧಾರ್ಮಿಕ ಅಂಶಗಳು ಸ್ಥಾಪಿತ ಚರ್ಚಿನ ಕಡೆಗಿರುವ ಪೂಜಾ ವಿಧಾನಗಳನ್ನು ಒಳ ಗೊಳ್ಳುತ್ತವೆ. ಎಷ್ಟೋ ಸಂದರ್ಭಗಳಲ್ಲಿ ಜನಪದ ಧರ್ಮ ಮತ್ತು ಜನಪದ ವೈದ್ಯ ಬೆರೆತುಹೋಗುತ್ತವೆ.

ನಾಲ್ಕನೆಯ ಗುಂಪು ಅಭಿನಯ ಕಲೆಗಳದು (Performing Arts) ಇದು ಪರಂಪರಾಗತವಾದ ಹಾಡು, ನೃತ್ಯ, ನಾಟಕಗಳನ್ನು ಒಳಗೊಳ್ಳುತ್ತದೆ. ಕಥೆ ಹಾಗೂ ಹಾಡು ಹೇಳುವುದನ್ನೂ ಅಭಿನಯವೆನ್ನಬಹುದಾದರೂ ಅವು ತುಂಬ ಅನೌಪ ಚಾರಿಕವಾಗಿರುತ್ತವೆ. ಆದರೆ ನೃತ್ಯವೇ ಮೊದಲಾದ ಅಭಿನಯಗಳು, ಜನಪದ ವಾದ್ಯ ವೇಷಭೂಷಣಗಳೊಂದಿಗೆ ಪ್ರಜ್ಞಾಪೂರ್ವಕವಾಗಿ ಮಾಡುವಂಥ ಅಭಿನಯಗಳು. ಇವು ಒಂದರೊಡನೊಂದು ಬೆರೆಯುತ್ತವೆ (ಉದಾಹರಣೆಗೆ ನೃತ್ಯದೊಂದಿಗೆ ಹಾಡು ಮತ್ತು ಒಟ್ಟಿಗೆ ನಿರೂಪಿತವಾಗುತ್ತವೆ.

ಡಾರ್ಸನ್ ಈ ವರ್ಗೀಕರಣ ಜಾನಪದದ ಬಹುತೇಕ ಎಲ್ಲ ಅಭಿವ್ಯಕ್ತಿ ಪ್ರಕಾರ ಗಳನ್ನೂ ಒಳಗೊಂಡಿದೆ ಮತ್ತು ತುಂಬ ಸಮರ್ಪಕವಾಗಿ ಅವುಗಳನ್ನು ವಿಂಗಡಿಸ ಲಾಗಿದೆ. ಇಷ್ಟಾದರೂ ಸ್ವತಃ ಡಾರ್ಸನ್ ಅವರಿಗೆ ತಾವು ಮಾಡಿರುವ ಈ ವರ್ಗೀಕರಣ ಪರಿಪೂರ್ಣವಾದದ್ದು ಎಂಬ ಭ್ರಮೆಯೇನೂ ಇರಲಿಲ್ಲ. ಇಲ್ಲಿ ನಿರೂಪಿತವಾಗಿರುವ ನಾಲ್ಕೂ ವಿಭಾಗಗಳು ಎಲ್ಲವನ್ನೂ ಒಳಗೊಂಡಿಲ್ಲ ಅಥವಾ ಅವು ಒಂದರಿಂದೊಂದು ಸ್ಪಷ್ಟವಾಗಿ ಬೇರ್ಪಡುವಂಥವೂ ಅಲ್ಲ' ಎಂದು ಸ್ಪಷ್ಟ ಪಡಿಸುತ್ತಾರೆ. ಉದಾಹರಣೆಗೆ, ಪಾರಂಪರಿಕವಾದ ಸಂಜ್ಞೆಗಳನ್ನು ಯಾವ ಗುಂಪಿಗೆ ಸೇರಿಸಬೇಕು ? ಇವುಗಳನ್ನು ಜನಪದ ಭಾಷೆಯ ಅಡಿ ಸೇರಿಸಬಹುದು. ಏಕೆಂದರೆ ಇದೂ ಸಹ ಒಂದು ವಿಧದ ಸಂವಹನ ಪದ್ಧತಿ, ಆದರೆ ಸಂಜ್ಞೆಯನ್ನು ಶಾಕ ಜಾನಪದದಲ್ಲಿ ಸೇರಿಸುವ ವಿರೋಧಭಾಸ ಇಲ್ಲಿದೆ. ಹಬ್ಬ ಮತ್ತು ಅಭಿನಯ ಕಲೆಗಳ ನಡುವೆ ದೃಢವಾದ ಗೆರೆ ಎಳೆಯುವುದು ಹೇಗೆ ? ನಂಬಿಕೆ ಮತ್ತು ಮೂಢನಂಬಿಕೆಗಳನ್ನು ಪ್ರತ್ಯೇಕ ಗುಂಪೆಂದು ಪರಿಗಣಿಸಬೇಕೆ ಅಥವಾ ಐತಿಹ್ಯ ಪದ್ಧತಿ ಹಾಗೂ ಜನಪದ ಧರ್ಮದಲ್ಲಿ ಸೇರಿಸಬೇಕೆ ? ಈ ರೀತಿಯ ಸಂದಿಗ್ಧತೆಗೆ ಕೊನೆಯಲ್ಲ ಎಂದು ಡಾರ್ಸನ್ ಮನಗಂಡಿದ್ದರು.

**ನಕಲಿ ಜಾನಪದ (Fake-Lore)**

ಜಾನಪದದಲ್ಲಿ ಅಸಲಿ ಯಾವುದು ನಕಲಿ ಯಾವುದು, ಇವೆರಡನ್ನು ಯಾವ ಅಳತೆ ಗೋಲಿನಿಂದ ಬೇರ್ಪಡಿಸಿಕೊಳ್ಳಬೇಕು ಎಂಬ ಜಿಜ್ಞಾಸೆ ಜಾನಪದದ ಅಧ್ಯಯನದ

ಆರಂಭದಿಂದಲೂ ನಡೆದಿದೆ. ಜಾನಪದದ ಪರಿಶುದ್ಧತೆಯನ್ನು ಕಾಪಾಡಿಕೊಳ್ಳುವಬಗ್ಗೆಯೂ ಜಾನಪದ ವಿದ್ವಾಂಸರು ತಲೆಕೆಡಿಸಿಕೊಂಡಿದ್ದಾರೆ. ಪ್ರತಿಯೊಬ್ಬರೂ ಅವರವರದೇ ವಿಧಾನದಲ್ಲಿ ಜಾನಪದದ ಅಸಲಿ ಮತ್ತು ನಕಲಿತನಗಳನ್ನು ವಿವರಿಸಿದ್ದಾರೆ.

ತಿದ್ದಿ ಬರೆದು ಕೃತ್ರಿಮಗೊಳಿಸಿ ಜಾನಪದವೆಂಬ ಹೆಸರಿನಲ್ಲಿ ಪ್ರಚಾರ ಮಾಡುವ ಜಾನಪದವನ್ನು ಡಾರ್ಸನ್ನರು 1950ರಲ್ಲಿ Fakelore ಎಂದು ಕರೆದರು. ಹೀಗೆ ತಿದ್ದಿ ಬರೆಯುವವರ ದೃಷ್ಟಿಯಲ್ಲಿ ಜಾನಪದವೆಂದರೆ ಅಸಂಬದ್ಧ, ಅನಾಕರ್ಷಣೀಯ, ಪ್ರಾಚೀನ, ವಿಚಿತ್ರ ಮತ್ತು ವಕ್ರ, ಆದ್ದರಿಂದ ಅದು ಜನಸಾಮಾನ್ಯರಿಗೆ ಪ್ರಿಯವೆನ್ನಿಸ ಬೇಕಾದರೆ ಆಕರ್ಷಕವಾಗುವಂತೆ ಮಾಡಬೇಕು ಇದಕ್ಕಾಗಿ ಅದರಲ್ಲಿ ಅಸಂಬದ್ಧ, ಅಶ್ಲೀಲವೆನಿಸಿದ್ದನ್ನು ತೆಗೆದು ಹಾಕಿ ಕೆಲವು ಅಂಶಗಳನ್ನು ಮರುಜೋಡಣೆಮಾಡಿ ಆಕರ್ಷಕವೆನಿಸುವುದಕ್ಕೆ ಬೇಕಾದ ಹೊಸ ಅಂಶಗಳನ್ನು ಸೇರಿಸಬೇಕು ಎಂಬ ಗ್ರಹಿಕೆ ಇದೆ. ಹೀಗೆ ಮಾಡುವವರು ಇದನ್ನು ಹಣದ ಲಾಭಕ್ಕಾಗಿ ಮಾಡುತ್ತಾರೆಯೇ ಹೊರತು ಅಧ್ಯಯನದ ಹಿತದೃಷ್ಟಿಯಿಂದಲ್ಲ. ಇಂಥವರು ಜಾನಪದವನ್ನು ನಮ್ಮದೇ ಆದ ಶೈಲಿಯಲ್ಲಿ ಹೇಳುವುದಕ್ಕೆ ಮೂಲಕಥೆಗಾರರಷ್ಟೇ ನಮಗೂ ಹಕ್ಕಿದೆ ಎಂದು ಹೇಳಿ ತಮ್ಮ ಕ್ರಿಯೆಯನ್ನು ಸಮರ್ಥಿಸಿಕೊಳ್ಳುತ್ತಾರೆ. “ಜಾನಪದವೆಂದರೆ ಯಾರು ಬೇಕಾದರೂ ತಮಗಿಷ್ಟ ಬಂದಂತೆ ಬಳಸಿಕೊಳ್ಳಬಹುದು ಎಂಬ ತಪ್ಪು ಭಾವನೆಯೇ ಇಂಥ ತಿದ್ದು ಪಡಿಗೆ ಕಾರಣ ಎಂದು ಹೇಳುತ್ತ, ಇಂಥವರು ಇಷ್ಟೇ ಸಲೀಸಾಗಿ ನಮ್ಮ ಶಿಷ್ಟ ಸಾಹಿತಿಗಳ ಕೃತಿಗಳಲ್ಲಿ ಹಸ್ತಕ್ಷೇಪ ಮಾಡಬಲ್ಲರೆ” ಎಂದು ಡಾರ್ಸನ್ ಪ್ರಶ್ನಿಸುತ್ತಾರೆ. (ಒಬ್ಬ ಸೃಜನಶೀಲ ಸಾಹಿತಿಯ ಕೃತಿಯ ಸ್ವಂತಿಕೆಯ ಬಗ್ಗೆ ನಿಮಗೆ ಎಷ್ಟು ಗೌರವ ವಿದೆಯೋ ಅಂಥದ್ದೇ ಗೌರವ ಜಾನಪದ ಸಾಮಗ್ರಿಯ ಬಗೆಗೂ ಇರುವುದು ಅಗತ್ಯ ಎಂಬ ಧ್ವನಿ ಇಲ್ಲಿದೆ) ದೆ ಹಾಗಾದರೆ ಜಾನಪದದಲ್ಲಿ ಬದಲಾವಣೆಗಳೇ ನಡೆಯುವುದಿಲ್ಲವೆ, ಅದಕ್ಕೆ ಅವಕಾಶವಿಲ್ಲವೇ ಎಂಬ ಪ್ರಶ್ನೆ ಏಳುತ್ತದೆ. ಇಂಥ ಪ್ರಶ್ನೆಗೆ ಡಾರ್ಸನ್ ನೀಡುವ ಸಮಾಧಾನ ಹೀಗಿದೆ. “ಅಸಲಿ ಜಾನಪದ ನಿರೂಪಕರು ಸಹ ತಮ್ಮ ನಿರೂಪಣೆಯಲ್ಲಿ ಬದಲಾವಣೆಗಳನ್ನು ಮಾಡುತ್ತಲೇ ಇರುತ್ತಾರೆ. ಪೂರ್ವತಯಾರಿ ಮತ್ತು ಅಭ್ಯಾಸಗಳಿಲ್ಲದ ಮೌಖಿಕ ಪರಂಪರೆಯಲ್ಲಿ ಬದಲಾವಣೆಗಳು ತೀರ ಸಹಜ. ಆದರೆ ಹಣಕ್ಕಾಗಿ ಬರೆಯುವ ಬರಹಗಾರ ಪ್ರಜ್ಞಾಪೂರ್ವಕವಾಗಿ ಮುದ್ರಣ ಮಾಧ್ಯಮವನ್ನು ಬಳಸುತ್ತಾನೆ. ಯುವ ಲೆಕ್ಕಾಚಾರದ ಇವನು ಜನಪದರ ಧ್ವನಿಯನ್ನು ಪ್ರತಿನಿಧಿಸುವುದಿಲ್ಲ. ಬದಲಾಗಿ ಸಮೂಹ ಸಂಸ್ಕೃತಿ ಯನ್ನು ಪ್ರತಿನಿಧಿಸುತ್ತಾನೆ. ಸೃಜನಶೀಲ ಕಲಾವಿದರೂ ಸಹ ಜಾನಪದವನ್ನು ತಮ್ಮ ಕಲ್ಪನೆಗೆ ತಕ್ಕಂತೆ ಬಳಸಿಕೊಳ್ಳುತ್ತಾರೆ. ಅವರಿಗೂ ಮತ್ತು ನಕಲಿ ಜಾನಪದ ಕರ್ತರಿಗೂ ಇರುವ ವ್ಯತ್ಯಾಸವೇನೆಂದರೆ ಸೃಜನಶೀಲ ತಾವು ಶುದ್ಧ ಜಾನಪದವನ್ನೇ ನೀಡುತ್ತಿದ್ದೇವೆ ಎಂದು ಹೇಳಿಕೊಳ್ಳುವುದಿಲ್ಲ”, ಜನಪದ ಕಥೆ ಮತ್ತು

ಹಾಡುಗಳಿಗೆ ರಂಜನೀಯ ಉಲ್ಲಾಸದಾಯಕ ಎಂಬ ವಿಶೇಷಣಗಳನ್ನು ಬಳಸುವ ಬಗ್ಗೆ ಎಚ್ಚರವಾಗಿರಿ ಎಂದು ಎಚ್ಚರಿಸುವ ಡಾರ್ಸನ್ನರು ಬಹುತೇಕ ಜಾನಪದವೆಲ್ಲವೂ ರೂಕ್ಷ ಮತ್ತು ಅಶ್ಲೀಲವಾಗಿಯೇ ಇರುತ್ತದೆ, ಸಾಮಾನ್ಯ ಓದುಗನಿಗೆ ಅಸಂಬದ್ಧವಾಗಿ ಹಾಗೂ ಮಂಕಾಗಿಯೇ ಕಾಣುತ್ತದೆ. ಜಾನಪದವನ್ನು ಮುದ್ರಣ ಮಾಧ್ಯಮದ ಬದಲಾಗಿ ಮೌಖಿಕವಾಗಿ ಪ್ರಸಾರ ಮಾಡುವುದಕ್ಕೆ ಅದರ ರೂಕ್ಷತೆ ಮತ್ತು ಅಶ್ಲೀಲತೆ ಗಳೂ ಒಂದು ಕಾರಣ, ಬಹುತೇಕ ಬಹುತೇಕ ಜಾನಪದವೆಲ್ಲವೂ ಮುದ್ರಿಸಲಾರದಂಥದ್ದೆ ಆಗಿದೆ. ಎಂದು ಅಭಿಪ್ರಾಯಪಡುತ್ತಾರೆ. ಒಟ್ಟಿನಲ್ಲಿ ಹೇಳುವುದಾದರೆ Fake lore ಎಂಬುದು ಅನಾಮಧೇಯ ಪರಂಪರೆಯಿಂದ ಬಂದದ್ದಲ್ಲ, ಂದದಲ್ಲ, ಬದಲು ಕೆಲವು ನಿದಿ ನಿರ್ದಿಷ್ಟ ವ್ಯಕ್ತಿಗಳು ಸ್ವಂತ ಲಾಭಕ್ಕಾಗಿ ಅದನ್ನು ಜಾನಪದವೆಂಬ ಹೆಸರಿನಲ್ಲಿ ಮರುಸೃಷ್ಟಿ ಮಾಡಿರುವಂಥದ್ದು. ಬಹುತೇಕ ಸಂದರ್ಭಗಳಲ್ಲಿ ಜಾನಪದದ ತಪ್ಪು ಗ್ರಹಿಕೆಯೇ ನಕಲಿ ಜಾನಪದದ ಸೃಷ್ಟಿಗೆ ಕಾರಣವಾಗಿರುತ್ತದೆ.

ಅಮೆರಿಕಾದಲ್ಲಿ ನಡೆದಿದ್ದ ಜಾನಪದ ಅಧ್ಯಯನದ ರೀತಿಯೇ ಡಾರ್ಸನ್ನರ ಫೇಕ್‌ಲೋ ಪರಿಕಲ್ಪನೆಗೆ ಕಾರಣವಾಯಿತು. ಯೂರೋಪ್, ಏಷಿಯಾ, ಉತ್ತರ ಹಾಗೂ ದಕ್ಷಿಣ ಅಮೆರಿಕಾಗಳಲ್ಲಿ ರಾಷ್ಟ್ರಭಕ್ತಿ ಮತ್ತು ಸ್ವಂತಿಕೆಯ ಪ್ರಜ್ಞೆಯ ಕಾರಣ ವಾಗಿ ತಮ್ಮ ದೇಶದ ಜಾನಪದಗಳಲ್ಲಿ ಆಸಕ್ತಿ ಮೊಳೆಯಿತು. ಐರೆಂಡ್,  ಫಿನ್ಲೆಂಡ್ ಗಳಂತಹ ತೀರಾ ಚಿಕ್ಕ ರಾಷ್ಟ್ರಗಳೂ ಸಹ ಸರ್ಕಾರದ ಬೆಂಬಲದಿಂದಾಗಿ ಜಾನಪದ ಅಧ್ಯಯನದ ನೇತಾರರೆನಿಸಿಕೊಂಡವು. ನಾಜಿ ಜರ್ಮನಿ ಹಾಗೂ ಸೋವಿಯತ್ ರಷಿಯಾಗಳು ತಮ್ಮ ರಾಜಕೀಯ ಧೋರಣೆಗಳ ಪ್ರಚಾರಕ್ಕೆ ಜಾನಪದ ಸಮರ್ಥ ಸಾಧನವಾಗಿದೆ ಎಂದು ಕಂಡುಕೊಂಡದ್ದು ಅಲ್ಲಿನ ಜಾನಪದ ಅಧ್ಯಯನಗಳಿಗೆ ಪ್ರೇರಣೆ ಯಾಯಿತು. ಆದರೆ ಅಮೆರಿಕಾದ ಪರಿಸ್ಥಿತಿ ತೀರಾ ಭಿನ್ನವಾಗಿತ್ತು ಇಲ್ಲಿ ಫಿಟ್ಲಂಡಿ ನಂತಹ ತೀವ್ರ ಪಾಂಡಿತ್ಯವಾಗಲೀ, ರಷಿಯಾದಂತಹ ಉತ್ಕಟ ಪ್ರಚಾರವಾಗಲಿ ಬೆಳೆದಿರ ಲಿಲ್ಲ. ಆದರೆ ಸಮೃದ್ಧಿಯ ನೆಲೆಯಾಗಿರುವ ಅಮೆರಿಕಾ ಸಮೃದ್ಧವಾದ ಜಾನಪದ ವನ್ನೂ ಹೊಂದಿರಲೇಬೇಕು. ಬೇಕು. ಜಗತ್ತಿನಲ್ಲೇ ಅಗ್ರಗಣ್ಯರೆಂಬ ಹೆಸರು ಪಡೆದಿರುವಾಗ ಅಮೆರಿಕನ್ನರು ತಮ್ಮ ಜಾನಪದ ಪರಂಪರೆಯನ್ನೂ ಜಗತ್ತಿಗೆ ಹೆಮ್ಮೆಯಿಂದ ಸಾರು ವಂತಿರಬೇಕು ಎಂಬ ಹಂಬಲದಿಂದ ಜಾನಪದವನ್ನು ಪ್ರಚಾರಮಾಡುವ ಒಂದು ಪಂಥವೇ ಸೃಷ್ಟಿಯಾಯಿತು. ತಮ್ಮ ಮಕ್ಕಳಿಗೆ ತಮ್ಮ ದೇಶದ ಶೂರರ ಕಥೆ ಪುರಾಣ ಗಳನ್ನೇ ಕೊಡಬೇಕು ಎಂಬ ಆಲೋಚನೆಯಿಂದ ಈ ಬೇಡಿಕೆಯನ್ನು ಪೂರೈಸುವ ಬರಹಗಾರರು ಹುಟ್ಟಿಕೊಂಡರು. ಪಾಲ್ ಬುನಿಯನ್ ನಂತಹ ಜನಪದ ನಾಯಕರು ಸೃಷ್ಟಿಯಾದರು. “ಜನಪದ ಗಾಯಕರೂ, ಜಾನಪದ ಎಂಬ ಹೆಸರಿನಲ್ಲಿ ಸ್ಥಳೀಯ ಬಣ್ಣ, ಹಾಸ್ಯ, ಮನೋಧರ್ಮ ಹಾಗೂ ನಾಸ್ಟೆಲ್ಲಿಯಂಗಳಿಂದ ಕೂಡಿದ ವೃತ್ತಾಂತ ಗಳೂ, ಕಲಿತ ಜನಪದ ನೃತ್ಯ, ಜನಪದ ಕಲೆಗಳೂ ಜನಪ್ರಿಯವಾದವು. ವಾಸ್ತವ

ವಾಗಿ ಇದೆಲ್ಲವೂ ಕೃತಕ ಸೃಷ್ಟಿಯ ಜಾನಪದ. ಅಮೆರಿಕೆಯ ಇತಿಹಾಸ ಹಾಗೂ ಅದರ ವಿಶಿಷ್ಟ ಸನ್ನಿವೇಶ ಮತ್ತು ಪರಿಸರದಲ್ಲಿ ರೂಪುಗೊಂಡಿರುವ ಜಾನಪದ ಬೇರೆಯೇ ಇದೆ. ಅಮೆರಿಕೆಯ ಜಾನಪದ ಎಂದಾಗ ಅಭ್ಯಾಸ ಮಾಡಬೇಕಾಗಿರುವುದು ಇಂತಹ ಜಾನಪದವನ್ನು ಎಂಬುದನ್ನು ಡಾರ್ಸನ್ ತೋರಿಸಿಕೊಟ್ಟರು.

1. R. M. Darsan : American folklore, Jaico impression Madras, 1966. ಇದರ ಮುನ್ನುಡಿಯಲ್ಲಿ
2. R. M. Darsan (Ed.) Folklore in the modern World. Mountain publishers: the Haque, Paris, 1978, p. 23.
3. ಅದೇ ಪುಟ 23.
4. Dundee "A Folk is any group of people what so ever who share at least are common linking factor....it could be a common occupation, lan- guage or Religion.... What is important is that a groupe formed for What ever reason will have some traditions which calls its own....
5. R. M. Darsan (Ed.) Folklore and Folklife-an Introduction. The University of Chicago press, Chicago and London. 1972. p. 5.
6. R. M. Darsan-American folklore.
7. ಅದೇ ಪುಟ 3.
8. ಅದೇ ಪುಟ 2 ಮತ್ತು 3.

# ಜಾನಪದ ಅಧ್ಯಯನದ ಸ್ವರೂಪವನ್ನು ಕುರಿತು ಡಾರ್ಸನ್ ವಿಚಾರಗಳು

ಜಾನಪದವು ಒಂದು ಪರಿಷ್ಕೃತವಾದ ಅಧ್ಯಯನದ ಕ್ಷೇತ್ರವಾಗಿ ರೂಪುಗೊಳ್ಳ ಬೇಕು ಎಂಬುದಕ್ಕಾಗಿ ನಿರಂತರವಾಗಿ ಡಾರ್ಸನ್ ಶ್ರಮಿಸಿದರು. ಇದಕ್ಕೆ ಸಂಬಂಧ ಪಟ್ಟಂತೆ ಜಾನಪದ ಅಭ್ಯಾಸಿಗಳು ಹೊಂದಿರಬೇಕಾದ ಅರ್ಹತೆ ಹಾಗೂ ಅಧ್ಯಯನದ ವಿಧಿ ವಿಧಾನಗಳ ಬಗ್ಗೆ ಅವರು ಸಾಕಷ್ಟು ವಿಚಾರ ಮಾಡಿದ್ದರು.

ಜಾನಪದ ತಜ್ಞ ಯಾರು ಎಂಬ ಬಗ್ಗೆ ಅವರು ಒಂದು ಕಡೆ ಹೀಗೆ ಹೇಳುತ್ತಾರೆ. "ಜಾನಪದವನ್ನು ವಿವರಿಸುವುದಕ್ಕಿಂತ ಜಾನಪದ ತಜ್ಞನನ್ನು ವಿವರಿಸುವುದು ಸುಲಭ. ಜಾನಪದ ತಜ್ಞನು ನೆರೆಹೊರೆಯ ಸಾಹಿತ್ಯ, ಭಾಷೆ, ಮಾನವಶಾಸ್ತ್ರ, ಭಾಷಾಶಾಸ್ತ್ರ, ಚರಿತ್ರೆ ಹಾಗೂ ಸಮಾಜಶಾಸ್ತ್ರಗಳ ಇಲಾಖೆಗಳಿಂದ ತನ್ನನ್ನು ಬೇರ್ಪಡಿಸುವಂತಹ ಕೆಲವು ನಿರ್ದಿಷ್ಟ ಕುಶಲತೆಗಳನ್ನು ಹೊಂದಿರುತ್ತಾನೆ. ಇದಾವ ಕುಶಲತೆಯೂ ತನ್ನಷ್ಟಕ್ಕೆ ವಿಶಿಷ್ಟವಲ್ಲದಿರಬಹುದು. ಆದರೆ ಒಟ್ಟಾಗಿ ಅವು ಒಂದು ನಿರ್ದಿಷ್ಟ ವಿಧದ ಪಂಡಿತನ ಚಹರೆಯನ್ನು ವಿವರಿಸುತ್ತವೆ.1

ಯಾವುದೇ ಶಾಸ್ತ್ರದ ಕಲಿಕೆಗೆ ಬೇಕಾಗುವಂಥ ವಿಶೇಷ ಆಸಕ್ತಿ ಮತ್ತು ತರಬೇತಿ ಗಳು ಜಾನಪದಕ್ಕೂ ಅಗತ್ಯ. ಅರ್ಹತೆ ಪಡೆದ ಜಾನಪದ ವಿದ್ಯಾರ್ಥಿ ಜಾನಪದದವರ ಗುಂಪಿನಲ್ಲಿ ಪರಿಗಣಿಸಲ್ಪಡುತ್ತನಾದರೂ ಅವನು ಅಧ್ಯಯನಿಸುವ ಸಾಮಗ್ರಿಗಳ ದೃಷ್ಟಿ ಯಿಂದ ಇತರ ಶಿಸ್ತುಗಳವರೊಂದಿಗೂ ವಿಚಾರ ವಿನಿಮಯ ನಡೆಸಬೇಕಾಗುತ್ತದೆ.

ಜಾನಪದ ತಜ್ಞರು ಪರಿಣತಿ ಪಡೆದಿರಬೇಕಾದ 12 ಅಂಶಗಳನ್ನು ಡಾರ್ಸನ್ ಹೇಳುತ್ತಾರೆ. ಅವುಗಳೆಂದರೆ ಕ್ಷೇತ್ರಕಾರ್ಯ, ಪತ್ರಾಗಾರಗಳ ಬಳಕೆ, ಜನಪದ ವಸ್ತು ಸಂಗ್ರಹಾಲಯಗಳ ಉಪಯೋಗ, ಗ್ರಂಥಸೂಜಿಗಳ ಮೇಲೆ ಪ್ರಭುತ್ವ, ಜಾನಪದ ಸೂಚಿಗಳ ಬಳಕೆ, ಉಲ್ಲೇಖ ನೀಡಿಕೆ, ಪರಿಭಾಷೆ, ಮುದ್ರಿತ ಆಕರಗಳ ಬಳಕೆ, ಅಂತರ ರಾಷ್ಟ್ರೀಯ ವಿಚಾರ ವಿನಿಮಯ, ಜಾನಪದ ಅಧ್ಯಯನದ ಚರಿತ್ರೆ, ಇವೇ ಮೊದಲಾದವುಗಳು.

ಜಾನಪದ ಅಧ್ಯಯನದ ಅಂತರರಾಷ್ಟ್ರೀಯ ಸ್ವರೂಪದ ಕಾರಣವಾಗಿ ಜಾನಪದ ತಜ್ಞನು ಕುಶಲತೆ ಪಡೆಯಬೇಕಾದ ಇನ್ನೂ ಕೆಲವು ಅಂಶಗಳನ್ನು ಡಾರ್ಸನ್ ಸ್ಪಷ್ಟ ಪಡಿಸುತ್ತಾರೆ. "ವೃತ್ತಿಪರ ಜಾನಪದ ತಜ್ಞರು ತಮ್ಮದೇ ನೆಲ ಉಳುತ್ತ ಕೂರು ವಂತಿಲ್ಲ. ಏಕೆಂದರೆ ಸ್ಥಳೀಯ ಅಂಶಗಳೆಲ್ಲವೂ ಅಂತಿಮವಾಗಿ ಜಗತ್ತಿನ ವಿಸ್ತಾರಕ್ಕೆ ನಮ್ಮನ್ನು ಒಯ್ಯುತ್ತವೆ. ಇತರೆಡೆಗಳಲ್ಲಿಯೂ ಇವರು ಎದುರಿಸುವಂಥದೇ ಸಮಸ್ಯೆ ಗಳನ್ನು ಎದುರಿಸುತ್ತಿರುವುದರಿಂದ ಜಗತ್ತಿನ ಇತರ ಜಾನಪದ ತಜ್ಞರೊಡನೆ ಆತ ಸಂಪರ್ಕವೇರ್ಪಡಿಸಿಕೊಳ್ಳುವುದು ಅಗತ್ಯ. ಅಂತರರಾಷ್ಟ್ರೀಯ ಸಂಘಟನೆ, ಸಮಾವೇಶ, ವಿಚಾರ ಸಂಕಿರಣಗಳಲ್ಲಿ ಭಾಗವಹಿಸುವ ಮೂಲಕ ; ವೈಯಕ್ತಿಕ, ವೃತ್ತಿಪರ ಹಾಗೂ ಸಾಂಸ್ಥಿಕ ಸಂಪರ್ಕ ಬೆಳಸಿಕೊಳ್ಳುವ ಮೂಲಕ ಜಾನಪದ ಅಧ್ಯಯನದ ಮತ್ತು ಇತಿಹಾಸದ ಪರಿಚಯ ಹೊಂದಿರಬೇಕು.2 ಇದಲ್ಲದೆ ಇನ್ನೂ ಇತರ ಕುಶಲತೆಗಳೂ ಅಗತ್ಯ. ಸಾಹಿತ್ಯಕ ಪ್ರಯೋಜನಗಳನ್ನು ಪರಿಶೀಲಿಸುವುದಕ್ಕಾಗಿ ಸಾಹಿತ್ಯದೊಂದಿಗೆ, ಸಂಸ್ಕೃತಿಗೂ ಜಾನಪದಕ್ಕೂ ಇರುವ ಸಂಬಂಧವನ್ನು ಅರಿಯುವ ದೃಷ್ಟಿಯಿಂದ ಮಾನವ ಶಾಸ್ತ್ರದೊಂದಿಗೆ, ಮೌಖಿಕ ಪರಂಪರೆಯ ಚಾರಿತ್ರಿಕ ಮಾನ್ಯತೆಯನ್ನು ತಿಳಿಯುವುದ ಕ್ಕಾಗಿ ಚರಿತ್ರೆಯೊಂದಿಗೆ....ಹೀಗೆ ಗಮನಿಸಬೇಕಾಗಿ ಬರುವ ಇನ್ನಿತರ ಕ್ಷೇತ್ರಗಳೆಂದರೆ ಸಂಗೀತಶಾಸ್ತ್ರ, ಭೂಗರ್ಭಶಾಸ್ತ್ರ, ಮನೋವಿಜ್ಞಾನ ಇತ್ಯಾದಿ. ಇವುಗಳಲ್ಲಿ ಸಾಹಿತ್ಯಕ, ಮಾನವಶಾಸ್ತ್ರೀಯ ಮತ್ತು ಚಾರಿತ್ರಿಕ ದೃಷ್ಟಿಕೋನಗಳು ಪ್ರಧಾನವಾಗಿರುವಂಥವು. * ೧. ಜಾನಪದ ತಜ್ಞನ ತರಬೇತಿಗೆ ಇಷ್ಟೆಲ್ಲ ಅಗತ್ಯಗಳಿದಾದ್ದಾಗ್ಯೂ ಅನೇಕ ಮಂದಿ, ಐದು ನಿಮಿಷ ಮಾತಾಡಿದರೆ ಸಾಕು ಜಾನಪದ ಎಂದರೇನು ಜಾನಪದ ತಜ್ಞ ಏನು ಮಾಡುತ್ತಾನೆ ಎಂಬುದನ್ನು ಅರಿತುಬಿಡಬಹುದು ಎಂದು ತಿಳಿದಿರುವಂತೆ ತೋರುತ್ತದೆ. ಆದರೆ ಮಾನವಿಕ ವಿಭಾಗದ ಇತರ ಶಿಸ್ತುಗಳ ಬಗ್ಗೆ ಇದೇ ರೀತಿ ಇಷ್ಟು ಸಲೀಸಾದ ಪ್ರಶ್ನೆ ಏಕೆಕೇಳುವುದಿಲ್ಲ ಎಂದು ಡಾರ್ಸನ್ ಅಚ್ಚರಿ ವ್ಯಕ್ತ ಪಡಿಸುತ್ತಾರೆ.3

ಜಾನಪದ ತಜ್ಞನಿಗೆ ದತ್ತಾಂಶವನ್ನು ಒದಗಿಸುವ ಮೂರು ಮುಖ್ಯ ಮೂಲ ಗಳೆಂದರೆ ಕ್ಷೇತ್ರಕಾರ್ಯ, ಪತ್ರಗಾರ ಹಾಗೂ ಮುದ್ರಿತ ಮೂಲಗಳು ಎಂದು ಡಾರ್ಸನ್ ಸ್ಪಷ್ಟಪಡಿಸುತ್ತಾರೆ.

ಕ್ಷೇತ್ರ'ದ ಬಗ್ಗೆ ಡಾರ್ಸನ್ನರ ವಿವರಣೆ ಹೀಗಿದೆ. ಇದು ಜಾನಪದ ತಜ್ಞನು ತನ್ನ ದಿನನಿತ್ಯದ ಕಾರ್ಯಕ್ರಮ, ಉದ್ಯೋಗ ಹಾಗೂ ಮನೆಯಿಂದ ಸಂಪೂರ್ಣ ವಿಮುಕ್ತನಾಗಿ ಇರುವಂಥ ಸ್ಥಳ ಮತ್ತು ಇದು ತನ್ನ ಜಾಗೃತ ಸಮಯವೆಲ್ಲವನ್ನು ವಸ್ತ್ರಗಳೊಂದಿಗೆ ಸಂಪರ್ಕ, ಸಂದರ್ಶನ, ದಾಖಲಾತಿ ಕೇಳೋ ಹಾಗೂ ಜನರ ಅವಲೋಕನಕ್ಕಾಗಿ ಮೀಸಲಿಡುವಂಥ ಕಾಲ.4

ಜಾನಪದ ಅಭ್ಯಾಸಿಗಳಾದ ಪ್ರತಿಯೊಬ್ಬರು ಅಂಡ್ರಲ್ಯಾಂಗ್ ಮತ್ತು ಸ್ಮಿತ್ ಥಾಂಸನ್ನರಂತೆ ಕ್ಷೇತ್ರಕಾರ್ಯ ತಂತ್ರವನ್ನೂ ಅರಿತಿರಬೇಕು. ಅವರು ಕಾರ್ಯ ಮಾಡಲಿಲ್ಲ. ಆದರೆ ಅವರ ಸಿದ್ಧಾಂತಗಳೆಲ್ಲ ಬಹುತೇಕವಾಗಿ ಕ್ಷೇತ್ರಕಾರ್ಯ ಮಾಡಿ ಸಂಗ್ರಹಿಸಲಾದ ಪಠ್ಯ ಹಾಗೂ ಪದ್ಧತಿಗಳ ಮೇಲೆ ಆಧರಿಸಿದಂಥವು.

ಮೊದಲೆಲ್ಲ ಕ್ಷೇತ್ರಕಾರ್ಯ, ಎಂದ ಕೂಡಲೇ ಯಾವುದೋ ಮೂಲೆಯ ಪ್ರದೇಶಕ್ಕೆ ಹೋಗಬೇಕೇನೂ ಎಂಬ ಭಾವನೆ ಹುಟ್ಟುತ್ತಿತ್ತು. ಈ ಅಭಿಪ್ರಾಯ ಕ್ರಮೇಣ ಅಳಿಯುತ್ತ ಬಂದಿದೆ. ಎಲ್ಲೆಲ್ಲಿ ಜನರ ಗುಂಪು ಎಂಬುದಿರುತ್ತದೆಯೋ ಅಲ್ಲೆಲ್ಲ ಜಾನಪದ ಇರುತ್ತದೆ ಎಂಬ ಹೊಸ ಧೋರಣೆ ಮೂಡಿರುವುದೇ ಇದಕ್ಕೆ ಮುಖ್ಯ ಕಾರಣ.

ಮಾನವಶಾಸ್ತ್ರದಲ್ಲಿ ಕ್ಷೇತ್ರ ಕಾರ್ಯದ ಅನಿವಾರ್ಯತೆಯನ್ನು ಎಷ್ಟು ಒತ್ತಿ ಹೇಳಲಾಗುತ್ತದೋ ಅದೇ ರೀತಿಯಲ್ಲಿ ಜಾನಪದದಲ್ಲಿಯೂ ಸಹ ಕ್ಷೇತ್ರಕಾರ್ಯ ಒಂದು ಅನಿವಾರ್ಯವಾಗಬೇಕು. ಮಾನವಶಾಸ್ತ್ರ, ಸಮಾಜಶಾಸ್ತ್ರ ಹಾಗೂ ಜಾನಪದ ತಜ್ಞರು ಆಯ್ದುಕೊಳ್ಳಬೇಕಾದ ಕ್ಷೇತ್ರ ವ್ಯಾಪ್ತಿಯ ಬಗ್ಗೆ ಅವುಗಳ ನಡುವಿನ. ವ್ಯತ್ಯಾಸದ ಬಗ್ಗೆ ಕೆಲವು ಉಪಯುಕ್ತ ಮಾತುಗಳನ್ನು ಡಾರ್ಸನ್ ಹೇಳಿದ್ದಾರೆ. ಸಾಮಾನ್ಯವಾಗಿ ಮಾನವಶಾಸ್ತ್ರ ಜ್ಞಾನಕ್ಷೇತ್ರ ಅವನ ಸ್ವಂತ ಸಂಸ್ಕೃತಿಯ ಹೊರಗಿನ ದಾಗಿರುತ್ತದೆ. ಮತ್ತು ಅನಕ್ಷರಸ್ಥ ಹಾಗೂ ಹಿಂದುಳಿದ ಸಮಾಜಗಳಿಗಷ್ಟೇ ಸೀಮಿತ ವಾಗಿರುತ್ತದೆ. ಅದರೆ ಜಾನಪದ ತಜ್ಞನದು ಅವನದೇ ನಾಗರಿಕತೆಯೊಳಗೂ ಇರಬಹುದು. ಮಾನವಶಾಸ್ತ್ರಜ್ಞ ತಾನು ಕೆಲಸ ಮಾಡುತ್ತಿರುವ ಕ್ಷೇತ್ರಕ್ಕೆ ಪರಕೀಯ ನಾಗೇ ಉಳಿದು, ಮಧ್ಯಸ್ಥಿಕೆದಾರನ ಮೂಲಕ ವ್ಯಕ್ತ್ಯಗಳಸಂದರ್ಶನ ಪಡೆದುಕೊಂಡರೆ ಜಾನಪದ ತಜ್ಞನು ಅಸಂಸ್ಕೃತಿಯೊಳಗೇ ಒಬ್ಬನಾಗಿ ಸೇರಿಕೊಂಡು ಅವಲೋಕಿಸುತ್ತಾನೆ. ಅವನು ಜನಪದವನ್ನು ಒಂದು ಅಲಕ್ಷಿಸಲ್ಪಟ್ಟ ಸಂಸ್ಕೃತಿಯಾಗಿ ಕಾಣುತ್ತಾನೆ. ಪ್ರಧಾನವಾದ, ಅಧಿಕೃತವಾದ ನಾಗರಿಕತೆಯ ಕೆಳಗೆ ಹುದುಗಿರುವ ಅಂಶಗಳಿಗೆ ಪ್ರವೇಶಿ ಸುವ ಮತ್ತು ಅವುಗಳನ್ನು ಗುರುತಿಸುವ ತಂತ್ರದ ದೃಷ್ಟಿಯಿಂದ ಅವನು ಇತರರಿಗಿಂತ ಭಿನ್ನ, ಅವನು ಇದೇ ಸಮಾಜ ಅಥವಾ ಅದರ ಅಂಗಗಳನ್ನು ಸಮಾನವಾಗಿ ಹಾಗೂ ನಿಷ್ಪಕ್ಷಪಾತಿಯಾಗಿ ನೋಡುವುದಿಲ್ಲ. ಅನಧಿಕೃತ ಸಂಸ್ಕೃತಿಯನ್ನು ಗ್ರಹಿಸುವತ್ತ ಮಾತ್ರ ಅವನ ಸಂವೇದನೆ ಜಾಗೃತವಾಗಿರುತ್ತದೆ.7

ಕ್ಷೇತ್ರ ಕಾರ್ಯಕ್ಕೆ ಹೊರಡುವ ಮುನ್ನ ಕೆಲವು ಪೂರ್ವ ತಯಾರಿಗಳು ಅವಶ್ಯಕ. ಸಾಕಷ್ಟು ಗ್ರಂಥಪರಿಶೀಲನೆ ಉತ್ತಮ ಫಲಿತಾಂಶ ತರುತ್ತದೆ. ಕೆಲವು ನಿರ್ದಿಷ್ಟ ಉದ್ದೇಶ ಗಳಿಗೆ ಅನುಗುಣವಾಗಿ ಕ್ಷೇತ್ರ ಕಾರ್ಯವನ್ನು ನಿಖರವಾಗಿ ಯೋಚಿಸಿಕೊಳ್ಳಬಹುದು. ಉದಾಹರಣೆಗೆ ಒಂದು ನಂಬಿಕೆಯ ಹರವಿನ ಭೂಪಟ ರಚಿಸಿಕೊಳ್ಳುವುದು. ಸಂಗ್ರಹಿಸ ಬೇಕಾದ ಸಾಮಗ್ರಿ ಹಾಗೂ ನಮ್ಮ ಯೋಜನೆಗಳಿಗನುಗುಣವಾಗಿ ನಮ್ಮ ವಿಧಾನಗಳು ಬದಲಾಗುತ್ತವೆ. ನಾವು ಏನು ಸಂಗ್ರಹಿಸುತ್ತೇವೆ ಎಂಬುದರ ಬಗೆಗೆ ಖಚಿತತೆ ಇರ ಬೇಕು. ತೀರಾ ಖಚಿತತೆಯು (ಅಂದರೆ ಇಂಥದ್ದನ್ನೆಷ್ಟೇ ಸಂಗ್ರಹಿಸಬೇಕು ಎಂಬ ಮಿತಿ ಹಾಕಿಕೊಂಡರೆ) ತನ್ನ ಕಣ್ಣೆದುರಿಗೇ ಇರುವಂತಹ ಮಾಹಿತಿಯನ್ನು ಕಡೆಗಣಿಸು ವಂತೆ ಮಾಡಬಹುದು. ಶಾರ್ಪ್ ಎಂಬ ಕ್ಷೇತ್ರ ಕಾರ್ಯಕರ್ತ ಹಾಡುಗಾರರಿಂದ ಹಾಡುಗಳನ್ನು ಸಂಗ್ರಹಿಸುವಷ್ಟಕ್ಕೆ ಸೀಮಿತವಾಗಿ, ಅವರಲ್ಲಿ ಸಮೃದ್ಧವಾಗಿ ಲಭ್ಯವಿದ ಜನಪದ ಕಥೆಗಳನ್ನು ಅಲಕ್ಷಿಸಿದ ಉದಾಹರಣೆಯನ್ನೂ ಡಾರ್ಸನ್ ಕೊಡುತ್ತಾರೆ ಆಕಸ್ಮಿಕವಾಗಿ ಮತ್ತು ಸಾಂದರ್ಭಿಕವಾಗಿ ವಸ್ತ್ರಗಳು ಸಿಕ್ಕಿಬಿಡಬಹುದು. ಇಂಥ ಸಂದರ್ಭದಲ್ಲಿ ಪೂರ್ವತಯಾರಿ ಸಾಧ್ಯವಿಲ್ಲವಾದರೂ ಸಿಕ್ಕ ಸಂದರ್ಭವನ್ನು ಉಪ ಯೋಗಿಸಿಕೊಳ್ಳುವ ಜಾಣ್ಮಯನ್ನು ಬೆಳಸಿಕೊಳ್ಳಬೇಕು. ಹೋಟೆಲಿನ ಗುಮಾಸ್ತ, ಬಾರ್ ಪರಿಚಾರಕ, ಪತ್ರಿಕೆ ಮಾರುವ ಹುಡುಗ ಈ ಯಾರೊಂದಿಗೇ ಆಗಲಿ ಮುಕ್ತ ವಾಗಿ ಸ್ನೇಹಪರವಾಗಿ ಮಾತಾಡಿ ಅವರನ್ನು ವಕ್ತ್ಯಗಳಾಗಿ ಮಾಡಿಕೊಳ್ಳಬಹುದು ಎಂದು ಡಾರ್ಸನ್ ಹೇಳುತ್ತಾರೆ. ಸ್ವತಃ ಡಾರ್ಸನ್ನರಲ್ಲಿ ಇಂಥ ಜಾಯಿತ್ತು. ಹೀಗೇ ಒಮ್ಮೆ ಒಬ್ಬ ಕುಡುಕನೊಂದಿಗೆ ಸಂಭಾಷಣೆಯಲ್ಲಿ ತೊಡಗಿ ಅನೇಕ ಐತಿಹ್ಯ ಗಳನ್ನು ಸಂಗ್ರಹಿಸಿದ್ದನ್ನೂ, ನ್ಯೂಗಿನಿಯ ಕ್ಷೌರಿಕ ಅಂಗಡಿಯಲ್ಲಿ ತಮ್ಮ ಸರದಿಗಾಗಿ ಕಾಯುತ್ತ ಕೂತಿದ್ದಾಗ ಯಾರೋ ಒಬ್ಬ flypic ಎಂಬ ತಿನಿಸಿನ ಬಗ್ಗೆ ಹೇಳಿದಾಗ, ಅದರ ಜಾಡನ್ನೇ ಹಿಡಿದು ನೊಣಗಳಿಂದ ಮಾಡಿದ ತಿನಿಸು ತಿಂದ ಸ್ವಾನ್ ಒಲ್ಸನ್ನನ ಕಥೆ ತಿಳಿದದ್ದನ್ನೂ ಡಾರ್ಸನ್ ಉಲ್ಲೇಖಿಸಿದ್ದಾರೆ. ಕ್ಷೇತ್ರಕಾರ್ಯದಲ್ಲಿ ಎದುರಾಗಬಹು ದಾದ ಕೆಲವು ಸ್ವಾಭಾವಿಕ ಸಮಸ್ಯೆಗಳ ಬಗ್ಗೆ ಜಾನಪದ ಕ್ಷೇತ್ರಕಾರ್ಯಕರ್ತನು ಹೊಂದಿರಲೇಬೇಕಾದ ಸಾಮಾನ್ಯ ಜ್ಞಾನದ ಬಗ್ಗೆಯೂ ಡಾರ್ಸನ್ ಉಪಯುಕ್ತ ಮಾತುಗಳನ್ನು ಹೇಳಿದ್ದಾರೆ. “ವ ಬಹಳ ಆಸಕ್ತಿ ಇರುವವನೂ ಮತ್ತು ಅತ್ಯಂತ ಸಹಕಾರ ಮನೋಭಾವದವನೂ ಆಗಿರಬಹುದು. ಆದರೂ ಕೂಡ ಬಾಟಲಿಯಿಂದ ಕಾರ್ಕ್ ತೆಗೆದ ಕೂಡಲೇ ಚಿಮ್ಮುವ ಪ್ರವಾಹದಂತೆ ಅವನು ಜಾನಪದವನ್ನು ನಿರೂಪಿಸಿ ಬಿಡುತ್ತಾನೆ ಎಂದು ನಿರೀಕ್ಷಿಸಬಾರದು, ಪರಂಪರೆಯ ಅಂಶಗಳು ಅವನ ಮನಸ್ಸಿನ ಆಳದಲ್ಲಿ ಹುದುಗಿರುತ್ತವೆ. ಅವನ್ನು ಸೂಕ್ತ ರೀತಿಯಲ್ಲಿ ಹೊರತೆಗೆಯಬೇಕು.10 ಎಂದು ಡಾರ್ಸನ್ ಸ್ಪಷ್ಟಪಡಿಸುತ್ತಾರೆ. ವಸ್ತ್ರಗಳ ನೆಲೆಯನ್ನು ಗುರುತಿಸುವುದು ಯುದ್ಧದ ಆರಂಭ ಮಾತ್ರ, ಮುಖಾಮುಖಿಯಾದ ನಂತರ ಜಾನಪದವನ್ನು ಹೊರತೆಗೆಯುವುದು ಸಂಗ) ಹಕ. ಮುಂದಿನ ಕೆಲಸ. ವಸ್ತ್ರನಿಗೆ ತನ್ನ ಪರಿಚಯ ಹೇಳಿಕೊಳ್ಳುವ ಮತ್ತು

ತನಗೆ ಬೇಕಾದುದೇನು ಎಂಬುದನ್ನು ಸ್ಪಷ್ಟಪಡಿಸುವ ಎರಡೂ ಕೆಲಸಗಳನ್ನು ಒಬ್ಬ ಜಾನಪದ ತಜ್ಞ ಹೇಗೆ ಮಾಡಬಹುದು ಎಂಬುದನ್ನು ತಮ್ಮ ಸ್ವಂತದ ಉದಾಹರಣೆ ಮೂಲಕವೇ ಡಾರ್ಸನ್ ಸ್ಪಷ್ಟ ಪಡಿಸುತ್ತಾರೆ. ಡಾರ್ಸನ್ನರು ತಮ್ಮ ಧೋರಣೆಗಳಲ್ಲಿ ನಿಷ್ಠುರವಾಗಿದ್ದ ವ್ಯಕ್ತಿಯಾಗಿರಲಿಲ್ಲ. ಜಾನಪದ ಅಧ್ಯಯನ ಬೆಳೆದಂತೆ ರೂಪುಗೊಂಡ ಹೊಸವಿಧಾನ ಮತ್ತು ಅಲೋಚನೆಗಳನ್ನು ತಮ್ಮ ಅಧ್ಯಯನಕ್ಕೆ ಅಳವಡಿಸಿಕೊಳ್ಳು ಕಾಲದ ಇತರ ತಿದ್ದರು. ಉದಾಹರಣೆಗೆ ಮೊದಮೊದಲು ಅವರೂ ಸಹ ತಮ್ಮ ಜಾನಪದ ವಿದ್ವಾಂಸರಂತೆ ಜಾನಪದದ ಪಠ್ಯಕ್ಕೆ ಹೆಚ್ಚು ಗಮನ ಕೊಡುತ್ತಿದ್ದರು. ಜಾನಪದದಲ್ಲಿ ಪಠ್ಯವೊಂದೇ ಮುಖ್ಯವಲ್ಲ. ಅದನ್ನು ನಿರೂಪಿಸುವವರೂ ಹಾಗೂ ನಿರೂಪಣೆಯ ಸನ್ನಿವೇಶವೂ ಅಷ್ಟೇ ಮುಖ್ಯ ಖ್ಯ ಎಂದು ಪ್ರತಿಪಾದಿಸುವ ಸಾಂದರ್ಭಿಕ ಸಿದ್ಧಾಂತದಲ್ಲಿರುವ ಹುರುಳನ್ನು ಮನ ಗಂಡ ನಂತರ ಡಾರ್ಸನ್ ಅವರು ನಿರೂಪಕರ ಬಗ್ಗೆಯೂ ಹೆಚ್ಚು ಗಮನವಹಿಸತೊಡಗಿದರು ಮತ್ತು ಅವರ ಆ ಮುಂದಿನ ಅಧ್ಯಯನ ಗಳಲ್ಲಿ ಈ ಅಂಶವನ್ನು ಚಾಚೂ ತಪ್ಪದೆ ಅನುಸರಿಸಿದರು.

ಜಾನಪದ ಪಠ್ಯವನ್ನು ಕುರಿತು ಡಾರ್ಸನ್ ಹೇಳಿರುವ ಮಾತುಗಳು ಸಹ ಚಿಂತನ ಯೋಗ್ಯವಾಗಿವೆ. ಡಾರ್ಸನ್ ದೃಷ್ಟಿಯಲ್ಲಿ ಪಠ್ಯವೆನ್ನುವುದು ವಾಕ್ ಪರಂ ಪರೆಯ ಮೂಲ ಆಕರ. ಪರಂಪರೆಯ ಶುದ್ಧ ಪ್ರೋತವನ್ನು ಪ್ರತಿನಿಧಿಸುವಂಥದ್ದು ಮತ್ತು ಇದು ವಾಕ್ ಪರಂಪರೆಯ ಅನುಲ್ಲಂಘನೀಯ ದಸ್ತಾವೇಜು, ಚರಿತ್ರಕಾರನಿಗೆ ರಾಜ್ಯ ಪತ್ರ (State Paper) ಹೇಗೋ, ಸಾಹಿತ್ಯ ಪಂಡಿತನಿಗೆ ಸೃಜನಶೀಲ ಕೃತಿ ಹೇಗೋ, ಜಾನಪದ ತಜ್ಞನಿಗೆ ಮೌಖಿಕ ಪಠ್ಯ ಹಾಗೆ11 ಎಂದು ಡಾರ್ಸನ್ ಹೇಳುತ್ತಾರೆ. ಪಠ್ಯಗಳನ್ನು ವಕ್ತಗಳಿಂದ ಅಕ್ಷರಶಃ, ಪಡೆದುಕೊಳ್ಳಬೇಕು, ವಕ್ತ್ಯಗಳ ಸಂಪೂರ್ಣ ಹಿನ್ನೆಲೆಯ ಮಾಹಿತಿ ಕೊಡಬೇಕು ಎಂದು ಅವರು ಸ್ಪಷ್ಟ ಪಡಿಸು ತಾರೆ. ಮೌಖಿಕ ಪಠ್ಯವು ಸಾಹಿತ್ಯಕ ಪಠ್ಯದಿಂದ ಕೆಲವು ಮುಖ್ಯ ವಿಧಾನಗಳಲ್ಲಿ ಭಿನ್ನವಾಗಿದೆ. ವೃತ್ತಿಪರ ಜಾನಪದ ತಜ್ಞನು ಸಾಹಿತ್ಯಕ ಪಠ್ಯವನ್ನು ಯಾವಾಗಲೂ ಎರಡನೇ ಸ್ಥಾನಕ್ಕೆ ತಳ್ಳಬೇಕು. ಮೌಖಿಕ ರೂಪದ ನಿರೂಪಣೆ ಹೇಳುವನ ಬಾಯಿಂದ ಸದ್ಯೋಜಾತವಾಗಿ ದಿನನಿತ್ಯದ ಅಡು ಭಾಷೆಯಲ್ಲಿ ಸಹಜ ಸ್ಫೂರ್ತವಾಗಿ ಹೊರಬರು ಇದೆ. ಆದರೆ ಲಿಖಿತ ನಿರೂಪಣೆಯಲ್ಲಿ ಈ ಲೇಖಕನ ಪೂರ್ವಗ್ರಹ ಹಾಗೂ  ಓದುಗರ ನಿರೀಕ್ಷೆಗೆ ಹೊಂದಿಕೆಯಾಗುವಂತೆ ಅದನ್ನು ಪರಿಷ್ಕರಿಸಲಾಗುತ್ತದೆ ಮತ್ತು ಎಷ್ಟೋ ವೇಳೆ ಬದಲಾಯಿಸಲಾಗುತ್ತದೆ. ಆದ್ದರಿಂದ ತಿದ್ದಿ ಬರೆದ ಐತಿಹ್ಯ, ಲಾವಣಿ ಗಳು ಜಾನಪದವಲ್ಲ ಬದಲಾಗಿ ಜಾನಪದ ಸಾಮಗ್ರಿಯ ಸಾಹಿತ್ಯಕ ಆಳವಡಿಕೆಗಳು12 ಎಂಬುದಾಗಿ ಡಾರ್ಸನ್ ಕರೆಯುತ್ತಾರೆ, ಆದರೂ ಜಾನಪದದ ಸಾಹಿತ್ಯಕ ಆವೃತ್ತಿಗಳ ಮಹತ್ವವನ್ನು ಡಾರ್ಸನ್ ಗುರುತಿಸಿದ್ದರು. ಸಾಹಿತ್ಯಕ ಆವೃತ್ತಿಗಳು ಎರಡು ದೃಷ್ಟಿ ಗಳಿಂದ ಮುಖ್ಯ, ಮಹಾನ್ ಸಾಹಿತಿಗಳ ಮೇಲೆ ಜಾನಪದದ ಪ್ರಭಾವವನ್ನು ಗುರುತಿಸಲು ಹಾಗೂ ಅಳಿದು ಹೋಗುವಂಥ ಜಾನಪದವನ್ನು ಅವು ಸಂರಕ್ಷಿಸುವ

ದೃಷ್ಟಿಯಿಂದ. 19ನೇ ಶತಮಾನದ ಪೂರ್ವದಲ್ಲಿ ಕ್ಷೇತ್ರಕಾರ್ಯ ಮೂಲಗಳ ಮೊರೆ ಹೋಗುವುದು ಅನಿವಾರ್ಯ. ಆದರೆ ಒಂದು ಸಾಹಿತ್ಯಕ ಪಠ್ಯದ ವಾದ್ದರಿಂದ ಅವುಗಳ ಕಾಲವನ್ನು ಗುರುತಿಸಲು ಜಾನಪದ ಎಂಬುದೇ ಆದಲ್ಲ ಪಾರಂಪರಿಕ ಲಕ್ಷಣವನ್ನು ನಿರ್ಧರಿಸಬೇಕಾದರೆ ಅವನು ಮಾಡಬೇಕಾದ ಅಂತಿಮ ಪರೀಕ್ಷೆ, ಕ್ಷೇತ್ರದಿಂದ ಸಂಗ್ರಹಿಸಿದ ಪಠ್ಯವನ್ನು ಆಧಾರವಾಗಿಟ್ಟುಕೊಂಡು ಅದಕ್ಕೆ ತಾಳೆಯಾಗುತ್ತದೆಯೇ ಎಂದು ನೋಡುವುದೇ ಆಗಿದೆ. 13 ಎಂದು ಡಾರ್ಸನ್ ಸ್ಪಷ್ಟ ಪಡಿಸುತ್ತಾರೆ.

ಸಾಹಿತ್ಯಕ ಮತ್ತು ಮೌಖಿಕ ಪರಂಪರೆಯ ಸಂಬಂಧ ಕುರಿತು, ಇವೆರಡೂ ಪರಸ್ಪರ ಪ್ರಭಾವ ಬೀರುತ್ತವೆ. ಒಂದು ಪಠ್ಯದ ಜೀವನ ಚರಿತ್ರೆಯನ್ನು ಪುನರಚಿಸುವಾಗ ಇವೆರಡರ ನಡುವಿನ ಕೊಳುಕೊಡುಗೆಯ ಬಗ್ಗೆ ಎಚ್ಚರಿಕೆಯಿಂದ ಪರಿಶೀಲಿಸಬೇಕು. ಇವೆರಡರ ನಡುವಣ ಸಂಬಂಧ ಒಳ್ಳೆಯದೇ ಹೊರತು ಪ್ರತಿರೋಧ ರೀತಿಯದಲ್ಲ. ಅವು ಪರಸ್ಪರ ಪೋಷಣೆ ಪಡೆದುಕೊಳ್ಳುತ್ತವೆ. ಕೆಲವು ಶಿಷ್ಟ ಕೃತಿಗಳು ಜಾನಪದೀಯ ವಾಗುವುದೂ ಉಂಟು. ಹೆಚ್ಚು ಪಠ್ಯಗಳು ಸಿಕ್ಕಷ್ಟೂ ಅದರ ಜಾನಪದೀಯತೆಯ ಬಗ್ಗೆ ಹೆಚ್ಚು ಖಾತರಿ ಇರುತ್ತದೆ ಎಂದು ಡಾರ್ಸನ್ ಹೇಳುತ್ತಾರೆ. 14

ಮೌಖಿಕ ಪರಂಪರೆಯ ಅಂಶವನ್ನು ಮುದ್ರಣಕ್ಕೊಳಪಡಿಸಿದಾಗ ಮೌಖಿಕ ಪರಂಪರೆಗೆ ಧಕ್ಕೆಯಾಗುವುದಿಲ್ಲವೆ ? ಎಂಬ ಪ್ರಶ್ನೆಗೆ-ಕಥೆಗಾರರೂ, ಹಾಡುಗಾರರೂ ತಾವು ಸಂಗ್ರಾಹಕನಿಗೆ ಹೇಳುತ್ತಿದ್ದೇವೆ, ಅದು ಮುದ್ರಿತವಾಗುತ್ತದೆ ಎಂಬುದರ ಪರಿವೆಯಿಲ್ಲದೆ ತಮ್ಮ ಮೌಖಿಕ ನಿರೂಪಣೆಯನ್ನು ಮುಂದುವರೆಸಿಕೊಂಡು ಹೋಗು ತ್ತಾರೆ. ಪ್ರತಿಯೊಂದು ನಿರೂಪಣೆಯಲ್ಲೂ ಅವರ ಪಠ್ಯ ಸ್ವಲ್ಪ ಸ್ವಲ್ಪ ಬದಲಾಗುತ್ತದೆ. ಆದರೆ ಕ್ಷೇತ್ರಕಾರ್ಯ ನಡೆಸಿ ಒಂದು ಬಾರಿ ಸಂಗ್ರಹಿಸಿದ ಪಠ್ಯವು ನಿರಂತರವಾಗಿ ವ್ಯತ್ಯಾಸವಾಗುವ ಆದರೂ ಅಲಿಖಿತ ಪರಂಪರೆಯಲ್ಲಿ ಸ್ಥಿರವಾಗಿರುವ ಪಠ್ಯ ಒಂದು ನಿರೂಪಣೆಯನ್ನು ಮಾತ್ರ ಹಿಡಿದಿಡುತ್ತದೆ. 15 ಎಂದು ಅವರು ಸ್ಪಷ್ಟಪಡಿಸುತ್ತಾರೆ.

**ಪರಿಭಾಷೆ :** ಮಾನವಿಕ ಮತ್ತು ಸಮಾಜ ವಿಜ್ಞಾನಗಳ ಎಲ್ಲ ಶಾಖೆಗಳಿಗೂ ಇರುವಂತೆ ಜಾನಪದಕ್ಕೂ ಒಂದು ವಿಶಿಷ್ಟವಾದ ಪರಿಭಾಷೆ ಇದೆ. ಆದರೆ ಇತರ ಸಾಮಾನ್ಯರೂ ಸಹ ಇದೇ ಪದಗಳನ್ನು ಬಳಸುವುದರಿಂದ ಒಬ್ಬ ಸಾಹಿತ್ಯಕ ವಿಮರ್ಶಕ ಅಥವಾ ಸಮಾಜ ವಿಜ್ಞಾನಿಗೆ ಅವರ ಪರಿಭಾಷೆಯಿಂದ ಸಿಗುವಂಥ ರಕ್ಷಣಗೆ ಜಾನ ಪದಜ್ಞರಿಗೆ ಸಿಗುವುದಿಲ್ಲ. ಜಾನಪದದ ಗಂಭೀರ ಅಧ್ಯಯನ ಹಾಗೂ ಅದರ ಅಂತರ ರಾಷ್ಟ್ರೀಯ ಪ್ರಭಾವಗಳ ಬಗ್ಗೆ ಇದ್ದ ಸಾಮಾನ್ಯ ಅಜ್ಞಾನದ ಕಾರಣದಿಂದಾಗಿಯೇ ವಿಶ್ವವಿದ್ಯಾಲಯಕ್ಕೆ ಧನಸಹಾಯ ನಿಂತು ಹೋದ ಒಂದು ಘಟನೆಯನ್ನು ಡಾರ್ಸನ್ ಪ್ರಸ್ತಾಪಿಸಿದ್ದಾರೆ. 1961ರಲ್ಲಿ ಇಂಡಿಯಾನ ವಿಶ್ವವಿದ್ಯಾಲಯ ಹಾಗೂ ಕಾನ್ಸಾಸ್

ವಿಶ್ವವಿದ್ಯಾಲಯಗಳಿಗೆ ಜಾನಪದಕ್ಕಾಗಿ National defence Education Act ನ ಅನ್ವಯ ಕೊಡಲಾಗಿದ್ದ ಅನುದಾನದ ಬಗ್ಗೆ ವಾಲ್ ಸ್ಟೇಟ್ ಜರ್ನಲ್ ಪತ್ರಿಕೆ ಗಲಾಟೆ ಎಬ್ಬಿಸಿತು. ಆಗ ಸಮಿತಿಯು ಇದಕ್ಕೆ ತಕ್ಷಣವೇ ಪ್ರತಿಕ್ರಿಯಿಸಿ ಫೆಲೋಶಿಪ್ ನಿಧಿಯಲ್ಲಿ 1000 ಮಿಲಿಯನ್ ಡಾಲರ್‌ಗಳನ್ನು ಕಡಿತಗೊಳಿಸಿತು ಮತ್ತು ಜಾನಪದ ಅಧ್ಯಯನಕ್ಕೆ ಬೆಂಬಲ ನಿಲ್ಲಿಸಿತು. ಹಿಂದೊಮ್ಮೆ ಸಮಿತಿಯವರು ಸಮಾಜ ವಿಜ್ಞಾನ ತಿಲ್ಲ ಸಮೀಕರಿಸತೊಡಗಿ ಗಳನ್ನು ಸಮಾಜವಾದ ಹಾಗೂ ಕಮ್ಯೂನಿಸವಗಳೊಂದಿಗೆ ಅನುದಾನ ನಿಲ್ಲಿಸಿದಾಗ ಸಮಾಜ ವಿಜ್ಞಾನಿಗಳು ತಮ್ಮ ಅಧ್ಯಯನ ಕ್ಷೇತ್ರದ ಹೆಸರನ್ನೇ ಬದಲಿಸಿ ತಮ್ಮನ್ನು behavioral scientist ಗಳೆಂದು ಕರೆದು ಕೊಂಡಂತೆಯೇ ನಾವೂ ಸಹ Folklore ಎಂಬ ಹೆಸರನ್ನು ಬದಲಿಸಿಕೊಳ್ಳಬೇಕು ಎಂದು ಕೆಲವು ಸ್ನೇಹಿತರು ಸೂಚಿಸಿದರು. ಆದರೆ ಈ ರೀತಿಯ ಬದಲಾವಣೆಯಿಂದ ನಮ್ಮ ಅಮೂಲ್ಯ ವಾದ ಸ್ವತ್ತನ್ನು ಬಿಟ್ಟುಕೊಟ್ಟಂತೆ ಆಗುತ್ತದೆ. ಏಕೆಂದರೆ Folklore ಪದಕ್ಕೆ ಹಾಗೂ ಈ ಪರಿಕಲ್ಪನೆಗೆ ಒಂದು ಗೌರವಯುತವಾದ ಇತಿಹಾಸವಿದೆ. ಹಾಗೂ ಈ ಪದವನ್ನು ಸಮರ್ಥರಾದವರು ಬಳಸಿ ಉನ್ನತ ಮಟ್ಟದ ಪ್ರೋತ್ಸ ವರ್ಗವನ್ನು ಪಡೆದುಕೊಂಡಿದ್ದಾರೆ" ಎಂದು ತಾವು ಪ್ರತಿಪಾದಿಸಿದ್ದಾಗಿ ಡಾರ್ಸನ್ ಇಲ್ಲಿ ಹೇಳಿ ಕೊಂಡಿದ್ದಾರೆ.16

ತನ್ನ ಪರಿಭಾಷೆಯನ್ನು ಖಚಿತವಾಗಿ ಬಳಸುವುದೇ ಜಾನಪದ ತಜ್ಞನ ಒಂದು ತಂತ್ರ, ಇತಿಹಾಸದ ಕಾಲಾವಧಿಯಲ್ಲಿ ಅರ್ಥಗಳು ವ್ಯತ್ಯಾಸವಾಗುತ್ತವೆ. 19ನೇ ಶತಮಾನದಲ್ಲಿ ಜನಪ್ರಿಯವಾಗಿದ್ದ ಜನಪ್ರಿಯ ನಡಾವಳಿಗಳು", "ಕೆಳಸ್ಥರಗಳು" "ಅನಾಗರಿಕರು", "ಉಳಿಕೆಗಳು ಇತ್ಯಾದಿ ಪದಗಳು ಇಂದು ಯಾವ ಪ್ರಭಾವವನ್ನೂ ಹೊಂದಿಲ್ಲ. ವರ್ಗ, ಆಶಯ, ಮೂಲಮಾದರಿ, ಭಿನ್ನ ಪಾಠ, ಮಾರ್ಶೆನ್ ಮುಂತಾದುವು ಇಂದಿನ ಜನಪ್ರಿಯ ಪದಗಳಾಗಿವೆ ಎಂದು ಡಾರ್ಸನ್ ವಿಶ್ಲೇಷಿಸುತ್ತಾರೆ. ಇದಲ್ಲದೆ ಜನಪದ ಜೀವನ, ಮೋಟಿಫೀಮ, ಶಾಬ್ಬಿ ಕಕಲೆ ಮುಂತಾದುವು ಗಮನ ಸೆಳೆಯು ತಿರುವ ಇನ್ನೂ ಹೊಸ ರೀತಿಯ ಪದಗಳು ಎಂದು ಸೂಚಿಸುತ್ತಾರೆ.

**ಆಶಯ ಸೂಚಿ ಮತ್ತು ವರ್ಗ ಸೂಚಿಗಳು :**

ಆಶಯ ಹಾಗೂ ವರ್ಗಸೂಚಿಗಳ ಬಗ್ಗೆ ಡಾರ್ಸನ್‌ರ ಕಾಲದಲ್ಲಿಯೇ ಅನೇಕ ಟೀಕೆಗಳಿದ್ದಾಗ್ಯೂ ಡಾರ್ಸನ್‌ರಿಗೆ ಈ ಸೂಚಿಗಳ ಉಪಯುಕ್ತತೆಯ ಬಗ್ಗೆ ಅಪಾರ ವಿಶ್ವಾಸವಿತ್ತು. ಪಠ್ಯಗಳನ್ನು ಕ್ಷೇತ್ರದಿಂದಲೇ ಸಂಗ್ರಹಿಸಿರಲಿ.

ಪ್ರಕಟಿತ ಮೂಲಗಳಿಂದಲೇ ಸಂಗ್ರಹಿಸಿರಲಿ, ಅವುಗಳನ್ನು ಬೃಹತ್ ಸೂಚಿಗಳು ಹಾಗೂ ಪರಾಮರ್ಶನ ಗ್ರಂಥಗಳೊಂದಿಗೆ ಪರಿಶೀಲಿಸಿ, ನೋಡುವುದು ಅಗತ್ಯ. ಇವು ಜಾನಪದ ತಜ್ಞನ ವೈಜ್ಞಾನಿಕ ಸಾಧನಗಳು. ನಾವು ಯಾವುದನ್ನು ಜಾನಪದ ಎಂದು ಗ್ರಹಿಸುತ್ತೇವೋ ಅದರ ಮೌಖಿಕ ಮತ್ತು ಪಾರಂಪರಿಕ ಲಕ್ಷಣವನ್ನು ಈ ಪುರಾವೆ

ಗಳಿಂದ ಮಾತ್ರವೇ ಖಚಿತಪಡಿಸಿಕೊಳ್ಳಬಹುದು ಎಂದು ಡಾರ್ಸನ್ ಪ್ರತಿಪಾದಿಸಿದರು. ಪ್ರತಿಯೊಬ್ಬ ತಜ್ಞನೂ ಇವುಗಳ ಬಳಕೆಯಲ್ಲಿ ತಜ್ಞನಾಗಿರಬೇಕು. ಮಾನವ ಶಾಸ್ತ್ರಜ್ಞರು ಇವುಗಳ ಬಳಕೆಯನ್ನು ತಿಳಿದಿಲ್ಲ. ತಾವು ಅಧ್ಯಯನಕ್ಕೆ ಆರಿಸಿಕೊಂಡಂಥ ಸಮಾಜದ ಕಥೆಗಳು ಜಗತ್ತಿನ ಬೇರೆಕಡೆಯೂ ಇರುತ್ತವೆ ಎಂಬುದರ ಅರಿವು ಇವರಿಗಿಲ್ಲ. ಇವು ಆ ಒಂದು ಸಮಾಜದ ವಿಶಿಷ್ಟತೆಯನ್ನೇ ಪ್ರತಿನಿಧಿಸುತ್ತವೆ ಎಂದು ಹೇಳುತ್ತಾರೆ. ಮಾನವಶಾಸ್ತ್ರಜ್ಞರಿಗೆ ಆಶಯಸೂಚಿ ಮತ್ತು ವರ್ಗಸೂಚಿಗಳ ಬಳಕೆ ತಿಳಿದಿದ್ದೇ ಆದರೆ ಇಂತಹ ತಪ್ಪು ನಿರ್ಣಯಗಳು ಹೊಮ್ಮುತ್ತಿರಲಿಲ್ಲ ಎಂದು ಡಾರ್ಸನ್ ಸೂಚಿಸುತ್ತಾರೆ.

ಸೂಚಿಗಳುಒಂದು ಸಾಧನವೇ ಹೊರತು ಅವುಗಳ ಸಿದ್ಧತೆಯೇ ಅಧ್ಯಯನದ ಗುರಿಯಲ್ಲ ಎಂಬುದನ್ನು ಟೀಕಾಕಾರರು ಗಮನಿಸಿಸಬೇಕು ಎಂದು ಹೇಳುತ್ತ, ಕಥೆಯ ಪಾರಂಪರಿಕ ಲಕ್ಷಣವನ್ನು ಸ್ಥಾಪಿಸಲು ಅದರ ವಂಶವೃಕ್ಷವನ್ನು ಹುಡುಕಲು, ಅದರ ಕೌಟುಂಬಿಕ ಸಂಬಂಧಗಳನ್ನು ಗುರುತಿಸಿಲು ಸೂಚಕಗಳು ನೆರವಾಗುತ್ತವೆ. ಕಥೆಯ ಜಾನಪದೀಯತೆ ಮತ್ತು ಅದು ಯಾವ ಪ್ರದೇಶದಲ್ಲಿ ಹೆಚ್ಚು ಪ್ರಚಲಿತ ಮುಂತಾದ ಪ್ರಶ್ನೆಗಳಿಗೆ ಸೂಚಕಗಳು ಉತ್ತರ ನೀಡುತ್ತವೆ. ಸಂಗ್ರಹಿಸಿದ ಸಾಮಗ್ರಿಯ ರಾಶಿಯಲ್ಲಿ ಇವು ಸರಿಯಾದ ದಾರಿಯನ್ನು ತೋರಿಸುತ್ತವೆ ಎಂದು ಡಾರ್ಸನ್ ವಿವರಣೆ ನೀಡಿದಾರೆ.

ಪ್ರತಿಯೊಂದು ಪ್ರಕಾರಕ್ಕೂ ಅದರದೇ ಆದ ಪುನರ್ಗಳಿಕೆ ವ್ಯವಸ್ಥೆ ಇರುವುದು ಅಗತ್ಯ. ಸೂಚೀಕರಣ ಮತ್ತು ವರ್ಗೀಕರಣ ವ್ಯವಸ್ಥೆಗಳು ಪಠ್ಯಗಳನ್ನು ಹಾಗೂ ಕ್ಷೇತ್ರ ವರದಿಗಳನ್ನು ಸರಿಯಾಗಿ ಉಲ್ಲೇಖಿಸಲು ನೆರವಾಗುತ್ತವೆ. ಈ ಉಲ್ಲೇಖನ ಮಾಡುವುದೇ ಒಂದು ತಂತ್ರ, ಟಿಪ್ಪಣಿಗಳನ್ನು ಓದುವಂತಿರಬೇಕು, ಮಾಹಿತಿ ಪೂರ್ಣ ವಾಗಿರಬೇಕು. ವಿವರಣಾತ್ಮಕ ಟಿಪ್ಪಣಿಯಿಲ್ಲದ ಪಠ್ಯ, ಅಪಕ್ವ ಜಾನಪದ ತಜ್ಞನ ಲಕ್ಷಣ ಎಂಬುದು ಅವರ ಅಭಿಪ್ರಾಯ. ಪಠ್ಯಗಳ ಸಂರಕ್ಷಣೆಯೂ ಬಹು ಮುಖ್ಯ ವಾದ ಕೆಲಸ, ಕ್ಷೇತ್ರಕಾರ್ಯ ಸಂಗ್ರಹಣೆ, ಸೂಚೀಕರಣ ಹಾಗೂ ಪಠ್ಯಗಳ ಸಂರಕ್ಷಣೆ ಒಂದಕ್ಕೊಂದು ಅನ್ಯೋನ್ಯ ಸಂಬಂಧ ಹೊಂದಿರುವಂಥವು. ಪಠ್ಯ ಸಂಗ್ರಹಾಲಯದಲ್ಲಿ (Archives) ಪ್ರಕಾರಗಳನ್ನು ಪ್ರಮಾಣಭೂತವಾದಂಥ ಪರಾಮರ್ಶಕನ ವ್ಯವಸ್ಥೆ ಗಳಿಗನುಗುಣವಾಗಿ ವಿಂಗಡಿಸಬೇಕು. ಉದಾಹರಣೆಗೆ ಕಥೆಗಳನ್ನೂ ಆರೆ-ಥಾಂಸನ್ನರ ಸೂಚಿಯ ಪ್ರಕಾರ, ಬ್ಯಾಲಡ್‌ಗಳನ್ನು ಚೈಲ್ಡ್ ಮತ್ತು ಲಾಸ್ ಪ್ರಕಾರ, ನಂಬಿಕೆ ಗಳನ್ನು ಮೇಲ್ಯಾಂಡ್ ಹ್ಯಾಂಡ್‌ರ ಎರಡು ಸಂಪುಟಗಳ ಪ್ರಕಾರ ಇತ್ಯಾದಿ....ಜಾನಪದ ಸಂಗ್ರಹಾಲಯ ಪಾಲಕರು ವರ್ಗೀಕರಣಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಪದ್ಧತಿಗಳನ್ನೇ ಅನುಸರಿಸಿದರೂ ಕೂಡ ಇವು ಯಾವುದೇ ಒಂದು ಸಾರ್ವತ್ರಿಕವಾದ ಮಾದರಿಗೆ ಹೊಂದಿಕೊಳ್ಳುವಂಥವಲ್ಲ. ಅಂದರೆ, ಪ್ರತಿಯೊಂದು

ಸ್ವಲ್ಪ ಮಟ್ಟಿಗೆ ತನ್ನಷ್ಟಕ್ಕೇ ವಿಶಿಷ್ಟವಾಗಿರುತ್ತದೆ ಎಂದು ಡಾರ್ಸನ್ ಹೇಳುತ್ತಾರೆ. ಸಾಮಾನ್ಯವಾಗಿ ಸಂಗ್ರಹಾಲಯ ಪಾಲಕರಿಗೆ ಎದುರಾಗುವ ಸಮಸ್ಯೆ ಏನೆಂದರೆ ಒಬ್ಬರಿಂದ ಸಂಗ್ರಹಿತವಾದ ಜಾನಪದ ಸಾಮಗ್ರಿಯೆಲ್ಲವನ್ನೂ ಒಬ್ಬರ ಹೆಸರಿನಲ್ಲಿ ಒತ್ತಟ್ಟಿಗೆ ಇಡಬೇಕೇ ಅಥವಾ ಕಥೆ, ಹಾಡು, ಪದ್ಧತಿ ಪ್ರಕಾರವಾಗಿ ವಿಂಗಡಿಸಿ ಇಡ ಬೇಕೆ ಎಂಬುದು ಆಯಾ ಪ್ರಕಾರದ ವಿಶೇಷ ತಜ್ಞರಾದವರು, ಸಂಗ್ರಹವನ್ನು ಪ್ರಕಾರ ಗಳಿಗನುಗುಣವಾಗಿ ವಿಂಗಡಿಸಿ ಇಡಬೇಕೆಂದು ಬಯಸಿದರೆ ಜನಾಂಗೀಯ ದೃಷ್ಟಿಯ ಜಾನಪದ ತಜ್ಞರು ಪ್ರತಿಯೊಂದು ಸಂಗ್ರಹಕ್ಕೂ ತನ್ನದೇ ಆದ ವೈಶಿಷ್ಟವಿರುತ್ತದೆ, ಅದರಲ್ಲಿ ಸಂಗ್ರಾಹಕನ ಪೂರ್ವಗ್ರಹಿಕೆಯೂ ಸೇರಿರುತ್ತದೆ. ಆದ್ದರಿಂದ ಅವನು ಸಂಗ್ರಹಿಸಿದ ಎಲ್ಲ ಸಾಮಗ್ರಿಯನ್ನೂ ಒತ್ತಟ್ಟಿಗೆ ಇಡುವುದು ಜನಾಂಗೀಯ ವೈಲಕ್ಷಣ ಗಳನ್ನು ತಿಳಿಯುವ ದೃಷ್ಟಿಯಿಂದ ಒಳ್ಳೆಯದು ಎಂದು ಅಭಿಪ್ರಾಯಪಡುತ್ತಾರೆ.19 ಹಸ್ತಪ್ರತಿಗಳನ್ನು ವಿಂಗಡಿಸುವ ಸಮಸ್ಯೆಗಳಿಗಿಂತ ಧ್ವನಿಮುದ್ರಿತ ಟೇಪ್‌ಗಳನ್ನು ಸಂಗ್ರಹಿಸುವ ಸಮಸ್ಯೆಗಳು ಭಿನ್ನ, ಟೇಪ್‌ಗಳ ಮೂಲ ಪ್ರತಿಯನ್ನು ರಕ್ಷಿಸುವುದಕ್ಕಾಗಿ ನಕಲು ಮಾಡುವುದು ಅಗತ್ಯವಾಗುತ್ತದೆ. ಹಸ್ತಪ್ರತಿಗಳಂತೆ ಇಲ್ಲಿ ಮರುಜೋಡಣೆಗೆ ಸಾಧ್ಯವಾಗುವುದಿಲ್ಲ. ಒಬ್ಬ ಉತ್ತಮ ಜಾನಪದ ತಜ್ಞನಿಗೆ ಸಾಂಸ್ಥಿಕ ಪಠ್ಯ ಸಂಗ್ರಹಾ ಲಯಗಳನ್ನು ಹೇಗೆ ನಿರ್ಮಿಸಬೇಕೆಂಬುದರ ಬಗ್ಗೆ ಸರಿಯಾದ ತಿಳುವಳಿಕೆ ಇರುವುದು ಅಗತ್ಯ ಎಂದು ಡಾರ್ಸನ್ ಹೇಳುತ್ತಾರೆ.

**ಗ್ರಂಥ ವಿವರಣಾ ಪಟ್ಟಿ**

ಜಾನಪದ ಅಂಶಗಳು ಇಡೀ ಜಗತ್ತನ್ನೇ ವ್ಯಾಪಿಸುತ್ತವೆ ಎಂಬ ಅರ್ಥದಲ್ಲಿ ಇಡೀ ಜಗತ್ತೇ ಜಾನಪದ ತಜ್ಞನ ಕ್ಷೇತ್ರ. ಅವನು ಗ್ರಂಥಗಳ ವಿವರವನ್ನು ತಿಳಿದಿರಬೇಕು. ಬೇರೆ ಬೇರೆ ಭಾಷೆಗಳಲ್ಲಿ ಪ್ರಕಟವಾಗುವ ಗ್ರಂಥಗಳು ತಮ್ಮ ಸಹೋದ್ಯೋಗಿಗಳಿಗೆ ತಿಳಿಯಲಿ ಎಂಬುದಕ್ಕಾಗಿಯೇ ಕೆಲವು ಜಾನಪದ ವಿದ್ವಾಂಸರು ಗ್ರಂಥವಿವರ ಪಟ್ಟ ಸಿದ್ಧಪಡಿಸುವುದಕ್ಕೆ ತಮ್ಮ ಬಹುತೇಕ ಶಕ್ತಿ ಸಾಮರ್ಥ್ಯಗಳನ್ನು ವಿನಿಯೋಗಿಸಿದ್ದಾರೆ ಎಂದು ಹೇಳುತ್ತಾ ಹೀಗೆ ಪ್ರಕಟವಾಗಿರುವ ಕೆಲವು ಮುಖ್ಯವಾದ ಗ್ರಂಥವಿವರಪಟ್ಟಿಗಳ ಕಡೆ ಡಾರ್ಸನ್ ಜಾನಪದಾಸಕ್ತರ ಗಮನ ಸೆಳೆದಿದ್ದಾರೆ. 20

**ಜಾನಪದ ಅಂತರ್ ಶಿಸ್ತೀಯ ಸಂಬಂಧಗಳು**

ಜಾನಪದವು ಏಕಕಾಲದಲ್ಲಿಯೇ ಒಂದು ಸ್ವತಂತ್ರ ಶಿಸ್ತು ಹಾಗೂ ಇತರ ಶಿಸ್ತು ಗಳೊಂದಿಗೂ ಅನ್ಯೋನ್ಯ ಸಂಬಂಧ ಹೊಂದಿದೆ ಎಂಬುದು ಡಾರ್ಸನ್ನರ ಮುಖ್ಯ ಪ್ರತಿ ಪಾದನೆ ಆಗಿತ್ತು. ಜಾನಪದ ತಜ್ಞನು ಅಧ್ಯಯನಿಸುವ ಸಾಮಗ್ರಿಯ ಸ್ವರೂಪವೇ ಇತರ ವಸ್ತುಗಳೊಂದಿಗೆ ವ್ಯವಹರಿಸುವುದನ್ನು ಅನಿವಾರ್ಯವಾಗಿಸುತ್ತದೆ. ಮುಖ್ಯ ವಾಗಿ, ಮಾನವಶಾಸ್ತ್ರ, ಸಾಹಿತ್ಯ ಹಾಗೂ ಚರಿತ್ರೆ ಮತ್ತು ಸಮಾಜಶಾಸ್ತ್ರಗಳೊಂದಿಗೆ

ಜಾನಪದವು ಹೊಂದಿರುವ ಸಂಬಂಧಗಳನ್ನು ಗಮನಿಸಬಹುದಾಗಿದೆ. ಫ್ರಾನ್ಸ್ ಬೊಯಾಸ್ ನಂತಹ ಮಾನವ ಶಾಸ್ತ್ರಜ್ಞರು ಅಮೆರಿಕನ್ ಇಂಡಿಯನ್ನರ ಹಾಗೂ ಮಊಟ-ಹರ್ಸೋವಿಟ್ಸ್ ಅವರು ಬುಡಕಟ್ಟು ಆಫ್ರಿಕನ್ನರ ಮಟ್ಟಿಗೆ ಸಾಹಿತ್ಯ ವನ್ನೂ ಸಂಗ್ರಹಿಸುವಂತೆ ತಮ್ಮ ವಿದ್ಯಾರ್ಥಿಗಳನ್ನು ಪ್ರೇರೇಪಿಸುತ್ತಿದ್ದ ಅಂಶವನ್ನು ಡಾರ್ಸನ್ ಉಲ್ಲೇಖಿಸುತ್ತಾರೆ. ಒಂದು ಸಂಸ್ಕೃತಿಯನ್ನು ಪರಿಪೂರ್ಣವಾಗಿ ಅರಿತು ಕೊಳ್ಳಬೇಕಾದರೆ ಇದು ಅಗತ್ಯ ಎಂಬುದು ಅವರುಗಳ ದೃಷ್ಟಿಯಾಗಿತ್ತು. ಜೇವ ಚೈಲ್ಡ್ ಮತ್ತು ಕಿಟ್ರಿಡ್ಜ್ ರಂತಹ ಇಂಗ್ಲಿಷ್ ಪ್ರಾಚಾರ್ಯರು ಬ್ಯಾಲಡ್‌ಗಳ ಬಗ್ಗೆ ಮತ್ತು ಜನಪದರು ಸೃಷ್ಟಿಸಿದ ಇತರ ಪ್ರಕಾರಗಳ ಸೌಂದರ್ಯಾತ್ಮಕ ಅಂಶಗಳ ಬಗ್ಗೆ ಆಸಕ್ತರಾಗಿದ್ದರು. ಅವರ ಬ

ಯೂರೋಪ್, ಏಷಿಯಾ ಹಾಗೂ ಆಫ್ರಿಕ ಕಾಗಳ ಇತಿಹಾಸ ತಜ್ಞರು ಇತಿಹಾಸ ಅಧ್ಯಯನದಲ್ಲಿ ಜಾನಪದೀಯ ದೃಷ್ಟಿಕೋನ ಅಗತ್ಯವಿರುವುದರ ಬಗ್ಗೆ ಹೆಚ್ಚು ವಿಶ್ವಾಸ ತಳೆದಿದ್ದಾರೆ. ಅಮೆರಿಕಾದಲ್ಲಿಯೂ ಸಹ ಇತ್ತೀಚೆಗೆ ಇಂತಹ ದೃಷ್ಟಿಕೋನ ಪ್ರಾಪ್ತ ವಾಗಿದ್ದು ಧ್ವನಿಮುದ್ರಿತ ಸಂದರ್ಶನಗಳು ಹಾಗೂ ಮೌಖಿಕ ಇತಿಹಾಸ ಪರಂಪರೆಗಳು ಲಿಖಿತ ದಾಖಲೆಗಳಿಗೆ ಪೂರಕವಾದಂಥ ಮಾಹಿತಿ ಒದಗಿಸಬಲ್ಲವು ಎಂಬುದನ್ನು ಕಂಡು ಕೊಳ್ಳುತ್ತಿರುವ ಅಂಶವನ್ನು ಡಾರ್ಸನ್ ಉಲ್ಲೇಖಿಸುತ್ತಾರೆ.21

ಇದೇ ರೀತಿ ಜಾನಪದದೊಡನೆ ನಿಕಟ ಕೊಳುಕೊಡುಗೆ ಹೊಂದಿರುವ ಇನ್ನೊಂದು ಕ್ಷೇತ್ರವೆಂದರೆ ಸಂಗೀತ. ಇಂದಿನ ಬ್ಯಾಂಡ್ ವಿದ್ವಾಂಸರು ಪಠ್ಯಗಳಂತೆಯೇ ಸಂಗೀತ ವನ್ನೂ * ದಾಖಲಿಸಿಕೊಂಡು ಪರಿಶೀಲಿಸುವುದರ ಮಹತ್ವವನ್ನೂ ಆರ್ಥಮಾಡಿಕೊಂಡಿದ್ದಾರೆ ಎಂದು ಡಾರ್ಸನ್ ಹೇಳುತ್ತಾರೆ.

ಯಾವುದೇ ಭಾಷೆ ಮತ್ತು ಸಾಹಿತ್ಯದ ಇಲಾಖೆಯು ತನ್ನ ಸಾಹಿತ್ಯಕ ಅಧ್ಯಯನ ಗಳು ಜಾನಪದ ಮಾದರಿಗಳೊಂದಿಗೆ ಹೊಂದಿರುವ ಸಂಬಂಧವನ್ನು ಪರಿಶೀಲಿಸುವಂತಹ ಒಬ್ಬ ವಿದ್ವಾಂಸನನ್ನೆ ಹೊಂದಿರುವುದು ಅಗತ್ಯ ಎಂಬುದು ಡಾರ್ಸನ್ ನಿಲುವು ಭಾಷಾ ಹಿನ್ನೆಲೆ ಹೊಂದಿರುವಂಥ ಜಾನಪದ ಸಂಶೋಧಕರು ಸಾಮಾನ್ಯವಾಗಿ ಜಾನಪದ ಸಾಮಗ್ರಿಯನ್ನು ಸಾಹಿತ್ಯಕ ದೃಷ್ಟಿಯಿಂದ ವಿಶ್ಲೇಷಿಸುತ್ತಾರೆ. ಮಾನವಿಕಗಳಲ್ಲಿನ ಇನ್ನೂ ಇತರ ಇಲಾಖೆಗಳಲ್ಲಿ ಜಾನಪದೊಂದಿಗೆ ಸಂಬಂಧ ಹೊಂದಿವೆ. ಲಲಿತ ಕಲೆಗಳ ಇಲಾಖೆಯ ವಿಷಯವನ್ನೇ ಗಮನಿಸುವುದಾದರೆ ಕಲೆಯ ಇತಿಹಾಸಕ್ಕೂ ಹಾಗೂ ಜನಪದಕಲೆ, ಕುಶಲಕಲೆ ಹಾಗೂ ಶಿಲ್ಪಕಲೆಗೂ ಇರುವ ಸಂಬಂಧವನ್ನು ಅಧ್ಯಯನಿಸ ಬಹುದು. ರಂಗಭೂಮಿ ಮತ್ತು ನಾಟಕ ಇಲಾಖೆಯು ಜನಪದ ನಾಟಕ ಹಾಗೂ ಜನಪದ ರಂಗಭೂಮಿಯ ವಿಷಯಗಳನ್ನು ತನ್ನ ಪಠ್ಯ ಕ್ರಮದಲ್ಲಿ ಆಳವಡಿಸಿಕೊಳ್ಳ ಬಹುದು. ಜನಪದ ನೃತ್ಯವು ದೈಹಿಕ ಶಿಕ್ಷಣ ಇಲಾಖೆಗೆ ಪ್ರವೇಶ ಪಡೆಯಬಹುದು.

ಆದರೆ ಪರಂಪರಾಗತ ಜನಪದ ಬೌದ್ಧಿಕತೆಯಲ್ಲಿರುವ ತಾತ್ವಿಕ ಮೌಲ್ಯಗಳ ಬಗ್ಗೆ ತತ್ವ ಶಾಸ್ತ್ರ ಪ್ರಾಚಾರ್ಯರು ಅಷ್ಟೇನೂ ಆಕರ್ಷಿತರಾಗಿಲ್ಲ. ಜನಪದ ಕಥೆ ಮತ್ತು ಇತರ ಜನಪದ ಪ್ರಕಾರಗಳನ್ನು ಸಾರ್ವತ್ರಿಕ ಮಾದರಿಗಳ ದೃಷ್ಟಿಯಲ್ಲಿ ವಿವರಿಸುವುದಕ್ಕೆ ರಾಚನಿಕ ಭಾಷಾಶಾಸ್ತ್ರ ಪ್ರೇರಣೆ ಒದಗಿಸಿತು. ನಗರಕ್ಕೆ ವಲಸೆಬಂದ ಒಂದು ಕುಟುಂಬ ದಲ್ಲಿ ಜಾನಪದ ಪ್ರಸಾರವನ್ನೂ ಅಧ್ಯಯಿನಿಸುವುದಕ್ಕೆ ಕಲಿಕೆಯ ವರ್ತನೆ ಕುರಿತ ಮನೋವಿಜ್ಞಾನದ ಸಿದ್ಧಾಂತವನ್ನು ಅನ್ವಯಿಸಿದ ಇದೆ. ದಾಹರಣೆಯ ರಾಜಕೀಯ ವಿಜ್ಞಾನ ಮತ್ತು ಜಾನಪದಗಳ ಸಂಬಂಧ ಅಷ್ಟೇನೂ ಅನ್ಯೋನ್ಯವಾಗಿ ಬೆಳೆದಿಲ್ಲದಿದ್ದರೂ ಈ ದಿಸೆಯಲ್ಲಾದ ಕೆಲವೇ ಪ್ರಯತ್ನಗಳು ಅಂತಿಮ ಫಲಿತಾಂಶವನ್ನೇ ತೋರಿಸಿವೆ ಎಂದು ಡಾರ್ಸನ್ ಅವರು ಒಂದು ಉದಾಹರಣೆಯಮೂಲಕ ಸ್ಪಷ್ಟ  ಪಡಿಸುತ್ತಾರೆ. ಬೊಸ್ಟನ್ನಿನಲ್ಲಿರುವ ಕಪ್ಪು ಜನರ ವಸತಿಯಲ್ಲಿ ಕರಿಯರ ರಾಜಕೀಯ ಸಂಘಟನೆಯನ್ನು ಮಾಡುತ್ತಿದ್ದ ಯುವತಿಯೊಬ್ಬಳು ಕರಿಯರ ಜಾನಪದವನ್ನು ಅಭ್ಯಾಸಮಾಡಿ, ಈ ಪರಂಪರೆಗಳ ಅರಿವಿಲ್ಲದಿದ್ದರೆ ತಾನು ಈ ಜನರ ರಾಜಕೀಯ ಸಂಯೋಜನೆಗಳನ್ನು ಸರಿಯಾಗಿ ಗ್ರಹಿಸುವುದು ಸಾಧ್ಯವಾಗುತ್ತಿರಲಿಲ್ಲ ಎಂದು ಡಾರ್ಸನ್ನರಿಗೆ ವರದಿ ಮಾಡಿದಳಂತೆ.22

ಭೂಗೋಳ ಶಾಸ್ತ್ರವೂ ಸಹ ಅದರ ಸಾಂಸ್ಕೃತಿಕ ಭೂಗೋಳ ಶಾಸ್ತ್ರ ಎಂಬ ಶಾಖೆಯ ವಿಷಯದಲ್ಲಿ ಜಾನಪದದ ಸ್ನೇಹಹಸ್ತ ಚಾಚಿದೆ. ಜಾನಪದ ಮತ್ತು . . ಹಿಂದಿರುವ ಭೌತಿಕ ವಿಜ್ಞಾನಗಳೊಂದಿಗೆ ಸಂಬಂಧವಿದೆ. ಅಟ್ಲಾಂಟಿಸ್‌ನ ಐತಿಹ್ಯದ ಭೂಗರ್ಭಶಾಸ್ತ್ರದ ತತ್ವವನ್ನು ಅಧ್ಯಯಿನಿಸಿದ ಒಬ್ಬಾಕೆ ಜಾನಪದ ಮತ್ತು ಪುರಾಣ ಶಾಸ್ತ್ರದೊಂದಿಗೆ ಭೂಗರ್ಭಶಾಸ್ತ್ರವು ಹೊಂದಿರುವ ಸಂಬಂಧವನ್ನು ವಿವರಿಸುವುದಕ್ಕಾಗಿ ಭೂಗರ್ಭ ಪುರಾಣಶಾಸ್ತ್ರ (Geomythology) ಎಂಬ ಹೊಸ ಪದವನ್ನೇ ಹುಟ್ಟು ಹಾಕಿದ ಅಂಶವನ್ನು ಡಾರ್ಸನ್ ಉಲ್ಲೇಖಿಸುತ್ತಾರೆ.23 ಭೂಗರ್ಭ ಪುರಾಣಶಾಸ್ತ್ರವು ಅಗ್ನಿ ಪರ್ವತ, ಭೂಕಂಪ ಹಾಗೂ ವಿನಾಶಕಾರಿ ಪ್ರಾಕೃತಿಕ.. ವಿದ್ಯಮಾನಗಳನ್ನು ಒಳಗೊಳ್ಳುವ ಮತ್ತು ಸಾಕಷ್ಟು ಖಚಿತವಾಗಿ ದಾಖಲಿಸಿರುವ ಐತಿಹ್ಯಕ್ಕೆ ಸಾಮಗ್ರಿಯನ್ನು ಪರಿಶೀಲಿಸುತ್ತದೆ. ಮನುಷ್ಯನ ಇತಿಹಾಸದ ಬಹು ಪೂರ್ವಕಾಲದಲ್ಲಿ ರೂಪುಗೊಂಡ ಭೂಪ್ರದೇಶಗಳ ಮತ್ತು ನೈಸರ್ಗಿಕ ವೈಚಿತ್ರಗಳನ್ನು ವಿವರಿಸುವ ವಿವರಣಾತ್ಮಕ ಕಥೆಗಳನ್ನು ಇದು ಅಧ್ಯಯನಿಸುತ್ತದೆ. ಇಂತಹ ವಿವಿಧ ಅಧ್ಯಯನದ ಶಿಸ್ತುಗಳೊಂದಿಗೆ ಜಾನಪದವು ಹೊಂದಿರುವ ಕೊಳುಕೊಡುಗೆಯ ಸಂಬಂಧವನ್ನು ವಿವರಿಸುವ ಮೂಲಕ ಜಾನಪದ ವಿದ್ಯಾರ್ಥಿಗಳಿಗೆ ಅಧ್ಯಯನದ ಅನೇಕ ಹೊಸ ದಾರಿಗಳನ್ನು ಕ್ಷೇತ್ರಗಳನ್ನು ಡಾರ್ಸನ್ ತೋರಿಸಿದ್ದಾರೆ.

**ಅಡಿ ಟಿಪ್ಪಣಿಗಳು :**

1. R. M. Dorson: Folklore Selected Essays. Indiana University Press, Bloomington/London. 1972, p. 12.
2. R. M. Dorson (Ed.) Folklore and Folklife-an Introduction Chicago, The University of Chicago press, 1972 p. 6.
3. ಅದೇ, ಪುಟ 7.
4. R. M. Dorson Folklore Selected essays, p. 36
5. ಅದೇ, ಪುಟ 16
6. R. M. Dorson (Ed.) Buying the wind-Regional Folklore in the United States, University of Chicago Press, Chicago 1964, p. 9
7. Folklore: Selected Essays,*p. 13*
8. Buying the wind, p. 5
9. ಅದೇ, ಪುಟ 7
10. ಅದೇ, ಪುಟ 14
11. ಅದೇ, ಪುಟ 1
12. ಅದೇ, ಪುಟ 2
13. ಅದೇ, ಪುಟ 3
14. ಅದೇ, ಪುಟ 4
15. ಅದೇ, ಪುಟ 4
16. Folklore Selected essays, 8, 17
17. R M. Dorson: American folklore, Jaico impression, Madras, 1966, p. 5
18. Folklore Selected essays, p. 19
19. ಪುಟ 22
20. ಅದೇ, ಪುಟ 23
21. ಅದೇ, ಪುಟ 4
22. ಅದೇ, ಪುಟ 7,
23. ಅದೇ, ಪುಟ 8

# ಡಾರ್ಸನ್ನರ ಕೆಲವು ಮುಖ್ಯ ಕೃತಿಗಳು

ಅಮೆರಿಕನ್ ಜಾನಪದ1 (American Folklore)-ಇದು ಡಾರ್ಸನ್ನರು ಜಾನಪದ ಅಧ್ಯಯನದ ತಾರುಣ್ಯದಲ್ಲಿಯೇ ಪ್ರಕಟಿಸಿದ ಒಂದು ಮಹತ್ವದ ಕೃತಿ. ಅಮೆರಿಕನ್ ಜಾನಪದದ ಸ್ವರೂಪ ಹಾಗೂ ಇವರ ಅಧ್ಯಯನವನ್ನು ಕೈಗೊಳ್ಳುವ ವಿಧಾನಗಳ ಬಗ್ಗೆ ಇಲ್ಲಿ ತುಂಬ ದೀರ್ಘವಾಗಿ ಪ್ರಸ್ತಾಪಿಸಲಾಗಿದೆ. ಗಿದೆ. ಅಮೆರಿಕನ್ ಚರಿತ್ರೆ ಯನ್ನು ರೂಪಿಸಿರುವ ವಿಶೇಷ ಸಂಗತಿಗಳ ಬೆಳಕಿನಲ್ಲಿ ಅಮೆರಿಕನ್ ಜಾನಪದ ಅಧ್ಯಯನ ವನ್ನು ಕೈಗೊಳ್ಳಬೇಕು ಎಂದು ಈ ಕೃತಿಯಲ್ಲಿ ಡಾರ್ಸನ್ ಪ್ರತಿಪಾದಿಸುತ್ತಾರೆ.

ಅಮೆರಿಕನ್ ಬದುಕಿನ ವೈವಿಧ್ಯಮಯವಾದ ಹಾಗೂ ಗಮನಾರ್ಹವಾದ ಅಂಶ ಗಳ ಚರಿತ್ರೆ ಇಲ್ಲಿ ಪ್ರತಿಪಾದಿತವಾಗಿದೆ. ಅಮೆರಿಕೆಯಲ್ಲಿ ಕೆಲಸ ಮಾಡುವ ತಜ ಮೊದಲು ತನ್ನ ಸಿದ್ಧಾಂತದ ನೆಲೆಯನ್ನು ನಿರ್ಧರಿಸಿಕೊಂಡು ಮುಂದುವರೆಯುವುದು ಅಗತ್ಯ, ಇಲ್ಲವಾದರೆ ಅವನು ಕೇವಲ ಹವ್ಯಾಸಿ ಸಂಗ್ರಾಹಕನಾಗಿಯೇ ಉಳಿಯುತ್ತಾನೆ. ಎಂದು ಕೃತಿಯ ಆರಂಭದಲ್ಲಿಯೇ ಡಾರ್ಸನ್ ಎಚ್ಚರಿಸುತ್ತಾರೆ. ಅಮೆರಿಕನ್ ಜಾನಪದ ಅಧ್ಯಯನವನ್ನು ಕೈಗೊಳ್ಳುವ ಮೊದಲು ಅಲ್ಲಿ ಪ್ರಚಲಿತವಿದ್ದ ಜಾನಪದ ಪಂಥಗಳನ್ನು ಡಾರ್ಸನ್ನರು ಕೂಲಂಕಷವಾಗಿ ಅಧ್ಯಯನ ಮಾಡಿದರು. ಈ ಅಧ್ಯಯನದ ಫಲವಾಗಿ ಇಲ್ಲಿನ ಬದುಕಿಗೆ ಹೊಸ ರೀತಿಯದೇ ಆದ ವಿಶ್ಲೇಷಣೆ ಅಗತ್ಯವಿದೆ ಎಂಬುದನ್ನು ಕಂಡು ಕೊಂಡರು. ಇಲ್ಲಿಯ ನಾಗರಿಕತೆಯ ವಿಶೇಷ ಅಂಶಗಳ ಕಾರಣದಿಂದಾಗಿ ಇಲ್ಲಿನ ಜಾನ ಪದದಲ್ಲಿ ಎದುರಾಗುವ ವಿಶಿಷ್ಟ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳಬೇಕಾದರೆ ತಜ್ಞ

ನಾದವನು ತೌಲನಿಕ ಜಾನಪದದಲ್ಲಿಯೂ ಮತ್ತು ಅಮೆರಿಕಾದ ಚರಿತ್ರೆಯ ಬಗ್ಗೆಯೂ ತೀವ್ರ ತರಬೇತಿ ಪಡೆಯುವುದು ಅಗತ್ಯ ಎಂದು ಅಭಿಪ್ರಾಯ ಪಟ್ಟರು.

ಅಮೆರಿಕನ್ ಜಾನಪದದಲ್ಲಿನ ಎರಡು ಮುಖ್ಯ ವಿದ್ಯಮಾನಗಳಲ್ಲಿ ಒಂದನ್ನು ಡಾರ್ಸನ್ನರು ಫೇಕ್‌ಲೋರ್ ಎಂದು ಗುರುತಿಸುತ್ತಾರೆ. ಅಮೆರಿಕನ್ ಚರಿತ್ರೆ ಹಾಗೂ ಅದರ ನಾಗರಿಕತೆ ಬೆಳೆದು ಬಂದ ದಾರಿಯ ಬಗ್ಗೆ ಯಾವ ಪರಿಕಲ್ಪನೆಯೂ ಇಲ್ಲದಂತಹ ಕೆಲವು ವ್ಯಕ್ತಿಗಳು ಇತರ ದೇಶಗಳಲ್ಲಿದ್ದಂತಹ ರಾಷ್ಟ್ರ ಪ್ರಜ್ಞೆ, ಸ್ವಂತಿಕೆಗಳನ್ನು ಪ್ರತಿ ಬಿಂಬಿಸುವಂತಹುದೇ ಜಾನಪದವನ್ನು ತಮ್ಮಲ್ಲಿಯೂ ಹೊಂದುವ ಉದ್ದೇಶದಿಂದ ಜಾನ ಪದ ಎಂಬ ಹೆಸರಿನಲ್ಲಿ ಕೃತಕ ಜಾನಪದವನ್ನು ಸೃಷ್ಟಿಸತೊಡಗಿದರು ಮತ್ತು ಜಾನಪದದ ಹೆಸರಿನಲ್ಲಿ ಸ್ವಂತಕ್ಕೆ ಲಾಭ ಮಾಡಿಕೊಳ್ಳತೊಡಗಿದರು. ಇದಕ್ಕೆ ಪ್ರತಿಯಾಗಿ ಕೆಲವು ವೃತ್ತಿಪರ ಜಾನಪದ ವಿದ್ವಾಂಸರು ಅಮೆರಿಕಾದ ಮೂಲೆಮೂಲೆಗಳಿಂದ ಜಾನಪದವನ್ನೂ ಸಂಗ್ರಹಿಸಿದರು. ಆದರೆ ಇವರ ವಿಶ್ಲೇಷಣೆಗಳೆಲ್ಲವೂ ಈಗಾಗಲೇ ಪ್ರಚಲಿತವಿದ್ದ ಇಂಡೋ ಯೂರೋಪಿಯನ್ ಸಿದ್ಧಾಂತ, ಸಾಂಸ್ಕೃತಿಕ ಮಾನವ ಶಾಸ್ತ್ರೀಯ ಸಿದ್ಧಾಂತ, ಫ್ರಾಯ್ಡ್, ಯೂಂಗ್ ಮೊದಲಾದವರ ಮನೋವೈಜ್ಞಾನಿಕ ಸಿದ್ಧಾಂತ ಇತ್ಯಾದಿಗಳಿಂದ ಪೂರ್ವಗ್ರಹಪೀಡಿತವಾಗಿದ್ದವು. "ಈ ಯಾವಿದೇ ವಿಶ್ಲೇಷಣೆಯೂ ಜಾನಪದ ಅಧ್ಯಯನವನ್ನು ಅಮೆರಿಕನ್ ನಾಗರಿಕತೆಯ ಚರಿತ್ರೆಯೊಂದಿಗೆ ಸಂಯೋಜಿಸಿಲ್ಲ. ಸಂಯುಕ್ತ ಸಂಸ್ಥಾನದ ಜಾನಪದ ಪರಂಪರೆಗಳನ್ನು ಇಲ್ಲಿನ ಇತಿಹಾಸ, ವಿಶಿಷ್ಟ, ಸನ್ನಿವೇಶ ಹಾಗೂ ಪರಿಸರದ ಹಿನ್ನೆಲೆಯಲ್ಲಿ ಅಧ್ಯಯನಿಸುವುದೇ ಸರಿಯಾದ ದೃಷ್ಟಿ, ಇನ್ನಾವ ಚರಿತ್ರೆ ಅಥವಾ ಜಾನಪದವೂ ಸಹ ವಸಾಹತುಗಾರಿಕೆ, ವಲಸೆ, ವಲಸೆ, ನೀಗ್ರೋ ಗುಲಾಮಗಿರಿ, ಪಾಶ್ಚಾತ್ಯ ಚಲನೆ ಅಥವಾ ಸಮೂಹ ಸಂಸ್ಕೃತಿಗಳೊಡನೆ ಇಷ್ಟರ ಮಟ್ಟಿನ ಬೆಸುಗೆ ಹೊಂದಿಲ್ಲ"2 ಎಂಬುದಾಗಿ ಡಾರ್ಸನ್ ಇಲ್ಲಿ ಪ್ರತಿಪಾದಿಸಿದ್ದಾರೆ.

'ಅಮೆರಿಕೆಯ ಸಂದರ್ಭದಲ್ಲಿ ನಾವು ಸಂಗ್ರಹಿಸಿದ್ದು ಜಾನಪದವೇ ಹೌದು ಎಂಬು ದನ್ನು ಸಮರ್ಥಿಸುವುದಕ್ಕಾಗಿ ಪಠ್ಯಗಳನ್ನು ವಸ್ತ್ರಗಳಿಂದಲೇ ಸಂಗ್ರಹಿಸಬೇಕು. ವಕ್ತ್ಯಗಳ ಹಿನ್ನೆಲೆಯ ಸಂಪೂರ್ಣ ವಿವರಗಳನ್ನು ಕೊಡಬೇಕು. ಸಾಮಗ್ರಿಯನ್ನು ಕ್ಷೇತ್ರದಿಂದಲೇ ಸಂಗ್ರಹಿಸಿರಲಿ, ಇಲ್ಲವೇ ಮುದ್ರಿತ ಮೂಲಗಳಿಂದ ಸಂಗ್ರಹಿಸಿರಲಿ ಅವು ಗಳನ್ನು ಬೃಹತ್ ಸೂಚಿಗಳೊಂದಿಗೆ (ಆಶಯ ಸೂಚಿ, ವರ್ಗಸೂಚಿ ಮೊದಲಾದ.... ಹಾಗೂ ಆಧಾರಗ್ರಂಥಗಳೊಂದಿಗೆ ತಾಳೆ ನೋಡಬೇಕು ಎಂದು ಡಾರ್ಸನ್ ಹೇಳು ತ್ತಾರೆ"3

ಸಂಯುಕ್ತ ಸಂಸ್ಥಾನದಲ್ಲಿರುವ ನಾಲ್ಕು ಶ್ರೀಮಂತ ಪ್ರಾದೇಶಿಕ ಜನಪದ ಸಂಸ್ಕೃತಿಗಳ ಪ್ರಧಾನ ವಿಶಿಷ್ಟಾಂಶಗಳ ಒಂದು ಸಮಗ್ರ ವಿಶ್ಲೇಷಣೆಯನ್ನು ಈ ಕೃತಿ

ಯಲ್ಲಿ ಮಾಡಲಾಗಿದೆ. ಇದರ ಜೊತೆಗೆ ಡಾರ್ಸನ್ ಅವರು ತಮ್ಮದೇ ಕ್ಷೇತ್ರ ಕಾರ್ಯಾ ನುಭವವನ್ನು ಆಧರಿಸಿ ಆಧುನಿಕ ಜಾನಪದ (Modern Folklore) ಎಂಬ 5ನೇ ಜಾನಪದ ವಲಯವನ್ನು ವಿವರಿಸಿದ್ದಾರೆ.

ಅಮೆರಿಕಾ 17ನೇ ಶತಮಾನದಲ್ಲಿ ಹುಟ್ಟಿಕೊಂಡ ಹೊಸದೇಶ. ಇದು ತನ್ನದೇ ಎಂದು ಹೇಳಿಕೊಳ್ಳುವಂತಹ ಸಾಂಸ್ಕೃತಿಕ ಅಥವಾ ಜಾನಪದ ಪರಂಪರೆಯನ್ನು ಹೊಂದಿರ ಲಿಲ್ಲ. ಆದಾಗ್ಯೂ ಸ್ವಲ್ಪವೇ ಕಾಲಾವಧಿಯಲ್ಲಿ ಒಂದು ಅಮೆರಿಕನ್ ನಾಗರಿಕತೆ ಉದ್ಭವಿಸಿತು. ಇಲ್ಲಿಗೆ ಬಂದು ನೆಲೆಯೂರಿದ ಅನ್ವೇಷಕರು ವಲಸೆ ಬಂದ ಯೂರೋಪಿಯನ್ ಮತ್ತು ಸ್ಥಳೀಯ ಇಂಡಿಯನ್ ಪರಂಪರೆಗಳು ಈ ಜಾನಪದವನು ರೂಪಿಸಿದ್ದಾರೆ. ವಲಸೆ ಬಂದ ಯೂರೋಪಿಯನ್ ಮತ್ತು ಏಷಿಯಾಗಳ ಜನಪದರು ಇಲ್ಲಿ ನೆಲೆ ನಿಂತು ಹೊಸ ಭಾಷೆ ಹೊಸ ನಡವಳಿಕೆಗಳನ್ನು ಕಲಿತ ನಂತರ ಅವರ ಪರಂ ಪರಾಗತ ಸಂಪ್ರದಾಯಗಳ ಗತಿ ಏನಾಗುತ್ತದೆ. ಎಷ್ಟು ಪ್ರಮಾಣದ ಹಳೆಯ ಜಾನಪದವನ್ನು ಉಳಿಸಿಕೊಂಡು ಅದನ್ನು ತಮ್ಮ ಮಕ್ಕಳಿಗೆ ವರ್ಗಾಯಿಸುತ್ತಾರೆ ? ಯಾವ ಭಾಗಗಳನ್ನು ಕೈಬಿಡುತ್ತಾರೆ ? ಯಾವ ಪ್ರಕ್ಷೇಪಗಳು ನಡೆಯುತ್ತವೆ ? ಹಳೆಯ ಗ್ರಾಮೀಣ ೪೦- ನಂಬಿಕೆ ಹಾಗೂ ಅಮೆರಿಕಾದ ಭೌತಿಕ ವಾಸ್ತವಗಳ ನಡುವೆ ಯಾವ ರೀತಿಯ ಹೊಂದಾಣಿಕೆ ನಡೆಯುತ್ತದೆ ? ಇವೇ ಮೊದಲಾದ ಪ್ರಶ್ನೆಗಳ ವಿಶ್ಲೇಷಣೆ ಯನ್ನು ಡಾರ್ಸನ್ ನಡೆಸಿದ್ದಾರೆ.

ಅಂತರ್ ಯುದ್ಧದ ನಂತರ ಅಮೆರಿಕದ ಸಂಸ್ಕೃತಿಯ ಸ್ವರೂಪ ಬದಲಾಯಿತು. ನಗರಗಳು, ಕೈಗಾರಿಕೆಗಳು ರೂಪುಗೊಂಡವು. ಮಾಧ್ಯಮ ಹಾಗೂ ಏಕರೂಪತೆಯ ಜನ ಸಮೂಹ ಜನಪದರ ಸ್ವರೂಪವನ್ನೇ ಬದಲಿಸಿದವು. ಬಹುತೇಕ ಜಾನಪದತಜ್ಞರು ಸಮಕಾಲೀನ ಅಮೆರಿಕಾದ ಸಮೂಹ ಸಂಸ್ಕೃತಿ ಯಾವುದೇ ಪರಂಪರೆಯಿಲ್ಲದು ಎಂದು ಮೌನವಾಗಿಯೇ ಗ್ರಹಿಸಿದರು. ಆದರೆ ಇಂತಹ ಸಮಾಜದಲ್ಲಿಯೂ ವಿಪುಲವಾದ ಜಾನಪದ ಸಾಮಗ್ರಿ ಮಡುಗಟ್ಟಿದೆ. ಇಲ್ಲಿರುವ ಉದ್ಯೋಗೀ ಗುಂಪುಗಳ, ಕಾಲೇಜು ವಿದ್ಯಾರ್ಥಿಗಳ ಬದುಕಿನೊಂದಿಗೆ ನಿಕಟ ಸಂಬಂಧ ಹೊಂದಿದೆ ಎಂಬುದನ್ನು ವಿಪುಲವಾದ ಸಾಮಗ್ರಿ ಸಂಗ್ರಹಣೆ ಹಾಗೂ ವಿಶ್ಲೇಷಣೆಗಳ ಮೂಲಕ ಡಾರ್ಸನ್ ತೋರಿಸಿಕೊಡುತ್ತಾರೆ. ಜಾನಪದ ಪಂಡಿತರು ಆಸಕ್ತಿ ಹೊಂದಿ ರುವ ಅದ್ಭುತ ಕಥೆಗಳು ಮತ್ತು ಪ್ರಾಣಿಕಥೆಗಳ ಬದಲಾಗಿ ಜೋಕ್‌ಗಳ ಪ್ರಕಾರ 20ನೇ ಶತಮಾನದ ಬದುಕಿನಲ್ಲಿ ಪ್ರಮುಖ ಸ್ಥಾನ ಪಡೆದಿರುವುದನ್ನು ಡಾರ್ಸನ್ ವಿಶೇಷವಾಗಿ ವಿಶ್ಲೇಷಿಸಿದ್ದಾರೆ. ಆಧುನಿಕ ಬದುಕಿನ ಮುಖ್ಯ ಸಂಗತಿಗಳಾದ ಧರ್ಮ, ರಾಜಕೀಯ, ವ್ಯವಹಾರಗಳನ್ನೆಲ್ಲ ಜೋಕ್‌ಗಳು ಒಳಗೊಂಡಿರುವುದನ್ನೂ, ಇದೇ ರೀತಿ ಕಾಲೇಜು ವಿದ್ಯಾರ್ಥಿಗಳ ಜಾನಪದ, ಕಾರ್ಖಾನೆಗಳ ಜಾನಪದ, ಸೈನಿಕರ ಜಾನಪದಗಳೂ ಸಹ

ಸಮಕಾಲೀನ ಅಮೆರಿಕಾದಲ್ಲಿ ಗುರುತಿಸಲೇಬೇಕಾದ ಜಾನಪದಗಳಾಗಿರುವುದನ್ನು ಡಾರ್ಸನ್ ಇಲ್ಲಿ ಕಂಡುಕೊಂಡಿದ್ದಾರೆ. ತಂತ್ರಜ್ಞಾನದ ಶಕ್ತಿಗಳು ಜಾನಪದರ ಸಮೃದ್ಧ ಸೃಷ್ಟಿಗೆ ಕಾರಣವಾದಂಥ ಪ್ರಾದೇಶಿಕ ಸಂಸ್ಕೃತಿಗಳ ಬಹು ದೀರ್ಘ ಕಾಲದ ಶಾಂತಕೊಳಗಳನ್ನು ಕಲಕಿ ಹಾಕಿರುವುದರಲ್ಲಿ ಸಂದೇಹವೇ ಇಲ್ಲ. ಆಧುನಿಕ ಜೀವನ ಶೈಲಿ ಇಷ್ಟೊಂದು ವೇಗವಾಗಿ ವ್ಯಾಪಿಸುತ್ತಿದ್ದರೂ ಮತ್ತು ನನ್ನ ಬೇರುಗಳನ್ನು, ಸ್ವಂತಿಕೆಯನ್ನು ಮಾಡುತ್ತಿರುವಂತೆ ಕಂಡರೂ ಪರಂಪರೆಯ ಜಿಗುಟುತನ ಜಾನಪದ ತಜ್ಞನನ್ನು ವಿಸ್ಮಯಗೊಳಿಸುತ್ತದೆ. ಪ್ರಧಾನ ಹೆದ್ದಾರಿಯಿಂದ ಒಂದಿಷ್ಟು ದೂರ ಹೋದರೆ ಸಾಕು ಯಾಂತ್ರೀಕರಣದ ನಾಗರೀಕತೆ ಕರಗಿಹೋಗುತ್ತದೆ ಮತ್ತು ನಮ್ಮ ಅನಾಮಧೇಯ ಜನ ಸಮುದಾಯದಲ್ಲಿ ಹಳೆಯ ಜಾನಪದ ಇನ್ನೂ ಸ್ವಲ್ಪವೂ ಕುಂದದೆ ಜೀವಂತಿಕೆಯಿಂದ ನಳನಳಿಸುತ್ತಿರುವುದನ್ನು ಕಾಣಬಹುದು ಎಂದು ಡಾರ್ಸನ್ ನಿರ್ಣಯಿಸುತ್ತಾರೆ.

ಒಟ್ಟಿನಲ್ಲಿ ಅಮೆರಿಕನ್ ಜಾನಪದವನ್ನು ಡಾರ್ಸನ್ ಒಂದು ವಿಶಿಷ್ಟ ಸಿದ್ಧಾಂತದ ಆಧಾರದ ಮೇಲೆ ಪರಿಶೀಲಿಸುತ್ತಾರೆ. ಇದು ಇಡೀ ಅಮೆರಿಕನ್ ಇತಿಹಾಸವನ್ನೇ ತನ್ನ ತೆಕ್ಕೆಗೆ ಒಳಪಡಿಸುತ್ತದೆ, ಅಧಿಕೃತ ಸಂಗ್ರಹ ಹಾಗೂ ಅಧ್ಯಯನಗಳಿಂದ ಸಾಮಗ್ರಿ ಯನ್ನು ಆಯ್ಕೆ ಮಾಡಿಕೊಂಡಿರುವುದು ಅವರ ಅಧ್ಯಯನವನ್ನು ವಸ್ತುನಿಷ್ಠ ನಾಗಿಸಿದೆ.

**ಆಫ್ರಿಕನ್ ಜಾನಪದ (African Folklore)**

ಡಾರ್ಸನ್ನರು ಇಂಡಿಯಾನಾ ವಿಶ್ವವಿದ್ಯಾಲಯದಲ್ಲಿ ಆಫ್ರಿಕನ್ ಜಾನಪದದ ಬಗ್ಗೆ ಸಮಾವೇಶವೊಂದನ್ನು ಸಂಘಟಿಸಿದ್ದರು. ಈ ಸಮಾವೇಶದಲ್ಲಿ ಭಾಷಾಶಾಸ್ತ್ರ, ಮಾನವಶಾಸ್ತ್ರ ಮತ್ತು ಮೌಖಿಕ ಸಾಹಿತ್ಯಗಳಲ್ಲಿ ತರಬೇತಾದ ವಿದ್ವಾಂಸರು ಆಫ್ರಿಕಾದ ಜಾನಪದೀಯ ಪರಿಕಲ್ಪನೆಗಳ ಬಗ್ಗೆ ಮಂಡಿಸಿದ 16 ಲೇಖನಗಳನ್ನು ಸಂಪಾದಿಸಿ ಆಫ್ರಿ ಕನ್ ಜಾನಪದ ಎಂಬ ಗ್ರಂಥವನ್ನು ಡಾರ್ಸನ್ ಪ್ರಕಟಿಸಿದರು. ಈ ಗ್ರಂಥವನ್ನು ಮುಖ್ಯವಾಗಿವಾಗಿ 3 ಭಾಗಗಳಾಗಿ ವಿಭಾಗಿಸಲಾಗಿದ್ದು, ಮೊದಲನೆಯ ಭಾಗವು ಆಫ್ರಿಕನ್ ಜಾನಪದದ ಬಗ್ಗೆ ಡಾರ್ಸನ್ನರು ಬರೆದಿರುವ ಒಂದು ಸುದೀರ್ಘ ಆಶಯ ಪ್ರಬಂಧವನ್ನು ಒಳಗೊಂಡಿದೆ. ಎರಡನೆಯ ಭಾಗದಲ್ಲಿ ವಿವಿಧ ವಿದ್ವಾಂಸರು ಆಫ್ರಿಕನ್ ಜಾನಪದದ ಬಗ್ಗೆ ಬರೆದಿರುವ 16 ಲೇಖನಗಳಿವೆ. 3ನೇ ಭಾಗದಲ್ಲಿ ಈ ವಿದ್ವಾಂಸರುಗಳು ಆಫ್ರಿಕಾ ದಲ್ಲಿ ಕ್ಷೇತ್ರಕಾರ್ಯ ಮಾಡಿ ಸಂಗ್ರಹಿಸಿದ ಮತ್ತು ಅದುವರೆಗೆ ಅಪ್ರಕಟಿತವಾಗಿದ್ದ ಆಫ್ರಿಕನ್ ಜಾನಪದ ಸಾಮಗ್ರಿಯ ಕೆಲವು ಅಧಿಕೃತ ಮಾದರಿಗಳನ್ನು ಡಾರ್ಸನ್ನರು ಸೂಕ್ತ ಪೀಠಿಕೆಯೊಂದಿಗೆ ಕೊಟ್ಟಿದ್ದಾರೆ.

ಈ ಗ್ರಂಥವು ಆಫ್ರಿಕಾದ ಅಧ್ಯಯನದಲ್ಲಿ ಜಾನಪದ ಪರಿಕಲ್ಪನೆಗಳನ್ನು ಅನ್ವಯಿ ಸಿದ ಹಾಗೂ ಆಫ್ರಿಕಾದ ಮೌಖಿಕ ಪರಂಪರೆಗಳ ಅಸಲಿ ಉದಾಹರಣೆಗಳನ್ನು ಒದಗಿಸಿದ ಪ್ರಥಮ ಗ್ರಂಥ ಎಂಬ ಪ್ರಶಂಸೆ ಪಡೆಯಿತು.

ಆಫ್ರಿಕಾದ ಜಾನಪದದ ಸ್ವರೂಪ ಮತ್ತು ಅಧ್ಯಯನಗಳ ಬಗ್ಗೆ ಡಾರ್ಸನ್ನರು ತಮ್ಮ ಆಶಯ ಪ್ರಬಂಧದಲ್ಲಿ ಪ್ರಸ್ತಾವಿಸಿರುವ ಕೆಲವು ಮುಖ್ಯ ವಿಚಾರಗಳು ಹೀಗಿವೆ :

ಜಾನಪದ ತಜ್ಞರು ಇತ್ತೀಚೆಗಷ್ಟೆ ಆಫ್ರಿಕಾದ ಕಡೆ ನೋಡತೊಡಗಿದ್ದಾರೆ. ಕ್ರೈಸ್ತಮಿಶನರಿಗಳು, ಪ್ರವಾಸಿಗರು, ಅಡಳಿತಗಾರರು, ಭಾಷಾ ಶಾಸ್ತ್ರಜ್ಞರು ಹಾಗೂ ಮಾನವಶಾಸ್ತ್ರಜ್ಞರು ತಮ್ಮ ಮುಖ್ಯ ಅಧ್ಯಯನಿಕ್ಕೆ ಪ್ರಾಸಂಗಿಕವಾಗಿ ಜಾನಪದವನ್ನು ಸಂಗ್ರಹಿಸಿ ಪ್ರಕಟಿಸಿದ್ದರಾದರೂ, ಜಾನಪದ ಸಾಮಗ್ರಿಗಳತ್ತಲೇ ಗಮನ ಕೇಂದ್ರೀ ಕರಿಸಿ ಸಂಗ್ರಹಿಸಿ ವಿಶ್ಲೇಷಿಸುವ ಕೆಲಸವನ್ನು ಇತ್ತೀಚಿನವರೆಗೆ ಯಾರೂ ಮಾಡಿರಲಿಲ್ಲ. ಜಾನಪದವನ್ನು ಅಧ್ಯಯನಿಸುವುದಕ್ಕೆ ಬೇಕಾದಂಥ ಎರಡು ಮುಖ್ಯ ನೆಲೆಗಳು ಈಗ ಆಫ್ರಿಕಾದಲ್ಲಿ ಮನವರಿಕೆಯಾಗತೊಡಗಿವೆ. ಒಂದು, ಇಲ್ಲಿನ ಸಾಮಾನ್ಯ ಜನಸಮೂಹ ಗಳಿಗಿಂತ ಸ್ವಲ್ಪ ಭಿನ್ನ ಸಂಸ್ಕೃತಿಯುಳ್ಳ ಬೌದ್ಧಿಕ ವರ್ಗ ಕಾಣಿಸಿಕೊಂಡದ್ದು. ಎರಡು, ರಾಷ್ಟ್ರೀಯ ರಾಜ್ಯಗಳ (National State) ಉಗಮ. ಬುಡಕಟ್ಟು ಸಂಸ್ಕೃತಿ ಯಲ್ಲಿ ಎಲ್ಲ ಸದಸ್ಯರೂ ಒಂದೇ ರೀತಿಯ ಮೌಲ್ಯಗಳನ್ನು ಹೊಂದಿರುತ್ತಾರೆ. ಧಾರ್ಮಿಕ ವಿಧಿಗಳಲ್ಲಿ ಭಾಗವಹಿಸುತ್ತಾರೆ. ಆದರೆ ಉದ್ಯೋಗದಲ್ಲಿ ವಿಶ್ವವಿದ್ಯಾಲಯಗಳಲ್ಲಿ ಹಾಗೂ ಸರ್ಕಾರದಲ್ಲಿರುವ ಬುದ್ಧಿ ಜೀವಿಗಳು ಮಾತ್ರ ತಮ್ಮ ಬುಡಕಟ್ಟಿನವರೊಂದಿಗಿಂತ ಇತರ ದೇಶಗಳ ಬುದ್ಧಿಜೀವಿಗಳೊಡನೆ ಹೆಚ್ಚಿನ ಸಮಾನ ಅಂಶವನ್ನು ಹೊಂದಿರುತ್ತಾರೆ. ಇಂಥವರಿಗೆ ತಮ್ಮ ಬುಡಕಟ್ಟು ಸಂಸ್ಕೃತಿ ಭಿನ್ನವಾಗಿ ಕಾಣುತ್ತದೆ. ಈ ನೆಲೆಯಲ್ಲಿ ಈಗ ಆಫ್ರಿಕಾದ ಜಾನಪದದ ಅಧ್ಯಯನ ಆರಂಭವಾಗಿದೆ. 19ನೇ ಶತಮಾನದಲ್ಲಿ ತಮ್ಮ ಸಮಾನ ಪರಂಪರೆಯ ಹುಡುಕಾಟದ ಸಲುವಾಗಿ ಯೂರೋಪಿನ ಹೊಸ ರಾಷ್ಟ್ರ ಗಳು ತಮ್ಮ ರೈತಾಪಿ ಸಂಸ್ಕೃತಿಗಳು ತಿರುಗಿದಂತೆ ಆಫ್ರಿಕಾದ ಹೊಸ ದೇಶಗಳೂ ಇಂಥದೇ ಏಕೀಕರಣದ ಸಂಕೇತಗಳಿಗಾಗಿ ತಮ್ಮ ಬುಡಕಟ್ಟು ಸಂಸ್ಕೃತಿಗಳತ್ತ ತಿರುಗಿ ದ್ದಾರೆ. ಈ ಹೊಸ ಆಫ್ರಿಕನ್ ದೇಶಗಳು ಅನೇಕ ಬುಡಕಟ್ಟುಗಳನ್ನು ಹೊಂದಿರು ವಂಥವು. ಈ ಬುಡಕಟ್ಟುಗಳನ್ನು ಬೆಸೆಯುವ ಮತ್ತು ಸಂಬಂಧ ಕಲ್ಪಿಸುವ ಶಕ್ತಿಗಳು ಕಾರ್ಯೋನ್ಮುಖವಾಗಿವೆ.

ಇಂತಹ ಉದ್ದೇಶಕ್ಕಾಗಿ ಜಾನಪದವನ್ನು ಬಳಸುವ ಬಗ್ಗೆ ಡಾರ್ಸನ್ ಒಂದು ಎಚ್ಚರಿಕೆಯ ಮಾತು ಹೇಳಿದ್ದಾರೆ. 19ನೇ ಶತಮಾನದಲ್ಲಿ ಜಾನಪದದ ಪರಿಕಲ್ಪನೆ ಉಗಮಿಸಿದಾಗಿನಿಂದ ರಾಷ್ಟ್ರೀಯತೆ ಹಾಗೂ ಪ್ರಾದೇಶಿಕತೆಗಳು ಜಾನಪದವೆಂಬ ಒಂದೇ ನಾಣ್ಯದ ಎರಡು ಮುಖಗಳಾಗಿವೆ. ಪರಕೀಯ ಅಳ್ವಿಕೆಯ ವಿರುದ್ಧ ತಮ್ಮ ರಾಜಕೀಯ

ಹಾಗೂ ಸಾಂಸ್ಕೃತಿಕ ಅಸ್ತಿತ್ವವನ್ನು ಕಂಡುಕೊಳ್ಳಬಯಸುವಂಥ ಜನರು ಜಾನಪದವನ್ನು ಬಳಸಿಕೊಂಡಾಗ ಅದು ಒಗ್ಗೂಡಿಸುವ ಹಾಗೂ ರಾಷ್ಟ್ರೀಯ ಭಾವನೆಯನ್ನು ಪ್ರೇರೇಪಿ ಸುವ ಅಂಶವಾಗಬಹುದು. ಆದರೆ ಪ್ರಾದೇಶಿಕ ಮತ್ತು ಜನಾಂಗಿಕ ಪರಂಪರೆಗಳನ್ನು ತೀರಾ ಒತ್ತಿ ಹೇಳಿದರೆ ಜಾನಪದವು ವಿಘಟನಕಾರಿಯೂ ಆಗಬಹುದು.7

ಸಾಮಾನ್ಯವಾಗಿ ಇಲ್ಲಿ ಕೆಲಸ ಮಾಡಿದ ಮಾನವಶಾಸ್ತ್ರಜ್ಞರು ಹಾಗೂ ಭಾಷಾ ತಜ್ಞರು ಜಾನಪದದ ಬಗ್ಗೆ ತಲೆಕೆಡಿಸಿಕೊಂಡಿಲ್ಲ. ಎಲ್ಲವೂ ಮೌಖಿಕವೂ, ಪರಂಪರಾಗ ತವೂ ಆದಂಥ ಏಕರೂಪದ ಸಮಾಜದಲ್ಲಿ ಜಾನಪದ ಮತ್ತು ಸಂಸ್ಕೃತಿಗಳ ನಡುವೆ ಗೆರೆ ಎಳೆಯುವುದರಲ್ಲಿ ಯಾವ ಅರ್ಥವೂ ಇಲ್ಲ ಎಂಬುದು ಅವರ ಗ್ರಹಿಕೆಯಾಗಿತ್ತು. ಆದರೆ ಆಫ್ರಿಕನ್ ಕ್ಷೇತ್ರದಲ್ಲಿ ಜಾನಪದವು ಮೌಖಿಕ ಸಾಹಿತ್ಯ, ಮಾನವಶಾಸ್ತ್ರ ಹಾಗೂ ಮೌಖಿಕ ಇತಿಹಾಸದ ನಡುವೆ ಅಂತರ ಸಂಬಂಧಗಳನ್ನು ಹೊಂದಿದೆ. ಇವು ಒಂದರೊಡ ನೊಂದು ಕರೆಸಿ ಹೋಗುವುದು ನಿಜವಾದರೂ ಇವುಗಳ ನಡುವೆ ಗೊಂದಲ ಮಾಡಿಕೊಳ್ಳ ಕೂಡದು ಎಂಬುದು ಡಾರ್ಸನ್ನರ ಅಭಿಪ್ರಾಯ.

ಆಫ್ರಿಕಾದ ವಿಷಯದಲ್ಲಿ ಜಾನಪದ ಮತ್ತು ಮಾನವಶಾಸ್ತ್ರಗಳ ಸಂಬಂಧ ತುಂಬ ನಿಕಟವಾದುದು. ಇಲ್ಲಿ ಯಾವುದು ಎಲ್ಲಿ ಪ್ರಾರಂಭವಾಗುತ್ತದೆ ಎಲ್ಲಿಂದ ಬೇರೆಯಾಗು ಇದೆ ಎಂಬ ಪ್ರಶ್ನೆ ಎದುರಾಗುತ್ತದೆ. ಸಾಮಾನ್ಯವಾಗಿ ಜಾನಪದ ತಜ್ಞನ ಕ್ಷೇತ್ರವನ್ನು ಮಾನವಶಾಸ್ತ್ರದ ಒಂದು ಶಾಖೆ ಎಂಬುದಾಗೇ ಭಾವಿಸುತ್ತಾರೆ. ಇವೆರಡೂ ಕೆಲವು ಬಿಂದುಗಳಲ್ಲಿ ಸಂಧಿಸಿದರೂ ಕೂಡ ಇವುಗಳ ಇತಿಹಾಸ ಹಾಗೂ ವಿಧಾನಗಳು ಸಂಪೂರ್ಣ ಸ್ವತಂತ್ರ, ಮಾನವಶಾಸ್ತ್ರಜ್ಞ ಜಾನಪದವನ್ನು ಪ್ರಾಸಂಗಿಕವಾಗಿ ಸಂಗ್ರಹಿಸುತ್ತಾನೆ. ಅನಕ್ಷರಸ್ಥ ಸಮಾಜದ ಇದೇ ಸಂಸ್ಕೃತಿಯನ್ನು ಅಭ್ಯಾಸಮಾಡ ತಾನೆ. ಜಾನಪದತಜ್ಞನ ಕೆಲಸವೆಂದರೆ ಅನಕ್ಷರಸ್ಥ ಮತ್ತು ಅಕ್ಷರಸ್ಥ ಸಂಸ್ಕೃತಿ ಗಳಲ್ಲಿರುವ 'ಜನಪದ ಸಂಪ್ರದಾಯಗಳ ತೌಲನಿಕ ಅಧ್ಯಯನ ಮೌಖಿಕ ಸಾಹಿತ್ಯ ಅಥವಾ ಬಾದ್ಧಿಕಕಲೆಯನ್ನು ಜಾನಪದ ಒಳಗೊಳ್ಳುತ್ತದೆ ಎಂಬ ಬಗ್ಗೆ ಮಾನವಶಾಸ್ತ್ರಜ ಹಾಗೂ ಜಾನಪದ ತಜ್ಞರಲ್ಲಿ ಸಹಮತವಿದೆ. ಆದರೆ ಜಾನಪದವನ್ನು ಧರ್ಮ, ವೈದ್ಯ ಇತ್ಯಾದಿಗಳಿಗೆ ವ್ಯಾಪಿಸತೊಡಗಿದಾಗ ಭಿನ್ನಮತ ತಲೆದೋರುತ್ತದೆ. ಒಂದು ಬುಡಕಟ್ಟು ಸಂಸ್ಕೃತಿಯಲ್ಲಿ ಜನಪದಧರ್ಮ, ಜನಪದ ವೈದ್ಯ ಎಂದು ಪರಿಕಲ್ಪಿಸುವುದು ಬಹುಶಃ ಸಾಧ್ಯವಾಗದು ಎನ್ನುವ ಡಾರ್ಸನ್ನರು ವಿಜ್ಞಾನ, ಇಂಜಿನಿಯರಿಂಗ್ ಶಿಕ್ಷಣ, ತಂತ್ರ ಜ್ಞಾನ ಮೊದಲಾದ ಉಚ್ಚನಾಗರಿಕತೆಗೆ ವಿರುದ್ಧವಾಗಿರುವ ಮಾಟ, ಕಪ್ಪು ಮಾಟ, ಭೂತವಿದ್ಯೆ ಮೊದಲಾದವುಗಳನ್ನು ಜಾನಪದತಜ್ಞ ಅಧ್ಯಯನಿಸುತ್ತಾನಾದರೂ ಅವು ಬುಡಕಟ್ಟು ಸಂಸ್ಕೃತಿಯ ಕೇಂದ್ರೀಯ ಸಂಸ್ಕೃತಿಗಳಲ್ಲಿ ಬೆರೆತಾಗ ಅವುಗಳನ್ನು ಮಾನವ ಶಾಸ್ತ್ರಜ್ಞರು ಅಧ್ಯಯನಿಸುವುದೇ ಸೂಕ್ತ ಎಂಬ ನಿಲುವು ತಾಳುತ್ತಾರೆ.

ಮಾನವಶಾಸ್ತ್ರ ಮತ್ತು ಜಾನಪದಗಳಿಗಿರುವ ವ್ಯತ್ಯಾಸವನ್ನು ಯೋರುಬಾ ಗಳಲ್ಲಿರುವ ಇಫಾ ಎಂಬ ಕಾಲಜ್ಞಾನ ಪದ್ಧತಿ (ಅತಿಮಾನುಷ ಮಾಧ್ಯಮದ ಮೂಲಕ ಭವಿಷ್ಯವನ್ನು ನುಡಿಯುವ ಪದ್ಧತಿ)ಯ ಉದಾಹರಣೆಯ ಮೂಲಕ ಡಾರ್ಸನ್ ಸ್ಪಷ್ಟ ಪಡಿಸುತ್ತಾರೆ. ಇಫಾ ಪೂಜಾರಿಗಳು ಶಿಷ್ಯರಿಗೆ ಬಹಳ ವರ್ಷಗಳ ಕಾಲ ಶ್ರಮಪಟ್ಟು ಬೋಧಿಸುವ ಈ ವ್ಯವಸ್ಥೆಯನ್ನು ನಾನು ಜನಪದ ನಂಬಿಕೆ ಅಥವಾ ಜನಪದ ಧರ್ಮ ಎಂದು ಕರೆಯುವುದಿಲ್ಲ. ಏಕೆಂದರೆ ಇದು ಪ್ರಜ್ಞಾಪೂರ್ವಕವಾಗಿ ಕಲಿತುಕೊಳ್ಳುವ ಮತ್ತು ಅತಿ ಹೆಚ್ಚು ಸಾಂಕೃತವಾದ ಜಾಪಚಾರಿಕ ಅಧಿಕೃತಪದ್ಧತಿ,

ಈ ಪ್ರಬಂಧದಲ್ಲಿ ಡಾರ್ಸನ್ನರು ಚರ್ಚಿಸುವ ಇನ್ನೊಂದು ಮುಖ್ಯ ಅಂಶ ಜಾನಪದ ಮತ್ತು ಮೌಖಿಕ ಚರಿತ್ರೆ (Oral History)ಗಳ ಸಂಬಂಧವನ್ನು ಕುರಿತದ್ದು. ಸಾಮಾನ್ಯವಾಗಿ ಜಾನಪದತಜ್ಞ ಮತ್ತು ಮಾನವಶಾಸ್ತ್ರಜ್ಞರ ನಡುವೆ ಇರುವುದಕ್ಕಿಂತ ಹೆಚ್ಚಿನ ಸಂಬಂಧ ಕಲ್ಪಿಸುವುದು, ಜಾನಪದತಜ್ಞ ಹಾಗೂ ಮೌಖಿಕ ಇತಿಹಾಸಕಾರನ ನಡುವೆ ಇರುವುದಕ್ಕಿಂತ ಕಡಿಮೆ ಸಂಬಂಧ ಕಲ್ಪಿಸುವುದು ವಿದ್ವಾಂಸರ ರೂಢಿಯಾಗಿದೆ. ಬಹುತೇಕ ಮೌಖಿಕ ಇತಿಹಾಸಕಾರರಿಗೆ ಜಾನಪದವನ್ನು ಹೇಗೆ ಪರಿಗಣಿಸಬೇಕು ಎಂಬುದು ತಿಳಿದಿಲ್ಲ ಅಥವಾ ಅವರು ಸುಮ್ಮನೆ ಅದನ್ನು ಅಲಕ್ಷಿಸುತ್ತಾರೆ. ಈ ಎರಡೂ ಕ್ಷೇತ್ರಗಳ ನಡುವೆ ಸೈದ್ಧಾಂತಿಕವಾಗಿ ವ್ಯತ್ಯಾಸ ಕಲ್ಪಿಸಬಹುದಾದರೂ ವಾಸ್ತವದಲ್ಲಿ ಈ ಗೆರೆ ಎಳೆಯುವುದು ಕಷ್ಟ. ಪ್ರತಿಯೊಂದು ಮೌಖಿಕ ಪರಂಪರೆಯೂ ಕ್ರಮೇಣ ಜಾನಪದ ಅಂಶಗಳನ್ನು ಮೈಗೂಡಿಸಿಕೊಳ್ಳುತ್ತದೆ ಮತ್ತು ಜಾನಪದ ಸಾಮಗ್ರಿಗಳ ಗತಇತಿಹಾಸದ ಮೇಲೆ ಬೆಳಕು ಚೆಲ್ಲುತ್ತವೆ. ಆದರೆ ಈ ಅಂಶವನ್ನು ಗುರುತಿಸುವಲ್ಲಿ ಮೌಖಿಕ ಇತಿಹಾಸಕಾರರು ವಿಫಲರಾಗಿ ದ್ದಾರೆ.10 ಎಂದು ಡಾರ್ಸನ್ ಅಭಿಪ್ರಾಯ ಪಡುತ್ತಾರೆ.

ಆಫ್ರಿಕಾದ ಮೌಖಿಕ ಇತಿಹಾಸವು ಬುಡಕಟ್ಟು, ಚರಿತ್ರೆಗಳನ್ನು ಒಳಗೊಂಡೇ ಇರುತ್ತದೆ. ಈ ಚರಿತ್ರೆಗಳಲ್ಲಿ ವಾಸ್ತವಿಕ ವ್ಯಕ್ತಿ ಮತ್ತು ಸ್ಥಳದೊಂದಿಗೆ, ಮನುಷ್ಯರು ಪ್ರಾಣಿಗಳಾಗಿ ಪರಿವರ್ತನೆ ಹೊಂದುವಂತಹ ಜಾನಪದ ಆಶಯಗಳು ಮಿಳಿತವಾಗಿ ಬಿಟ್ಟಿರುತ್ತವೆ. ಇಂತಹ ಆಶಯಗಳನ್ನು ಗುರುತಿಸಿ ಚಾರಿತ್ರಿಕ ಅಂಶದಿಂದ ಬೇರ್ಪಡಿಸು ವುದು ಇತಿಹಾಸಕಾರನ ಕೆಲಸ.

ಚಾರಿತ್ರಿಕ ಘಟನೆಗಳ ಬಗ್ಗೆ ಜಾನಪದೀಯ ದೃಷ್ಟಿಕೋನವೆಂಥದ್ದು ಎಂಬುದನ್ನು ಈ ರೀತಿಯ ಮೌಖಿಕ ಪರಂಪರೆಗಳ ಅಧ್ಯಯನ ತಿಳಿಸುತ್ತದಾದರೂ ಮೌಖಿಕ ಇತಿಹಾಸಕಾರರು ಇದನ್ನು ಗುರುತಿಸುವುದು ವಿರಳ ಎನ್ನುತ್ತಾರೆ ಡಾರ್ಸನ್,

ಆಫ್ರಿಕನ್ ನೆಲೆಯಲ್ಲಿ ಜಾನಪದವನ್ನು ಅಧ್ಯಯನಿಸುವಾಗ ಗಮನಿಸಲೇಬೇಕಾ

ದಂತಹ ಇಂತಹ ಉಪಯುಕ್ತ ವಿಚಾರಗಳನ್ನು ಪ್ರಸ್ತಾಪಿಸಿರುವುದು ಈ ಕೃತಿಯ ವೈಶಷ್ಟ ವಾಗಿದೆ.

ಬ್ರಿಟಿಷ್ ಫೋಕ್‌ಲೋರಿಸ್ಟ್ ಎ ಹಿಸ್ಟರಿ11 ಎಂಬುದು ಡಾರ್ಸನ್ ಅವರ ಇನ್ನೊಂದು ಮಹತ್ವದ ಕೃತಿ. ಬ್ರಿಟನ್ನಿನಲ್ಲಿ ಜಾನಪದದ ಪರಿಕಲ್ಪನೆಯು 16ನೇ ಶತಮಾನದಲ್ಲಿ ಕಾಮನ್ನನ ರಾಷ್ಟ್ರೀಯ ಚರಿತ್ರೆಯಲ್ಲಿ ಒಂದು ಕಲಿಕೆಯ ಭಾಗವಾಗಿ ಹುಟ್ಟಿ ಬೆಳೆದು ಆ ತರುವಾಯದ ವಿಕ್ಟೋರಿಯನ ಜಾನಪದ ತಜ್ಞರ ಕಾಲಕ್ಕೆ ಉಚ್ಛಾಯ ಸ್ಥಿತಿ ತಲುಪಿದ ಜಾಡನ್ನು ಈ ಗ್ರಂಥದಲ್ಲಿ ಗುರುತಿಸುವ ಪ್ರಯತ ಮಾಡಲಾಗಿದೆ. ಉಳಿಕೆಯ ಸಿದ್ಧಾಂತ, ಅಂದರೆ ಜಾನಪದವು ಆದಿಮಾನವನ ಆಲೋಚನೆ ಮತ್ತು ಆಚರಣೆಗಳ ಉಳಿಕೆಗಳನ್ನು ಪ್ರತಿನಿಧಿಸುತ್ತದೆ ಎಂಬ ಸಿದ್ಧಾಂತ ವನ್ನು ಪ್ರತಿಪಾದಿಸಿದ ಮಾನವಶಾಸ್ತ್ರೀಯ ಜಾನಪದ ತಜ್ಞರ ವಿಚಾರಗಳಿಗೆ ಈ ಚರಿತ್ರೆ ಯಲ್ಲಿ ಹೆಚ್ಚಿನ ಸ್ಥಳ ದೊರೆತಿದೆ. ಬ್ರಿಟನ್ನಿನಲ್ಲಿ ಜಾನಪದ ಅಧ್ಯಯನ ನಡೆದು ಬಂದ ದಾರಿಯು ಡಾರ್ಸನ್ ಅವರ ಮೇಲೆ ತುಂಬ ಪ್ರಭಾವ ಬೀರಿತ್ತು. “ಜಾನಪದ ಪರಿ ಕಲ್ಪನೆಯ ಹುಟ್ಟು ಮತ್ತು ಬೆಳವಣಿಗೆ ಹಾಗೂ ವಿವಿಧ ಕ್ಷೇತ್ರಗಳ ವಿದ್ವಾಂಸರನ್ನು ವಿಚಾರವು ಸೂಜಿಗಲ್ಲಿನಂತೆ ಆಕರ್ಷಿಸಿದ ಬಗೆ ಯಾವುದೇ ಜನಪದ ಕಥೆಯಷ್ಟು ಅದ್ಭುತ ವಾದ ಕಥೆಯಾಗಿದೆ. ಆ ಕಥೆಯನ್ನು ಇಲ್ಲಿ ನಾನು ಹೇಳ ಹೊರಟಿದ್ದೇನೆ12 ಎಂದು ಅವರು ನುಡಿಯುತ್ತಾರೆ. ಇಂಗ್ಲೆಂಡಿನ ಈ ಜಾನಪದ ವಿಜ್ಞಾನದ ಪ್ರಖರ ಇತಿಹಾಸವು ಬ್ರಿಟಿಷ್ * ಏಷಿಯಾ ಹಾಗೂ ವಿದ್ಯಾರ್ಥಿಗಳಿಗೆ ಹೇಗೋ ಹಾಗೆಯೇ ಅಮೆರಿಕಾ, ಯೂರೋಪ್, ಆಫ್ರಿಕಾದ ಜಾನಪದ ವಿದ್ಯಾರ್ಥಿಗಳಿಗೂ ಅತ್ಯವಶ್ಯವೆಂದು ಡಾರ್ಸನ್ ಹೇಳುತ್ತಾರೆ. 1846ರಲ್ಲಿ ವಿಲಿಯಂಥಾಂಸನು ಫೋಕ್‌ಲೋರ್ ಎಂಬ ಪದವನ್ನು ಸೃಷ್ಟಿಸಿದನಾದರೂ ಬ್ರಿಟನ್ನಿನಲ್ಲಿ ಜಾನಪದ ಅಧ್ಯಯನದ ಇತಿಹಾಸ ಅದಕ್ಕಿಂತ ಮುಂಚೆನಿಂದಲೇ ಆರಂಭ ವಾಗುತ್ತದೆ ಎಂಬುದು ಡಾರ್ಸನ್ನರ ಅಭಿಪ್ರಾಯ. ವಿಕ್ಟೋರಿಯನ್ ಕಾಲದ ಸುಶಿಕ್ಷಿತ ಪುರುಷರೂ ಹಾಗೂ ಮಹಿಳೆಯರೂ ಸಹ ತಮ್ಮ ದೇಶ ಹಾಗೂ ಇತರ ದೇಶಗಳಲ್ಲಿರುವ ಕೌತುಕಭರಿತ ಕಥೆಗಳು ಮತ್ತು ವಿಚಿತ್ರ ಆಚರಣೆಗಳ ಬಗ್ಗೆ ಕುತೂಹಲ ತಾಳಿದ್ದರು. ಸಾಹಿತ್ಯ, ಇತಿಹಾಸ, ಪ್ರಾಚೀನಕಾವ್ಯ, ಪುರಾತತ್ವಶಾಸ್ತ್ರ, ಭಾಷಾಶಾಸ್ತ್ರ, ಭೌತಶಾಸ್ತ್ರ, ಸಂಶೋಧನೆ, ಕಾನೂನು ಹಾಗೂ ವೈದ್ಯದ ಪ್ರಾಚೀನ ನಡೆವಳಿಗಳು, ಸ್ಯಾಂಡಿ ನೇವಿಯನ್, ಜರ್ಮನಿಕ್ ಹಾಗೂ ಕೆಲ್ಟಿಕ್ ಅಧ್ಯಯನಗಳು ಮತ್ತು ಧರ್ಮಗಳ ಇತಿಹಾಸದ ಮೇಲೂ ಜಾನಪದ ಅಧ್ಯಯನ ಪ್ರಭಾವ ಬೀರಿತ್ತು. ಸ್ಥಳೀಯ ಜಾನ ಪದದ ಬಗ್ಗೆ ಅರಿವಿದ್ದರೆ ತಾವು ಈಗ ವಶಪಡಿಸಿಕೊಂಡಿರುವಂತಹ ಅಪರಿಚಿತ ಜನ್ಮ ಸಮುದಾಯಗಳನ್ನು ತಿಳಿದುಕೊಳ್ಳುವುದಕ್ಕೆ ಅನುಕೂಲ ಎಂಬುದನ್ನು ಕಂಡುಕೊಂಡಿದ ವಸಾಹತು ಆಡಳಿತಗಾರರೂ, ಮಿಶನರಿಗಳು ಮತ್ತು ಮಿಲಿಟರಿ ಅಧಿಕಾರಿಗಳು ಬ್ರಿಟಿಷ್ ಚಕ್ರಾಧಿಪತ್ಯದ ಮೂಲೆಮೂಲೆಗಳಿಂದಲೂ ಜಾನಪದವನ್ನು ಸಂಗ್ರಹಿಸುವುದಕ್ಕೆ ಮೂಲೆ

ಮೂಲೆಗಳಿಂದಲೂ ಜಾನಪದವನ್ನು ಸಂಗ್ರಹಿಸುವುದಕ್ಕೆ ಆಸಕ್ತಿ ವಹಿಸಿದರು. ಇಂಗ್ಲಿಷ್ ಪ್ರವಾಸಿಗಳು ಯೂರೋಪಿನಾದ್ಯಂತ ಜಾನಪದ ವಿಚಾರವನ್ನು ಪ್ರಚುರಪಡಿಸಿದರು. 16ನೇ ಶತಮಾನದಲ್ಲಿ ಪ್ರಾಚೀನ ನಡೆವಳಿಗಳ ಅಧ್ಯಯನಕಾರರಿಂದ ಸ್ಥಳೀಯ ಪದ್ಧತಿ ಗಳನ್ನು ಸಂರಕ್ಷಿಸುವ ಅಧ್ಯಯನವಾಗಿ ಜಾನಪದ ಅಧ್ಯಯನ ಆರಂಭಗೊಂಡಿತು. ಹೀಗೆ ಬೆಳೆದುಬಂದ ಈ ಅಧ್ಯಯನ 1870 ರಿಂದ ಮೊದಲ ಮಹಾಯುದ್ಧ ಕಾಲದ ವರೆಗಿನ ಅವಧಿಯಲ್ಲಿ ಉಚ್ಛಾಯ ಸ್ಥಿತಿ ತಲುಪಿತು. ಆ್ಯಂಡೂಲ್ಯಾಂಗ್ ಕ್ಲಾಡ್, ಗೊಮ್ಮೆ ಮೊದಲಾದವರು ಮಾನವಶಾಸ್ತ್ರೀಯ ಪಂಥದನೇತಾರರಾದರು. ಈ ಕೃತಿ ಯಲ್ಲಿ ಬ್ರಿಟಿಷ್ ಜಾನಪದ ಅಧ್ಯಯನದ ವಿವಿಧ ಕಾಲಘಟ್ಟಗಳಲ್ಲಿ ಅನುಕ್ರಮವಾಗಿ ಪ್ರಾಚೀನ ಅನ್ವೇಷಕರು, ಪ್ರಾಚೀನ ನಡೆವಳಿಗಳತ್ತ ಆಸಕ್ತರಾದ ಜಾನಪದತಜ್ಞರು, ಸಾಹಿತ್ಯಾಸಕ್ತಿಯ ಜಾನಪದ ತಜ್ಞರು, ಪುರಾಣಶಾಸ್ತ್ರ ದೃಷ್ಟಿಯ ತಜ್ಞರು ಆದಿ ಮಾನವ ಸಂಸ್ಕೃತಿಯತ್ತ ಆಕರ್ಷಿತರಾದ ಜಾನಪದ ತಜ್ಞರು, ವಿಕ್ಟೋರಿಯನ್ ತಂಡದವರು. ಇವರೇ ಮೊದಲಾದವರು ನಡೆಸಿದ ಜಾನಪದ ಅಧ್ಯಯನಗಳನ್ನು ಡಾರ್ಸನ್ನರು ಸವಿಸ್ತಾರವಾಗಿ ಪ್ರಸ್ತಾಪಿಸಿದ್ದಾರೆ.

ಅಮೆರಿಕನ ಜಾನಪದ ತಜ್ಞನಾಗಿದ್ದುಕೊಂಡು ಅದರ ಜಾನಪದ ಅಧ್ಯಯನದ ಚರಿತ್ರೆ ಬರೆಯದೆ ಬ್ರಿಟನ್ನಿನ ಅಧ್ಯಯನದ ಚರಿತ್ರೆಯನ್ನೇಕೆ ಬರೆದೆ ಎಂದು ರಿಚರ್ಡ್ ನ್ಯೂಸ್ ಎಂಬ ವಿದ್ವಾಂಸ ಡಾರ್ಸನ್‌ರನ್ನು ಕೇಳಿದನಂತೆ. 13 ಅದಕ್ಕೆ ಡಾರ್ಸನ್ನರು ಹೀಗೆ ಉತ್ತರಿಸಿದರಂತೆ "ಇಂಗ್ಲಿಷ್ ಜಾನಪದ ತಜ್ಞರು ಬೃಹತ್ ಪ್ರಮಾಣದಲ್ಲಿ ಹೊರ ತಂದ ಪುಸ್ತಕ, ಪ್ರಬಂಧ, ವಿಮರ್ಶೆ, ಸಂಕಲನಗಳಲ್ಲಿದ್ದ ಓಜಸ್ಸು, ಉತ್ಸಾಹ, ಬೌದ್ಧಿಕ ಪ್ರಖರತೆ ಹಾಗೂ ಅವುಗಳ ವ್ಯಾಪ್ತಿ ಮತ್ತು ಬೀಸು ನನ್ನ ಕಲ್ಪನೆಯನ್ನು ಬಡಿದೆಬ್ಬಿಸಿ ದವು. ಸೈದ್ಧಾಂತಿಕ ದೃಷ್ಟಿಯಿಂದಾಗಲೀ, ಬೌದ್ಧಿಕ ಅಂತರ್ ಸಂಬಂಧ ದೃಷ್ಟಿ ಯಿಂದಾಗಲೀ ಲ್ಯಾಂಗ್, ಗೊಮ್ಮೆ, ಹಾರ್ಟ್‌ಲ್ಯಾಂಡ್ ಹಾಗೂ ಅವರ ಸಂಗಡಿಗರ ಮತ್ತು ಅವರ ಹಿಂದಿನವರ ಕೃತಿಗಳಿಗೆ ಹೋಲಿಸುವಂಥದೇನೂ ಅಮೆರಿಕಾದ ಜಾನಪದ ದಲ್ಲಿ ಇಲ್ಲ. ಅಮೆರಿಕಾದ ಜಾನಪದ ಇತಿಹಾಸ ಯಾವುದೇ ಸೈದ್ಧಾಂತಿಕ ಗ್ರಂಥಗಳ ನ್ನಾಗಲೀ, ನಿರಂತರತೆಯನ್ನಾಗಲೀ, ಒಮ್ಮತವನ್ನಾಗಲೀ ವ್ಯಕ್ತಪಡಿಸಿಲ್ಲ. ಇಲ್ಲಿ ಭಿನ್ನಾಭಿಪ್ರಾಯಕ್ಕೆಡೆ ಮಾಡಿಕೊಡುವಂಥ ಒಂದು ಸಮಾನ ವೇದಿಕೆಯೂ ಇಲ್ಲವಾದ್ದ ರಿಂದ 19ನೇ ಶತಮಾನದ ಬ್ರಿಟಿಷ್ ಜಾನಪದ ತಜ್ಞರನ್ನು ಪ್ರತ್ಯೇಕವಾಗಿರಿಸಿ ನೋಡಿದ ಉನ್ನತ ಮಟ್ಟದ ಚರ್ಚೆಯಾಗಲೀ ಇಲ್ಲ." ಡಾರ್ಸನ್ನರ ಈ ಮಾತುಗಳು ಬ್ರಿಟಿಷ್ ಜಾನಪದ ಸಂಶೋಧನೆಯ ಬಗ್ಗೆ ಡಾರ್ಸನ್ ಹೊಂದಿದ್ದ ಅಪಾರ ಅಭಿಮಾನದದ್ಯೋತಕ ವಾಗಿವೆ.

ಡಾರ್ಸನ್ನರು ಸಂಪಾದಿಸಿದ 'ಪೆಸೆಂಟ್ ಕಸ್ಟಮ್ಸ್ ಅಂಡ್ ಸ್ಯಾವೇಜ್ ಮಿಕ್ಸ್ 14 ಎಂಬ ಶೀರ್ಷಿಕೆಯ ಎರಡು ಬೃಹತ್ ಸಂಪುಟಗಳ ಗ್ರಂಥ ಮೇಲೆ ಹೇಳಿದ ಕೃತಿಗೆ

ಪೂರಕವಾಗಿರುವಂಥದ್ದು. ಈ ಗ್ರಂಥದಲ್ಲಿ ಆ್ಯಂಡೂಲಾಂಗ್, ಸಿಡ್ನಿ ಹಾರ್ಟ್ ಲ್ಯಾಂಡ್, ಜಿ. ಎಲ್. ಗೊಮ್ಮೆ, ಆಲ್‌ಫ್ರೆಡ್ ನಟ್ ಹಾಗೂ ಜೋಸೆಫ್ ಜೇಕಬ್ ಇವರೇ ಮೊದಲಾದ ಕೆಲವು ಪ್ರಸಿದ್ಧ ಜಾನಪದತಜ್ಞರ ಸೈದ್ಧಾಂತಿಕ ಬರಹಗಳ ಉದ್ಧತ ಭಾಗಗಳನ್ನು ಕೊಟ್ಟಿದ್ದಾರೆ. ಇವು, ಜಾನಪದದ ಆಧುನಿಕ ಚಿಂತನೆಯ ಬೆಳವಣಿಗೆಯ ಇತಿಹಾಸವನ್ನು ತಿಳಿಯಲೆತ್ನಿಸುವ ಎಲ್ಲ ವಿದ್ಯಾರ್ಥಿಗಳೂ ಗಮನಿಸಬೇಕಾದಂಥವು. ಆರ್ಯನ್ನರ ಚೆದುರಿಕೆ, ಪ್ರಾಚೀನ ಮಾನವನ ಲೋಕದೃಷ್ಟಿಯಿಂದಾರಂಭಿಸಿ, ಆದಿ ಮಾನವನ ಸರ್ವಚೇತನವಾದ ಅಥವಾ ರೈತಾಪಿ ಜನಸಮುದಾಯಗಳಲ್ಲಿ ಪ್ರಾಚೀನ ನಂಬಿಕೆಗಳ ಉಳಿಕೆಯವರೆಗೆ ಇಲ್ಲಿನ ವಿಷಯವ್ಯಾಪ್ತಿ ಇದೆ.

ಬಯಿಂಗ್ ದಿ ವಿಂಡ್-ವರೀಜನಲ್ ಫೋಕ್‌ಲೋರ್ ಇನ್ ದಿ ಯುನೈಟೆಡ್ ಸ್ಟೇಟ್ಸ್ 15 ಎಂಬುದು ಸಂಯುಕ್ತ ಸಂಸ್ಥಾನದ ಪ್ರಾದೇಶಿಕ ಜನಪದ ಪರಂಪರೆಗಳ ಪ್ರಾತಿನಿಧಿಕ ಮಾದರಿಗಳನ್ನು ಒಳಗೊಂಡಿರುವ ಒಂದು ಸಂಪಾದಿತ ಕೃತಿ. ಇಲ್ಲಿನ ಬಹುತೇಕ ಉದಾಹರಣೆಗಳು ಜಾನಪದ ಪತ್ರಿಕೆಗಳಿಂದ ಆಯ್ದು, ಸಂಗ್ರಾಹಕರಿಂದ ಅನುಮತಿ ಪಡೆದು ಮರುಮುದ್ರಿಸಿದಂಥವು. ಈ ಹಿಂದೆ ಅಪ್ರಕಟಿತವಾದ ಹಾಗೂ ಪರಿಷ್ಕೃತವಾದ ಕ್ಷೇತ್ರ ಸಾಮಗ್ರಿಗಳನ್ನು ಇದು ಒಳಗೊಂಡಿದೆ. ಒಟ್ಟಿನಲ್ಲಿ ಇದು ಪಠ್ಯಗಳ ಸಂಪುಟ, ಪ್ರತಿಯೊಂದು ಪ್ರಾದೇಶಿಕ ಭಾಗದಲ್ಲಿ ಪಠ್ಯಗಳನ್ನು ಅವುಗಳ ಪ್ರಕಾರಗಳಿಗನು ಗುಣವಾಗಿ ಅಂದರೆ ಕಥೆ, ಗಾದೆ, ಒಗಟು, ನಂಬಿಕೆ, ನಾಟಕ ಹಾಗೂ ಹಾಡುಗಳಿಗನು ಗುಣವಾಗಿ ವಿಂಗಡಿಸಲಾಗಿದೆ. ಡಾರ್ಸನ್ ಅವರೇ ಹೇಳಿರುವಂತೆ ಈ ಸಂಪುಟವು ಅಮೆರಿಕನ್ ಫೋಕ್‌ಲೋರ್ ಎಂಬ ಅವರ ಕೃತಿಗೆ ಪೂರಕವಾಗಿರುವ ಉದ್ದೇಶವುಳ್ಳದ್ದು ಈ ಗ್ರಂಥದ ಪೀಠಿಕೆಯಲ್ಲಿ ಸಂಯುಕ್ತ ಸಂಸ್ಥಾನದಲ್ಲಿ ಮೌಖಿಕ ಜಾನಪದವನ್ನು ಸಂಗ್ರಹಿಸುವ ಬಗ್ಗೆ ಡಾರ್ಸನ್ನರು ತಮ್ಮ ವಿಚಾರಗಳನ್ನು ತಿಳಿಯಪಡಿಸಿದ್ದಾರೆ.

ಡಾರ್ಸನ್ನರ ಇನ್ನುಳಿದ ಕೃತಿಗಳೂ ಸಹ ಜಾನಪದ ವಲಯದಲ್ಲಿ ವಿದ್ವಾಂಸರ ಹಾಗೂ ವಿದ್ಯಾರ್ಥಿಗಳ ಮೆಚ್ಚುಗೆ ಗಳಿಸಿದವು. ಇದರಲ್ಲಿ ಮುಖ್ಯವಾಗಿದ್ದು ಫೋಕ್ ಲೋರ್ ಅಂಡ್ ಫೋಕ್ ಲೈಫ್ ಆನ್ ಇಂಟ್ರೋಡಕ್ಷನ್ ಎಂಬ ಗ್ರಂಥ. ಇದೊಂದು ಸಂಪಾದನಾ ಗ್ರಂಥ. ಇದರಲ್ಲಿ ಸುಮಾರು 18 ಮಂದಿ ಜಾನಪದ ಸಂಶೋಧಕರು ಬರೆದಿರುವ ಬೇರೆ ಬೇರೆ ಬಗೆಯ ಲೇಖನಗಳಿವೆ. ಜಾನಪದ ಮತ್ತು ಜನಪದ ಜೀವನದ ಬಗ್ಗೆ ಡಾರ್ಸನ್ನರ ವಿಚಾರಗಳು ಇದರ ಪೀಠಿಕಾಭಾಗದಲ್ಲಿ ಪ್ರತಿಪಾದಿತವಾಗಿವೆ ಜಾನಪದ ಎಂದರೆ ಏನು, ಜಾನಪದ ತಜ್ಞ ಏನು ಮಾಡುತ್ತಾನೆ ಎಂಬ ಪ್ರಶ್ನೆಗಳಿಗೆ ಉತ್ತರ ನೀಡುವುದೇ ಈ ಗ್ರಂಥದ ಉದ್ದೇಶ ಎಂದು ಡಾರ್ಸನ್ ಹೇಳುತ್ತಾರೆ. ಇತರ ವಿದ್ವಾಂಸರು ಬರೆದಿರುವ ಲೇಖನಗಳನ್ನು ಮೌಖಿಕ ಜಾನಪದ, ಸಾಮಾಜಿಕ ಜನಪದ ಸಂಸ್ಕೃತಿ, ವಸ್ತು ಸಂಸ್ಕೃತಿ, ಲಲಿತ ಕಲೆಗಳು ಮುಂತಾದ ವಿಭಾಗಗಳಲ್ಲಿ ಕೊಡಲಾಗಿದೆ.

ಜಾನಪದವನ್ನು ಅಧ್ಯಯನಿಸುವ ವಿಧಾನ ಎಂಬ ವಿಭಾಗದಲ್ಲಿ ಕ್ಷೇತ್ರಕಾರ್ಯ ವಸ್ತು ಸಂಸ್ಕೃತಿಯ ಸಂಗ್ರಹಣೆ, ದಾಖಲಾತಿ, ಪತ್ಯಾಗಾರದಲ್ಲಿಡುವ ಕ್ರಮ, ಮುದ್ರಿತ ಮೂಲ ಗಳ ಬಳಕೆ ಮುಂತಾದ ವಿಷಯಗಳಿಗೆ ಸಂಬಂಧಿಸಿದ ಲೇಖನಗಳಿವೆ. ಇಡೀ ಗ್ರಂಥ ಒಟ್ಟಾರೆಯಾಗಿ ಜಾನಪದ ಅಧ್ಯಯನವು ಅಮೆರಿಕೆಯಲ್ಲಿ ಎಷ್ಟು ದೂರ ಸಾಗಿ ಬಂದಿದೆ ಎಂಬುದನ್ನು ತಿಳಿಸಿಕೊಡುತ್ತದೆ. ಜಾನಪದ ಅಧ್ಯಯನ ಒಂದು ಸ್ವತಂತ್ರವಾದ ವಿಷಯ, ಅದಕ್ಕೆ ಅದರದೇ ಆದ ವಿಧಾನವಿದೆ ಎಂಬುದನ್ನು ನಿರೂಪಿಸುತ್ತದೆ. ಜಾನ ಪದದ ಬಗ್ಗೆ ಸಾಮಾನ್ಯ ಪರಿಚಯವನ್ನು ಬಯಸುವವರಿಗೂ ಹಾಗೂ ಈ ಅಧ್ಯಯನ ದಲ್ಲಿ ಈಗಾಗಲೇ ತೊಡಗಿಕೊಂಡವರಿಗೂ ಕೂಡಿಯೇ ಇದು ಉಪಯುಕ್ತ ಗ್ರಂಥ ಎಂದು ಸ್ಟೀಫನ್‌ಸ್ಟರ್ನ್ ಎಂಬ ವಿಮರ್ಶಕ ಹೇಳುತ್ತಾನೆ. 'ಇದು ಇನ್ನೂ ಕೆಲಕಾಲದವರೆಗೆ ಈ ಕ್ಷೇತ್ರದ ಮಾನಕ ಗ್ರಂಥವಾಗಿ ನಿಲ್ಲುತ್ತದೆ' ಎಂದು ಮತ್ತೊಂದು ವಿಮರ್ಶೆ ಪ್ರಶಂಸಿ ಸಿದೆ. ಫೋಕ್‌ಲೋರ್, ಸೆಲೆಸ್ಟೆಡ್ ಎಸ್ಸೆಸ್ ಅನ್ನುವುದು ಡಾರ್ಸನ್ನರು ಜಾನಪದ ವಿದ್ಯಾರ್ಥಿ ಹಾಗೂ ವಿದ್ವಾಂಸರ ತಕ್ಷಣದ ಕಾಳಜಿಗಳನ್ನು ಗಮನದಲ್ಲಿಟ್ಟುಕೊಂಡು ರಚಿಸಿದ ಗ್ರಂಥ. ಇದರ ಪೀಠಿಕಾ ಪ್ರಬಂಧದಲ್ಲಿ ಜಾನಪದ ಮತ್ತು ಮಾನವಶಾಸ್ತ್ರ, ಮನೋವಿಜ್ಞಾನ, ಇಂಗ್ಲಿಷ್ ಜರ್ಮಾನಿಕ್ ಹಾಗೂ ಇತರ ಸಾಹಿತ್ಯಗಳು, ಪ್ರಾಚೀನ ಇತಿಹಾಸ, ರಾಜಕೀಯ ವಿಜ್ಞಾನ, ಸಂಗೀತ, ಕಲೆ, ಭಾಷೆ ಮುಂತಾದ ಕ್ಷೇತ್ರಗಳ ನಡುವೆ ಇರುವ ಕೊಳುಕೊಡುಗೆಯ ಸಂಬಂಧಗಳನ್ನು ಡಾರ್ಸನ್ ಚರ್ಚಿಸಿದ್ದಾರೆ. ಇನ್ನುಳಿದ ಲೇಖನಗಳು ಜಾನಪದ ತಜ್ಞನಲ್ಲಿರಬೇಕಾದ ಕುಶಲತೆ, ನಗರ ಸಾಂಸ್ಕೃತಿಕ ಸಂದರ್ಭದಲ್ಲಿ ಕ್ಷೇತ್ರ ಕಾರ್ಯದ ಸ್ವರೂಪ, ಕಥೆಗಳ ಸಂವಿಧಾನ ಹಾಗೂ ಶೈಲಿಯ ದೃಷ್ಟಿಯಿಂದ ಜಾನಪದದ ಸೌಂದರ್ಯಾತ್ಮಕತೆ, ವಾಸ್ತವವಾದ ಜಾನಪದ ತಜ್ಞರ ದೃಷ್ಟಿಯಿಂದ ಪುರಾಣ ಮತ್ತು ಐತಿಹ್ಯದ ಪರಿಕಲ್ಪನೆಗಳ ಪುನರ್ ವ್ಯಾಖ್ಯಾನ ಜಾನಪದ ಹಾಗೂ ಚರಿತ್ರೆಗಳು ಒಂದರಲ್ಲೊಂದು ಬೆರೆತು ಹೋಗುವಂಥ ಕ್ಷೇತ್ರಗಳು ಬ್ರಿಟಿಷ್ ಸಹೋದ್ಯೋಗಿಗಳೊಂದಿಗೆ ಅಮೆರಿಕನ್ ಜಾನಪದ ತಜ್ಞರ ಯಶಸ್ವೀ ಪ್ರಯತ್ನಗಳ ಪುನರಾವಲೋಕನ ಮೊದಲಾದ ವಿಷಯಗಳನ್ನು ಕುರಿತಿವೆ. ಅಂತಿಮ ಪ್ರಬಂಧವು ಜಾನಪದದ ಶೈಕ್ಷಣಿಕ ಭವಿಷ್ಯಕ್ಕೆ ಸಂಬಂಧಿಸಿದ್ದು. ಒಟ್ಟಿನಲ್ಲಿ ಈ ಎಲ್ಲ ಪ್ರಬಂಧಗಳೂ ಸೇರಿ, ಜಾನಪದವು ಜೀವಂತವಾದ ಸ್ವತಂತ್ರವಾದ ಮತ್ತು ಅತ್ಯಾಧುನಿಕ ಕಲಿಕೆಯ ಕ್ಷೇತ್ರ, ಪ್ರತಿಯೊಂದು ಕ್ಷೇತ್ರದ ಬೋಧಕರು, ವಿದ್ಯಾರ್ಥಿಗಳು ಮತ್ತು ಸಂಶೋಧಕರು ಇದರ ಪ್ರಯೋಜನವನ್ನು ಪಡೆದುಕೊಳ್ಳುವ ಅಂಶಗಳನ್ನು ಹೊಂದಿದೆ ಎಂಬುದನ್ನು ಶಕ್ತಿಯುತವಾಗಿ ಪ್ರತಿಪಾದಿಸುತ್ತವೆ.

**ಫೋಕ್ ಲೋರ್ ಇನ್ ದಿ ಮಾಡರ್ನ್ ವಲ್ಡ್**

ಆಧುನಿಕ ಜಗತ್ತಿನಲ್ಲಿ ಜಾನಪದ ಎಂಬ ವಿಷಯ ಕುರಿತು 1973ರಲ್ಲಿ ಇಂಡಿಯಾನ ವಿಶ್ವವಿದ್ಯಾಲಯದ ಬ್ಲೂಮಿಂಗ್ ಟನ್ ಕ್ಯಾಂಪಸಿನಲ್ಲಿ ಡಾರ್ಸನ್ ಒಂದು

ಸಮಾವೇಶವನ್ನು ಏರ್ಪಡಿಸಿದ್ದರು. 31 ದೇಶಗಳ ಜಾನಪದ ತಜ್ಞರು ಇದರಲ್ಲಿ ಭಾಗವಹಿಸಿ ತಮ್ಮ ಲೇಖನಗಳನ್ನು ಮಂಡಿಸಿದರು. ಅವುಗಳಲ್ಲಿ ಕೆಲವನ್ನು ಆಯ್ದು ಈ ಗ್ರಂಥವನ್ನು ಸಂಪಾದಿಸಲಾಗಿದೆ. ಜಾನಪದ ಮತ್ತು ನಗರ, ಜಾನಪದ ಮತ್ತು ಚಿಂತನಕ್ರಮ, ಜಾನಪದ ಮತ್ತು ಕೈಗಾರಿಕೀಕರಣ, ಜಾನಪದ ಹಾಗೂ ಸಮೂಹ ಮಾಧ್ಯಮ ನಾಲ್ಕು ಅಂಶಗಳನ್ನು ಆಧರಿಸಿ ತಜ್ಞರು ಈ ವಿಷಯವನ್ನು ಚಿಂತಿಸ ಬೇಕಾಗಿದೆ ಎಂದು ಇಲ್ಲಿ ಡಾರ್ಸನ್ ಸೂಚಿಸಿದ್ದಾರೆ. ಡಾರ್ಸನ್‌ರ ಆಶಯ ಭಾಷಣವು ಸಾಂಪ್ರದಾಯಿಕ ಪರಿಕಲ್ಪನೆಯ ಜಾನಪದ, ಪುನರ್ವಿಮರ್ಶಿತ ಪರಿಕಲ್ಪನೆಯ ಜಾನಪದ ಎಂಬ ಎರಡು ವಿಭಾಗಗಳಲ್ಲಿ ಆಯಾ ಪರಿ ಕಲ್ಪನೆಗಳ ಪ್ರಕಾರ ನಡೆದಿರುವ ಅಧ್ಯಯನಗಳ ಸ್ವರೂಪವನ್ನು ವಿವರವಾಗಿ ಚರ್ಚಿಸುತ್ತವೆ. ಜಾನಪದವು ಪ್ರಾಚೀನ, ಗ್ರಾಮೀಣ ಅಥವಾ ಕೆಳಸ್ತರಕ್ಕೆ ಸೀಮಿತವಾದ ವಿಷಯದಲ್ಲಿ ಅದಕ್ಕೆ ಪ್ರತಿಯಾಗಿ ಅದು ಇಂದಿಗೆ, ಇಂದಿನ ನಗರ, ಕೈಗಾರಿಕಾ ಕ್ರಾಂತಿ ಹಾಗೂ ವಿಚಾರಕ್ರಮಗಳಿಗೆ ಸಂಬಂಧಿಸಿದ ಸಮಕಾಲೀನ ಅಂಶವಾಗಿದೆ ಎಂಬ ನಿಲು ವನ್ನು ಡಾರ್ಸನ್ ಪ್ರತಿಪಾದಿಸಿದ್ದಾರೆ. ಜಾನಪದದ ಸೃಷ್ಟಿ ಮತ್ತು ಉಳಿವಿಗೆ ಮಾರಕ ಎಂದು ಹೇಳಲಾಗುವ ನಗರ, ಕೈಗಾರಿಕೆ ಮತ್ತು ತಂತ್ರಜ್ಞಾನ, ಸಮೂಹ ಮಾಧ್ಯಮ ಗಳಲ್ಲಿ ಜಾನಪದ ಸೃಷ್ಟಿ ಹಾಗೂ ಉಳಿವಿಗೆ ಹೇಗೆ ಪೂರಕವಾಗಿದೆ ಎಂಬುದನ್ನು ಇಲ್ಲಿ ಸೋದಾಹರಣ ಪೂರ್ವಕವಾಗಿ ಪರಿಚಯಿಸಲಾಗಿದೆ. ಜೊತೆಗೆ ರಾಷ್ಟ್ರೀಯತಾ ಮತ್ತು ರಾಜಕೀಯ ಚಿಂತನ ಕ್ರಮಗಳೂ ಜಾನಪದವನ್ನು ಬೆಳೆಸುವ ಬಗೆಯ ಬಗ್ಗೆ ವಿಸ್ತಾರವಾಗಿ ಪ್ರಸ್ತಾಪಿಸಲಾಗಿದೆ.

ಡಾರ್ಸನ್ನರ ಅಭಿಪ್ರಾಯದಲ್ಲಿ ನಗರ ಜನಪದಗಳು, ಗ್ರಾಮೀಣ ಜನಪದಗಳಿಗಿಂತ ಭಿನ್ನ, ಇವರ ನಡಾವಳಿಗಳನ್ನು ಅಧ್ಯಯನಿಸುವಾಗ ಸಾಂಪ್ರದಾಯಿಕ ಪರಿಕಲ್ಪನೆ ಯನ್ನು ಪುನರ್ವಿಮರ್ಶಿಸಿಕೊಳ್ಳುವುದು ಅಗತ್ಯ. ನಗರದ ಜನಾಂಗಿಕ, ಸಾಮಾಜಿಕ- ಆರ್ಥಿಕ, ಔದ್ಯೋಗಿಕ, ವೃತ್ತಿ ಗುಂಪುಗಳಲ್ಲಿ ಕೆಲಸಮಾಡಲು ಅನಂತ ಸಾಧ್ಯತೆಗಳಿವೆ. ಜಾನಪದದ ಪರಿಚಿತ ಪ್ರಕಾರಗಳಾದ ಕಥೆ, ಹಾಡು ಮುಂತಾದವು ನಗರ ಜಾನಪದ ದಲ್ಲಿ ಹೆಚ್ಚಾಗಿ ಸಿಗುವುದಿಲ್ಲ. ಜೋಕ್ ಗಳೇ ನಗರದಲ್ಲಿನ ಆಧುನಿಕ ಜನಪದ ಕಥೆಗಳು, ನಗರಗಳಿಗೆ ವಲಸೆ ಬಂದವರು ತಮ್ಮ ಮೂಲ ನೆಲೆ, ದೇಶಗಳ ಬಗ್ಗೆ ಹೇಳುವ ನೆನಪಿನ ಕಥೆಗಳೂ ಇಲ್ಲಿ ಹೆಚ್ಚು ಸಿಗುವಂಥವು, ಪಠ್ಯ ರೂಪದಲ್ಲಿಲ್ಲದ ಮತ್ತು ಸಂಗ್ರಹಿಸುವುದಕ್ಕೆ ಕಷ್ಟಸಾಧ್ಯವಾದಂತಹ ಪ್ರಕಾರಗಳ ಕಡೆ ಹೆಚ್ಚು ಗಮನಹರಿಸಬೇಕು ಎಂದು ಇಲ್ಲಿ ಸೂಚಿಸಿದ್ದಾರೆ. ಡಾರ್ಸನ್ನರು ಸ್ವತಃ ನಗರ ಜಾನಪದದ ಬಗ್ಗೆ ಸಾಕಷ್ಟು ಕ್ಷೇತ್ರ ಕಾರ್ಯ ನಡೆಸಿ ಜೋಕ್, ಕಾಲೇಜು ವಿದ್ಯಾರ್ಥಿಗಳ ಜಾನಪದ, ಸೈನಿಕ ಜಾನಪದ ಗಳನ್ನು ಸಂಗ್ರಹಿಸಿದ್ದರು.

ನಗರ ಕೈಗಾರಿಕೀಕರಣವು ಹಳೆಯ ಜನಪದ ಸಮುದಾಯವನ್ನು ನಾಶಮಾಡಿದೆ ಮತ್ತು ಅದರ ಸ್ಥಳದಲ್ಲಿ ಯಂತ್ರಗಳಿಗೆ ಬಂಧಿತವಾದ ಮುಖಹೀನ ಸಂಸ್ಕೃತಿಯನ್ನು ಹುಟ್ಟು ಹಾಕಿದೆ ಎಂಬುದು ಜಾನಪದದ ಬಗ್ಗೆ ಹಳೆಯ ಪರಿಕಲ್ಪನೆಯನ್ನು ಹೊಂದಿರು ವವರ ವಾದ. ಇದಕ್ಕೆ ಪ್ರತಿಯಾಗಿ ವಾದಿಸುವವರ ಪ್ರಕಾರ ಕೈಗಾರಿಕೀಕರಣವೆಂದರೆ ನಿರ್ದಿಷ್ಟ ಜನಪದ ಸಂಸ್ಕೃತಿಯ ಅಂತ್ಯವೆಂದೇ ಅರ್ಥವಾಗಬೇಕಿಲ್ಲ. ಕೈಗಾರಿಕೀಕರಣ ಮತ್ತು ನಗರೀಕರಣಗೊಂಡ ಪ್ರಪಂಚದಲ್ಲಿ ಜನಪದ ಸಂಸ್ಕೃತಿಯು ಅನುಭವಿಸಿರುವ ಮಾರ್ಪಾಟು ಹಾಗೂ ಪರಿವರ್ತನೆಗಳನ್ನು ಹುಡುಕಬೇಕು ಎಂಬುದಾಗಿತ್ತು. ಕೈಗಾರಿಕಾ ಜಾನಪದದ ಯಾವುದೇ ಪರಿಶೀಲನೆಯು ನಿರ್ದಿಷ್ಟ ಯಂತ್ರಗಳು ಜಾನಪದವು ಕೇಂದ್ರೀಕೃತವಾಗುವುದನ್ನು ಒಳಗೊಳ್ಳಬೇಕಾಗುತ್ತದೆ ಎಂದು ಡಾರ್ಸನ್ ಸೂಚಿಸುತ್ತಾರೆ. ಉದಾಹರಣೆಗೆ ವಾಹನಗಳನ್ನು ಕುರಿತ ಐತಿಹ್ಯಗಳು, ಕಂಪ್ಯೂಟ ಜೋಕ್‌ಗಳು ವಾಹನ ಮತ್ತು ಕಂಪ್ಯೂಟರ್‌ಗಳು ಯಂತ್ರಯುಗದ ಎರಡು ಮುಖ್ಯ ತಾಂತ್ರಿಕ ಸಂಕೇತಗಳು. ಇವು ಜನಪದರ ಆಕರ್ಷಣೆಯನ್ನು ಸೆರೆಹಿಡಿದಿವೆ. ಕಂಪ್ಯೂಟರ್ ಅಂತೂ, ಮಾನವನ ಅನ್ವೇಷಣೆಗಳ ಅತ್ಯಂತ ವಿಚಿತ್ರವಾದ ಹಾಗೂ ಮಾನುಷತೆಯ ಸ್ಪರ್ಶವಿಲ್ಲದ ಅನ್ವೇಷಣೆ ಎಂದು ಡಾರ್ಸನ್ ಹೇಳುತ್ತಾರೆ. ಅಮೆರಿಕೆಯಲ್ಲಿ ತಂತ್ರ ಜ್ಞಾನ ಮತ್ತು ಕೈಗಾರಿಕೀರಣ ಅಷ್ಟೆಲ್ಲಾ ಅಭಿವೃದ್ಧಿ ಹೊಂದಿದ್ದರೂ ಅಮೆರಿಕನ್ ಜಾನಪದ ತಜ್ಞರು ಕೈಗಾರಿಕಾ ಪರಂಪರೆಗಳ ಬಗ್ಗೆ ಹೆಚ್ಚಿನ ಅಧ್ಯಯನವನ್ನೇನೂ ನಡೆಸಿಲ್ಲ ಎಂಬ ಅಭಿಪ್ರಾಯ ಇಲ್ಲಿ ವ್ಯಕ್ತವಾಗಿದೆ.

**ಜಾನಪದ ಮತ್ತು ಸಮೂಹ ಮಾಧ್ಯಮ**

ಜಾನಪದದ ಸಾಂಪ್ರದಾಯಿಕ ಪರಿಕಲ್ಪನೆಯಲ್ಲಿ ಮೌಖಿಕರೂಪದ ಅಭಿವ್ಯಕ್ತಿಯೇ ಪರಮೋಚ್ಚ. ಮುದ್ರಣ ಹಾಗೂ ರೇಡಿಯೋ, ಸಿನೆಮಾ, ದೂರದರ್ಶನಗಳಂತಹ ಎಲೆಕ್ಟ್ರಾನಿಕ್ ಮಾಧ್ಯಮಗಳಿಂದಾಗಿ ಮೌಖಿಕ ಪ್ರಸಾರಣ ಮಂಕಾಗಿದೆ. ಭಾರೀ ಪ್ರಮಾಣದ ವೃತ್ತ ಪತ್ರಿಕೆಗಳು ಹಾಗೂ ನಿಯತಕಾಲಿಕೆಗಳು, ಸಿನಿಮಾ, ದೂರದರ್ಶನ ಧ್ವನಿಮುದ್ರಣ ಡಿಸ್ಕ್‌ಗಳು ಇವೇ ಮೊದಲಾದುವನ್ನೊಳಗೊಂಡ ಸಮೂಹ ಮಾಧ್ಯಮವೇ ಜಾನಪದದ ವೈಖರಿ ಎಂದು ಹೇಳುವ ಇವರ ದೃಷ್ಟಿಯಲ್ಲಿ ನಮ್ಮ ನಾಗರಿಕತೆಯಿಂದ ದೂರ ಉಳಿದ ಕೆಲವು ಭಾಗಗಳಲ್ಲಿ ಎಲ್ಲಾ ಪರ್ವತ ಪ್ರದೇಶಗಳ ತಪ್ಪಲುಗಳಲ್ಲಿ ಅಥವಾ ಆಧುನಿಕತೆಗೆ ಶರಣಾಗದ ತೀರಾ ಸಂಪ್ರದಾಯವಾದಿಗಳಾದ ಜನಸಮೂಹಗಳಲ್ಲಿ ಮಾತ್ರ ಕಳಂಕರಹಿತವಾದ, ಮೌಖಿಕ ಪರಂಪರೆ ಹಾಗೂ ಮುಖಾ ಮುಖಿಯಾಗುವ ಶ್ರೋತೃವರ್ಗ ಇರುತ್ತದೆ ಎಂಬ ಅಭಿಪ್ರಾಯವಿದ್ದಿತು. ಸಾವಿರಾರು ಜನಕ್ಕೆ ದಿಢೀರನೆ ತಲುಪುವ ಈ ಮಾಧ್ಯಮಗಳ ಪರಂಪರೆಯು, ನಿಧಾನವಾಗಿ ಬೇರಿಳಿಸುವ ಅಗೋಚರ ಸಂಸ್ಕೃತಿಗೆ ವಿರುದ್ಧವಾದ್ದು ಎಂಬುದು ಇವರ ನಿಲುವಾಗಿತ್ತು.

ಜಾನಪದ ಮತ್ತು ಈ ಮಾಧ್ಯಮಗಳ ಸಂಸ್ಕೃತಿಯ ನಡುವೆ ಕೊಳುಕೊಡುಗೆ ಇರಬಹುದು ಎಂದು ಡಾರ್ಸನ್ ಅಭಿಪ್ರಾಯಪಡುತ್ತಾರೆ. ಜಾನಪದದ ಅಂಶಗಳನ್ನು ಸೂಕ್ತವಾಗಿ ಅಳವಡಿಸಿಕೊಂಡು ಈ ಮಾಧ್ಯಮಗಳು ಜಾನಪದದ ಪ್ರಸಾರಕಾರ್ಯ ಮಾಡುತ್ತಿರುವ ಅಂಶವನ್ನೇ ಕೆಲವು ವಿದ್ವಾಂಸರು ಅಧ್ಯಯಿನಿಸಿದ್ದಾರೆ. ಆದರೂ ಸಮೂಹ ಮಾಧ್ಯಮಗಳು ಜಾನಪದವನ್ನು ವ್ಯಾಖ್ಯಾನಿಸುವ ಬಗೆಯತ್ತ ಹೆಚ್ಚಿನ ಅಧ್ಯಯನಗಳೇನೂ ನಡೆದಿಲ್ಲ ಎಂದು ಭಾವಿಸಿದ ಡಾರ್ಸನ್ ಅವರು ಜಾನಪದ ಆಶಯ ಕಥೆ, ಐತಿಹ್ಯ ಇತ್ಯಾದಿಗಳು ಸಮೂಹ ಮಾಧ್ಯಮಗಳಲ್ಲಿ ಬಳಕೆಯಾಗಿರುವ ಬಗ್ಗೆ ನಡೆದಿರುವ ಕೆಲವು ಅಧ್ಯಯನಗಳನ್ನು ಉದಾಹರಿಸುತ್ತಾರೆ. ಡಾರ್ಸನ್ನರು ಸ್ವತಃ ತಮ್ಮ ವಿದ್ಯಾರ್ಥಿಗಳಿಗೆ ಸಮೂಹ ಮಾಧ್ಯಮಗಳನ್ನು ಪರಿಶೀಲಿಸಿ ಅವುಗಳಿಂದ ಜಾನಪದವನ್ನು ಸಂಗ್ರಹಿಸುವ ಕೆಲಸವನ್ನು ನಿಯೋಜಿಸಿದರು. ಮೊದಲು ಈ ಮಾಧ್ಯಮಗಳಲ್ಲಿನ ಜಾನಪದೀಯ ವಸ್ತುವನ್ನು ಗುರುತಿಸುವದು, ಅನಂತರ ಅದಕ್ಕೂ ಮೌಖಿಕ ಜಾನಪದ ಮೂಲಗಳಿಗೂ ಇರುವ ಸಂಬಂಧವನ್ನು ವ್ಯಾಖ್ಯಾನಿಸುವುದು ಹೀಗೆ ಅಳವಡಿಸಿಕೊಂಡ ಜಾನಪದವನ್ನು ಯಾವ ಉದ್ದೇಶಕ್ಕೆ ಬಳಸಿಕೊಳ್ಳಲಾಗುತ್ತಿದೆ ಎಂಬುದನ್ನು ಅಧ್ಯಯನಿ ಸುವ ಕೆಲಸವನ್ನು ವಿದ್ಯಾರ್ಥಿಗಳು ಮಾಡಬೇಕಾಗಿತ್ತು. ಸಮೂಹ ಮಾಧ್ಯಮದಲ್ಲಿ ಜಾನಪದವು ಸಮೃದ್ಧವಾಗಿ ಬಳಕೆಯಾಗುತ್ತಿರುವ ಅಂಶ ಈ ಅಧ್ಯಯನಗಳಿಂದ ವೇದ್ಯವಾಯಿತು.

ಸಮೂಹ ಮಾಧ್ಯಮಗಳಲ್ಲಿ ಜಾನಪದವನ್ನು ಪರಿಶೀಲಿಸುವ ಸಾಧ್ಯತೆಗಳು ಸಮೃದ್ಧವಾಗಿವೆ. ಆದರೆ ಇಲ್ಲಿ ಎದುರಾಗುವ ವಿಧಾನ, ವರ್ಗೀಕರಣ, ಅಭಿರುಚಿ ಹಾಗೂ ಸಾಂಸ್ಕೃತಿಕ ವಿಶ್ಲೇಷಣೆಗೆ ಸಂಬಂಧಿಸಿದ ಸಮಸ್ಯೆಗಳು ಕಠಿಣವಾದಂಥವು. ವೃತ್ತಪತ್ರಿಕೆಗಳಲ್ಲಿ ಮುದ್ರಿತವಾದುದನ್ನಾದರೂ ಕಷ್ಟ ಪಟ್ಟು ಸಂಗ್ರಹಿಸಬಹುದು. ಆದರೆ ರೇಡಿಯೋ ದೂರದರ್ಶನಗಳಲ್ಲಿ ಮಿಂಚಿ ಮರೆಯಾಗುವ ಜಾನಪದವನ್ನು ಅಧ್ಯಯಿನಿಸುವುದು ಹೇಗೆ ? ಆದರೂ ವಿದ್ವಾಂಸರು ಈ ಅಂಶಗಳು ಗಮನಹರಿಸಿದ್ದೇ ಆದರೆ ಉತ್ತರವೂ ಸಿಕ್ಕೇ ಸಿಗುತ್ತದೆ ಎಂದು ಡಾರ್ಸನ್ ಅಭಿಪ್ರಾಯಪಡುತ್ತಾರೆ.

**ಜಾನಪದ ಮತ್ತು ರಾಷ್ಟ್ರೀಯತೆ ರಾಜಕಾರಣ ಚಿಂತನಕ್ರಮ**

ಜಾನಪದವು ಪುರಾತನತೆಯು ಹವ್ಯಾಸವಾಗಿರುವುದರ ಜೊತೆಗೆ ಅದರ ಚರಿತ್ರೆ ಯುದ್ದಕ್ಕೂ ರಾಷ್ಟ್ರೀಯ ವಿಷಯ ಮತ್ತು ಕಾಳಜಿಗಳೊಂದಿಗೆ ಥಳಕು ಹಾಕಿ ಕೊಂಡಿರುವ ವಿಷಯವನ್ನು ಡಾರ್ಸನ್ ಇಲ್ಲಿ ಪರಿಶೀಲಿಸುತ್ತಾರೆ. ರಾಷ್ಟ್ರೀಯ ಪ್ರಜ್ಞೆ ಯನ್ನು ಬಲಪಡಿಸುವುದಕ್ಕೆ ತಮ್ಮ ಜಾನಪದ ಪರಂಪರೆಗಳು ನೆರವಾಗಬಹುದು ಎಂಬುದನ್ನು ಜರ್ಮನಿ, ಫಿನ್ನೆಂಡ್, ನಾರ್ವೆ, ಐರೆಂಡ್, ಗ್ರೀಸ್ ಮೊದಲಾದ ದೇಶ ಗಳು ಕಂಡುಕೊಂಡವು. ಇಂಥ ಪ್ರಜ್ಞೆಯನ್ನು ಬೆಳಸುವುದಕ್ಕೆ ಜಾನಪದದಂತೆ ಆಯಾ

ದೇಶದ ಭಾಷೆ, ಸಾಹಿತ್ಯ, ಇತಿಹಾಸಗಳು ನೆರವಾಗಬಹುದಾದರೂ ಈ ದಿಸೆಯಲ್ಲಿ ಜಾನಪದವೇ ಪ್ರಬಲ ಅಸ್ತ್ರವಾಗಬಹುದು, ಏಕೆಂದರೆ ಅದು ಪ್ರಾದೇಶಿಕ ಉಪಭಾಷೆಗಳಲ್ಲಿ ಹುದುಗಿರುವ ಸಾಧ್ಯತೆಯಿದೆ ಮತ್ತು ಅದು ಸಾಹಿತ್ಯಕ್ಕೆ ವಸ್ತುವನ್ನು ಸೂಚಿಸ ಬಹುದು, ಗತಕಾಲದ ಪುರಾಣ ಮತ್ತು ನೆನಪನ್ನು ಅದು ಒಳಗೊಂಡಿರಬಹುದು. ಹೀಗಾಗಿ ಜಾನಪದಕ್ಕೆ ಹೆಚ್ಚಿನ ಆದ್ಯತೆ ದೊರೆಯಿತು.

ರಾಷ್ಟ್ರ ಪ್ರಜ್ಞೆಯನ್ನು ಬೆಳೆಸುವುದಕ್ಕಷ್ಟೇ ಅಲ್ಲ ಒಂದು ನಿರ್ದಿಷ್ಟ ರಾಷ್ಟ್ರೀಯ ವಿಚಾರಧಾರೆಯನ್ನು ಪ್ರಚುರಪಡಿಸುವುದಕ್ಕೂ ಜಾನಪದವನ್ನು ಬಳಸಿಕೊಳ್ಳಬಹುದು ಎಂಬುದನ್ನೂ ಸೋವಿಯತ್ ರಷ್ಯಾ ಕಂಡುಕೊಂಡಿತು. ಹೀಗಾಗಿ ಇಲ್ಲಿ ಜಾನಪದ ಅಧ್ಯಯನಕ್ಕಾಗಿ ವಿಶೇಷ ಪ್ರೋತ್ಸಾಹ ದೊರೆಯಿತು. ದುಡಿಯುವ ವರ್ಗಗಳ ವಾಸ್ತವ ಗಳು ಮತ್ತು ಆಕಾಂಕ್ಷೆಗಳ ಅಭಿವ್ಯಕ್ತಿಯಾಗಿ ಜಾನಪದದ ಮಹತ್ವವನ್ನು ಮ್ಯಾಕ್ಸಿ ಗಾರ್ಕಿ ಒತ್ತಿ ಹೇಳಿದ. ದ. ಅಂದಿನಿಂದ ವ್ಯಾಪಕವಾಗಿ ಜಾನಪದವನ್ನು ಸಂಗ್ರಹಿಸುವ ಚಟುವಟಿಕೆಗೆ ಮತ್ತು ಜಾನಪದವನ್ನು ಸಮಾಜವಾದಿ ದೃಷ್ಟಿಯಿಂದ ವ್ಯಾಖ್ಯಾನಿ ಸುವುದಕ್ಕೆ ಸರ್ಕಾರದ ನೀತಿಯಲ್ಲಿ ಬಲವಾದ ಬೆಂಬಲ ವ್ಯಕ್ತವಾಯಿತು, ಕಮ್ಯೂನಿಸಂನ ಪ್ರಖರ ವಿಚಾರಗಳನ್ನೂ ಪ್ರಚಾರಮಾಡುವುದಕ್ಕೆ ಇದೊಂದು ಕಲಾತ್ಮಕ ಶಕ್ತಿ ಎಂದು ಸೊಕೂರೂವ್ ಅಭಿಪ್ರಾಯಪಟ್ಟ, ಸೋವಿಯತ್ ಯೂನಿಯನ್ನಿನಲ್ಲಿ ನಡೆದ ಜಾನಪದ ಅಧ್ಯಯನವು, ಜಾನಪದದ ಪ್ರತಿಭಟನಾತ್ಮಕ ಹಾಗೂ ಪ್ರಚಾರಾತ್ಮಕ ಮಹತ್ವವನ್ನು ಎತ್ತಿ ತೋರಿಸಿತು.

ಜಾನಪದವನ್ನು ಕುರಿತಂತೆ ಸಾಮಾನ್ಯ ಅಭಿಪ್ರಾಯದಲ್ಲಾಗಿರುವ ಬದಲಾವಣೆ ಹಾಗೂ ಜಾನಪದದ ಹೊಸ ದ ಹೊಸ ಮತ್ತು ಭಿನ್ನವಾದ ವಸ್ತುವಿಗಾಗಿ ವ್ಯಕ್ತವಾಗಿರುವ ಆಕಾಂಕ್ಷೆ ಇವು. ಜಾನಪದವು ಸಮಕಾಲೀನವಾದದ್ದು ಎಂಬ ನನ್ನ ಸಿದ್ಧಾಂತವನ್ನು ಸಮರ್ಥಿಸುತ್ತದೆ ಎಂದು ಡಾರ್ಸನ್ ಹೇಳುತ್ತಾರೆ. ಹಳೆಯ ಮಹಾ ಕಾವ್ಯಗಳನ್ನು ಪುನರ್ ಸೃಷ್ಟಿಸಿದ್ದಷ್ಟೆ ಅಲ್ಲ ಸಮುದಾಯ ಕೃಷಿ ಕೇಂದ್ರಗಳಿಂದ ಹಾಗೂ ಯಂತ್ರ ಚಾಲಿತ ಟ್ರಾಕ್ಟರ್ ಕೇಂದ್ರಗಳಿಂದ ಕ್ರಾಂತಿಕಾರಕವಾದ ಸಾಮಗ್ರಿ ಮತ್ತು ಕೈಗಾರಿಕಾ ಕಾರ್ಮಿಕರ ಜಾನಪದವನ್ನು ಸಂಗ್ರಹಿಸಲಾಯಿತು. ಇದೇ ರೀತಿ ಅಮೆರಿಕನ್ ಕ್ರಾಂತಿ ಯಾದ ಅರ್ಧಶತಮಾನದ ತರುವಾಯ ಅಮೇರಿಕದ ನೆಲೆಯಲ್ಲಿಯೂ ಹೊಸ ಪ್ರಜಾ ಪ್ರಭುತ್ವದ ಜನಪದ ನಾಯಕರು ಹುಟ್ಟಿಕೊಂಡರು. ಇತರ ದೇಶಗಳಲ್ಲಿಯೂ ಸಹ ಸಮಕಾಲೀನ ವಿಚಾರತತ್ವ ಮತ್ತು ಮನೋಧರ್ಮವನ್ನು ಪ್ರತಿಬಿಂಬಿಸುವಂತಹ ಜಾತಪದ ಸೃಷ್ಟಿಯಾಗುತ್ತಿದೆ.

ಚಿಂತನ ಕ್ರಮ ರಾಜಕಾರಣ ಹಾಗೂ ರಾಷ್ಟ್ರೀಯತಾ ಉದ್ದೇಶಗಳಿಗಾಗಿ ಜಾನ ಪದವನ್ನು ಬಳಸಿಕೊಳ್ಳುವ ಎಲ್ಲಾ ಪ್ರಶ್ನೆಗಳನ್ನೂ ಪರಿಶೋಧಿಸುವುದು ಅಗತ್ಯ. ಜಾನ ಪದವು ವಿಘಟನಕಾರಿಯೂ ಆಗಬಹುದು ಏಕೀಕರಣಕಾರಿಯೂ ಆಗಬಹುದು.

ಆಧುನಿಕ ಜಗತ್ತಿನ ರಾಜಕೀಯ ಧೋರಣೆಗಳು ಪ್ರಜಾಪ್ರಭುತ್ವದ ಮಾರ್ಗವನ್ನೇ ಅನು ಸರಿಸಲಿ ಇಲ್ಲವೇ ಸಮಾಜವಾದದ ಮಾರ್ಗವನ್ನೇ ಅನುಸರಿಸಲಿ ಅಂತಿಮವಾಗಿ ಅವು ಸಂಬಂಧಪಡುವುದು ಒಂದು ಜನ ಸಮುದಾಯಕ್ಕೆ ಮತ್ತು ಎಂದಿಗಾದರೂ ಅವು ಜನತೆಯ ಪರಂಪರೆಗಳನ್ನೇ ಆಶ್ರಯಿಸುತ್ತವೆ ಎಂದು ಡಾರ್ಸನ್ ಅಭಿಪ್ರಾಯ ಪಡು ತ್ತಾರೆ.

ಒಟ್ಟಿನಲ್ಲಿ ಈ ಗ್ರಂಥವು ಆಧುನಿಕ ಜಗತ್ತಿನಲ್ಲಿ ಜಾನಪದ ಎಂಬ ದಿಸೆಯಲ್ಲಿ ಜಾನಪದ ತಜ್ಞರ ಚಿಂತನೆಗಳನ್ನು ಮತ್ತು ಈ ಸಂಬಂಧವಾಗಿ ನಡೆದಿರುವ ಆಧ್ಯಯನ ಗಳನ್ನೂ ಸಮರ್ಥವಾಗಿ ಪರಿಚಯ ಮಾಡಿಕೊಡುತ್ತದೆ.

ಡಾರ್ಸನ್ ಅವರು ಸಂಪಾದಕರಾಗಿ ಪ್ರಕಟಿಸಿದ ಕೃತಿಗಳಲ್ಲಿ ಬಹು ಪ್ರಸಿದ್ಧ ವಾದದ್ದು ವಿಶ್ವ ಜನಪದ ಕಥಾ ಸರಣಿ. ವಿಶ್ವ ಜನಪದ ಕಥಾ ಸರಣಿಯ ಪ್ರಧಾನ ಸಂಪಾದಕರಾಗಿ ಅವರು ಚಿಲಿ, ಗ್ರೀಸ್, ಚೀನಾ, ಇಂಗ್ಲೆಂಡ್, ಫ್ರಾನ್ಸ್, ಜರ್ಮನಿ, ಹಂಗರಿ, ಐರ್ಲೆಂಡ್, ಇಸ್ರೇಲ್, ಜಪಾನ್, ನಾರ್ವೆ ಮೊದಲಾದ 12 ವಿವಿಧ ದೇಶಗಳ ಆಚೆ ಜನಪದ ಕಥಾಸಂಕಲನವನ್ನು ಸಂಪಾದಿಸಿದರು. ಇಂಥ ಪ್ರತಿಯೊಂದು ಸಂಕಲನಕ್ಕೂ ಆಯಾ ದೇಶದಲ್ಲಿ ನಡೆದಿರುವ ಜಾನಪದ ಅಧ್ಯಯನದ ಸ್ವರೂಪ ಮತ್ತು ಅಲ್ಲಿನ ಜನಪದ ಕಥೆಗಳ ವೈಶಿಷ್ಟ್ಯವನ್ನು ನಿರೂಪಿಸುವ ತುಂಬಾ ಮಾಹಿತಿಪೂರ್ಣವಾದ ಮುನ್ನುಡಿಗಳನ್ನು ಬರೆದರು. ಜಾನಪದ ವಿದ್ಯಾರ್ಥಿಗಳಿಗೆ ತುಂಬ ಉಪಯುಕ್ತವಾದ ಮಾಹಿತಿಗಳು ಇಲ್ಲಿ ದೊರೆಯುತ್ತವೆ. ಇದಲ್ಲದೆ ಜಗತ್ತಿನಾದ್ಯಂತದ 46 ದೇಶಗಳ 100 ಕಥೆಗಳನ್ನೊಳಗೊಂಡ Folktales told around the world ಎಂಬ ಇನ್ನೊಂದು ಸಂಕಲನವನ್ನೂ ಡಾರ್ಸನ್ ಸಂಪಾದಿಸಿದರು. ಈ ಗ್ರಂಥವನ್ನು ಕುರಿತು ಜಾನ್ ಬಾರ್ಕ್‌ಹ್ಯಾಂ ಎಂಬ ವಿಮರ್ಶಕ ಹೇಳಿರುವ ಮಾತುಗಳು ಡಾರ್ಸನ್ನರು ಸಂಪಾದಿಸಿರುವ ಎಲ್ಲ ಜನಪದ ಕಥಾ ಸಂಕಲನಗಳಿಗೂ ಅನ್ವಯವಾಗುತ್ತಿವೆ. ಇಂಥ ವೈವಿಧ್ಯಮಯವಾದ ಒಂದು ದೊಡ್ಡ ಗ್ರಂಥ ಒಂದು ಸಂಪುಟದಲ್ಲಿ ಇದುವರೆಗೆ ಪ್ರಕಟ ವಾಗಿಲ್ಲ. ಇದು ಪಂಡಿತ ವಲಯವನ್ನು ಉದ್ದೇಶಿಸಿದು. ಇದರ ಮುಖ್ಯ ಉದ್ದೇಶ ಮನರಂಜನೆಗಿಂತ ಹೆಚ್ಚಾಗಿ (ಆದರೆ ಮನರಂಜನೆಯನ್ನೂ ಕೊಡುತ್ತದೆ) ನಾಗರಿಕತೆಯ ಪ್ರಭಾವದಿಂದ ಆಳಿದು ಹೋಗುತ್ತಿರುವ ವಿವಿಧ ದೇಶಗಳ ಜನಪದ ಕಥೆಗಳನ್ನು ಸಂರಕ್ಷಿಸು ವುದು. ಜಾನಪದ ತಜ್ಞರ ಪಾಲಿಗಂತೂ ಇದು ಶ್ರೀಮಂತ ಅಕ್ಷಯ ಪಾತ್ರೆ, ವಿಶ್ವಾಸಾ ರ್ಹವಾದ, ಅಸಲಿಯಾದ ಮತ್ತು ವರ್ಣರಂಜಿತವಾದ ಕಲ್ಪನೆಗಳಿಂದ ವಿಶಿಷ್ಟವಾದ ಗ್ರಂಥ'. ಈ ಗ್ರಂಥದ ಇನ್ನೂ ಕೆಲವು ವಿಶೇಷ ಅಂಶಗಳನ್ನು ಅವರು ಹೀಗೆ ಗುರುತಿಸು ತಾರೆ : ಆಫ್ರಿಕಾ, ಮಧ್ಯಪೂರ್ವ ಯೂರೋಪ್, ಉತ್ತರ ಮತ್ತು ದಕ್ಷಿಣ ಅಮೆರಿಕಾ ಹಾಗೂ ಓಷಾನಿಯಾದ ಅನೇಕ ಕಥೆಗಳು ಮೊದಲ ಬಾರಿಗೆ ಇಲ್ಲಿ ಕಾಣಿಸಿಕೊಳ್ಳುತ್ತಿವೆ

ಇವು ಮೌಖಿಕವಾಗಿ ನಿರೂಪಿತವಾದವು ಮತ್ತು ಮೂಲದಿಂದಲೇ ಬಂದಂಥವು. (ಆದರೆ ಇತರರು ಬಹುತೇಕವಾಗಿ ಸಾಹಿತ್ಯಕ ಮೂಲಗಳಿಂದ ಅಯ್ಕೆ ಮಾಡಿರುತ್ತಾರೆ. ಈ ಕಥೆಗಳ ಜಾನಪದೀಯ ಗುಣವನ್ನು ಸ್ಥಾಪಿಸುವುದಕ್ಕಾಗಿ ಹಿನ್ನೆಲೆಯ ಮಾಹಿತಿ ನಿರೂಪಕರ ಬಗ್ಗೆ ಟಿಪ್ಪಣಿ ಹಾಗೂ ವಿದ್ವತ್ಪೂರ್ಣವಾದ ವ್ಯಾಖ್ಯಾನಗಳನ್ನು ಒದಗಿಸ ಲಾಗಿದೆ. ಇದೇ ಸಂಪಾದಕರ Folklore and Folklifeಗೆ ಹೆಗಲೇಣಿ ಯಾಗಿರುವ ಈ ಕೃತಿ ಡಾರ್ಸನ್ನರು ಈ ಕ್ಷೇತ್ರದ ಮೇಲೆ ಹೊಂದಿರುವ ಪ್ರಭುತ್ವಕ್ಕೆ ಉಜ್ವಲ ನಿದರ್ಶನ."

ಈ ಕಥಾ ಸಂಕಲನಗಳನ್ನು ಸಿದ್ಧಪಡಿಸುವಾಗ, "ಓದುಗ ಸಮುದಾಯಕ್ಕೆ ಜಗತ್ತಿನ ಜನಪದ ಕಥೆಗಳ ಒಂದು ಅರ್ಥವತ್ತಾದ ಹಾಗೂ ಪ್ರಾತಿನಿಧಿಕವಾದ ಮಾದರಿಯನ್ನು ಒದಗಿಸುವ ಯಾವುದೇ ಪ್ರಯತ್ನವೂ ಕೂಡ ಈಗಿನ ಜಾನಪದ ವಿದ್ವತ್ ವಲಯ ಹೊಂದಿರುವ ದೃಷ್ಟಿಕೋನವನ್ನು ಪ್ರತಿನಿಧಿಸಬೇಕು. ಜನಪದ ಕಥೆಯನ್ನು ಒಂದು ಮೌಖಿಕ ನಿರೂಪಣೆ ಎಂಬ ದೃಷ್ಟಿಯಿಂದ ಸಾದರಪಡಿಸಬೇಕೇ ಹೊರತು ಸಾಹಿತ್ಯಕ ಪಠ್ಯದಂತೆ ಅಲ್ಲ" ಎಂಬುದು ಡಾರ್ಸನ್ನರ ನಿಲುವಾಗಿತ್ತು.

ಜನಪದ ಕಥಾ ಸಂಕಲನಗಳನ್ನು ಸಿದ್ಧಪಡಿಸುವವರಿಗೆ ಎದುರಾಗುವ ಕೆಲವು ಸಮಸ್ಯೆಗಳನ್ನು ಡಾರ್ಸನ್ನರು ಪ್ರಸ್ತಾಪಿಸಿದ್ದಾರೆ.17 ಜಗತ್ತಿನಾದ್ಯಂತ ಸರ್ವಸಾಮ್ಯತೆ ಇರುವ ಹಾಗೂ ಅಪಾರ ಸಂಖ್ಯೆಯಲ್ಲಿರುವ ಕಥೆಗಳನ್ನು ಆಯ್ದು ಒಂದು ಪ್ರಾತಿನಿಧಿಕ ಸಂಕಲನವನ್ನು ರೂಪಿಸಿಕೊಡುವುದು ಬಹಳ ಕಷ್ಟಸಾಧ್ಯವಾದ ಕೆಲಸ. ಎಲ್ಲ ಭೌಗೋಳಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಗಳನ್ನು ಸರಿಯಾಗಿ ಪ್ರತಿನಿಧಿಸುವುದು ಹೇಗೆ ? ಎಲ್ಲ ಪ್ರಕಾರಗಳನ್ನೂ ಸಮರ್ಥಿಸಿಕೊಳ್ಳುವುದು ಅಗತ್ಯವೆ, ಸೌಂದರ್ಯಾತ್ಮಕ ಕತೆಯ ಅಳತೆಗೋಲು ಯಾವುದು, ಓದುಗರ ಅಭಿರುಚಿಯನ್ನು ಹೇಗೆ ಪೂರೈಸುವುದು, ಸರಿ ಯಾದ ಮೂಲಗಳನ್ನು ಆಡುಮಾತಿಗೆ ಹತ್ತಿರವಾದ್ದನ್ನು ಹೇಗೆ ಹುಡುಕಿಕೊಳ್ಳುವುದು ಇತ್ಯಾದಿ.

ಸಂಕಲನಕಾರರು ಸಂಗ್ರಹಕಾರರಿಂದ ಸದ್ಯೋಜಾತವಾದಂಥ ಮೌಖಿಕ ಪಠ್ಯ ಗಳನ್ನು ಆಯ್ದುಕೊಳ್ಳಬೇಕು. ಇಲ್ಲವೇ ಪಠ್ಯಾಗಾರಗಳನ್ನ (ಆರ್ಖೈವ್) ಅವಲಂಬಿಸಿರ ಬೇಕು. ಈ ಹಿಂದೆ ಮುದ್ರಿತವಾದ ಹಾಗೂ ಭಾಷಾಂತರವಾದ ಕಥೆಗಳನ್ನು ನೋಡು ವುದನ್ನು ಆದಷ್ಟು ತಪ್ಪಿಸಬೇಕು. ಸಂಕಲನದಲ್ಲಿ ಬರಿ ಶೀರ್ಷಿಕೆ, ವರ್ಗ ಆಶಯಗಳ ವಿವರಣೆ ಇದ್ದರಷ್ಟೇ ಸಾಲದು. ಕಥಾ ನಿರೂಪಕರ ವಿವರಣೆಗಾಗಿ ಸಾಕಷ್ಟು ಜಾಗ ವಿನಿಯೋಗಿಸಬೇಕು ಮತ್ತು ನಿರೂಪಕರರಿಗೆ ಸೂಕ್ತ ಗೌರವ ಸಲ್ಲಿಸಬೇಕು. ಕಥೆ ಯಲ್ಲಿ ಬರುವ ನಂಬಿಕೆ, ಸಂಪ್ರದಾಯ, ಮೌಲ್ಯ, ಚಾರಿತ್ರಿಕ ಘಟನೆ, ವ್ಯಕ್ತಿತ್ವ, ಕಥೆಯು ವ್ಯಕ್ತವಾಗುವ ಇತರ ರೂಪಗಳು, ಅದನ್ನು ಜನಪ್ರಿಯಗೊಳಿಸಿರುವ ಅಂಶ

ಗಳು, ಕಥೆಗಾರನ ತಂತ್ರಮುಂತಾದವುಗಳ ಬಗ್ಗೆ ಒಂದು ತೃಪ್ತಿಕರ ಟಿಪ್ಪಣಿ ಇರಬೇಕು. ಕೇವಲ ಮಾರ್ಶೆನ್ ಮಾದರಿಯ ಕಥಾರೂಪಗಳನ್ನಷ್ಟೇ ಸಂಕಲಿಸಿಕೊಡುವುದು ಸರಿ ಯಲ್ಲ. ಸಮಕಾಲೀನ ಕಥಾ ನಿರೂಪಣೆಯನ್ನು ಪ್ರತಿನಿಧಿಸುವುದು ನಮ್ಮ ಉದ್ದೇಶ ವಾಗಿದ್ದರೆ ವೈದ್ಯ ವೃತ್ತಂತ, ತಮಾಷೆ ಮುಂತಾದ ಪ್ರಕಾರಗಳನ್ನೂ ಸಹ ಕೊಡ ಬೇಕು" (ಸ್ಟಿತ್ ಥಾಂಸನ್ ತಮ್ಮ Folktale ಗ್ರಂಥದಲ್ಲಿ prose narra- tive ಎಂಬ ಪದವನ್ನು ಎಲ್ಲ ರೀತಿಯ ಪರಂಪರಾಗತ ಗದ್ಯಕಥನಗಳಿಗೂ ಅನ್ವಯಿ ಸಲು ಉದ್ದೇಶಿಸಿದರು, ಡಾರ್ಸನ್ ಜನಪದ ಕಥೆ (Folk tale) ಎಂಬುದನ್ನು prose narrative ಎಂಬ ಅರ್ಥದಲ್ಲಿ ಪರಿಭಾವಿಸಿ, ಕಥಾಸಂಕಲನ ಸರಣಿಯ ವಿಷಯದಲ್ಲಿ ಇದೇ ನಿಯಮವನ್ನು ಪ್ರತಿಪಾದಿಸಿದ್ದಾರೆ)

ಬೇರೆ ಬೇರೆ ದೇಶ ಭಾಷೆ ಸಂಸ್ಕೃತಿಗಳ ಕಥೆಗಳನ್ನು ಆಯ್ದು ಸಂಕಲನವಾಗಿ ಕೊಡುವಾಗ ಎದುರಾಗುವ ಕೆಲವು ವಿಶಿಷ್ಟವಾದ ಸಮಸ್ಯೆಗಳನ್ನು ಇಲ್ಲಿ ಡಾರ್ಸನ್ ಪ್ರಸ್ತಾಪಿಸಿದ್ದಾರೆ. ಕೆಲವು ವಿಭಿನ್ನ ಸಂಸ್ಕೃತಿಗಳ ಕಥೆಗಳ ಮೌಲ್ಯ ಹಾಗೂ ಪೂರ್ವ ಕಥಾ ಸೂಚನೆಗಳನ್ನು ವಿವರಿಸುವುದಕ್ಕಾಗಿ ಸಂಪಾದಕೀಯ ಮುನ್ನುಡಿಗಳು ಅಗತ್ಯ. ಶಾಬ್ದಿಕ ಪರಿಣಾಮವನ್ನು ಅವಲಂಬಿಸಿರುವಂಥ ಕಥೆಗಳನ್ನು ಮುದ್ರಣಕ್ಕೆ ತರುವುದೇ ಸಾಧ್ಯವಿಲ್ಲ. ಇದೇ ರೀತಿ ಉಪಭಾಷಾ ಕಥೆಗಳೂ ಸಹ ಓದುಗರ ಗಮನಕ್ಕೆ ತರಲಾಗ ದಿರುವ ಪ್ರಕಾರಗಳಾಗಿವೆ ಎಂದು ಸೋದಾಹರಣವಾಗಿ ಡಾರ್ಸನ್ ತಿಳಿಸುತ್ತಾರೆ.

"ಈ ಸಂಗ್ರಹಗಳನ್ನು ತರುವಾಗ ನಾನು ಏಕರೂಪತೆಗಾಗಿ ಶ್ರಮಿಸಿಲ್ಲ. ನಿರೂಪಕ ರಂತೆ ಸಂಗ್ರಾಹಕರೂ ಸಹ ತಮ್ಮ ತಮ್ಮದೇ ಆದ ವಿಶಿಷ್ಟ ಶೈಲಿಗಳನ್ನು ಹೊಂದಿದ್ದಾರೆ" ಎಂದು ಡಾರ್ಸನ್ ಹೇಳಿರುವ ಅಂಶ ಗಮನಿಸತಕ್ಕದ್ದಾಗಿದೆ.

ಪ್ರತಿಯೊಂದು ಸಂಕಲನವನ್ನು ಸಿದ್ಧಪಡಿಸುವಾಗ ಡಾರ್ಸನ್ ವಹಿಸುತ್ತಿದ್ದ ಎಚ್ಚರ ಮತ್ತು ಮುಂದಾಲೋಚನೆಗಳನ್ನು ಹಾಗೂ ಕಥೆಗಳ ಸಂಬಂಧವಾಗಿ ಅವರು ಹೊಂದಿದ್ದ ಆಳವಾದ ಜ್ಞಾನವನ್ನು ಈ ವಿಚಾರಗಳಲ್ಲಿ ಕಾಣಬಹುದು.

ಡಾರ್ಸನ್ ಅವರು ವಿಶ್ವ ಜನಪದ ಕಥಾ ಸಂಕಲನಗಳ ಸರಣಿಯ ಯೋಜನೆ ಯನ್ನು ಹಾಕಿಕೊಂಡ ಆರಂಭದಿಂದಲೂ ಭಾರತೀಯ ಜನಪದ ಕಥೆಗಳ ಸಂಕಲನವನ್ನು ಪ್ರಕಟಮಾಡುವ ಬಗ್ಗೆ ಚಿಂತನೆ ನಡೆಸಿದ್ದರು. ಈ ಸಂಕಲನಕ್ಕೆ ಅಗತ್ಯವಾದ ಟಿಪ್ಪಣಿ ಗಳನ್ನು ಸಿದ್ಧ ಮಾಡಿಕೊಂಡಿದ್ದರು. ಆದರೆ ಈ ಸಂಕಲನ ಪ್ರಕಟವಾಗುವ ಮೊದಲೇ ಅವರು ನಿಧನರಾಗಿದ್ದು ಒಂದು ದೊಡ್ಡ ನಷ್ಟ. ಅವರ ನಿಧನಾನಂತರ 1987ರಲ್ಲಿ ಇದೇ ಸರಣಿಯಲ್ಲಿ ಭಾರತದ ಜನಪದ ಕಥೆಗಳ ಸಂಕಲನ ಪ್ರಕಟವಾಯಿತು. ಈ ಸಂಕಲನವನ್ನು ಬ್ರೆಂಡಾ ಇ, ಎಫ್, ಬೆಕ್ ಹಾಗೂ ಪೀಟರ್ ಜೆ, ಕ್ಲಾಸ್ ಮತ್ತು

ಪ್ರಫುಲ್ಲದತ್ತಗೋಸ್ವಾಮಿ ಹಾಗೂ ಜವಹರಲಾಲ್ ಹಂಡೂ ಈ ನಾಲ್ವರೂ ವಿದ್ವಾಂಸರು ಸೇರಿ ಸಿದ್ಧಪಡಿಸಿದ್ದಾರೆ. ಈ ಸರಣಿಯ ಬಗ್ಗೆ ಡಾರ್ಸನ್ನರು ಹೊಂದಿದ್ದ ಆಶಯವನ್ನೇ ಗಮನದಲ್ಲಿಟ್ಟುಕೊಂಡು ಎ. ಕೆ. ರಾಮಾನುಜನ್ ಅವರು ಮುನ್ನುಡಿ ಬರೆದಿದ್ದಾರೆ. ಈ ಸರಣಿಯ ಎಲ್ಲ ಸಂಕಲನಗಳಿಗಿರುವಂತೆ ಈ ಸಂಕಲನಕ್ಕೂ ಡಾರ್ಸನ್ ಅವರೇ ಮುನ್ನುಡಿ ಬರೆದಿದ್ದ ಪಕ್ಷದಲ್ಲಿ ಭಾರತದ ಜನಪದ ಕಥೆಗಳ ಬಗ್ಗೆ ಅವರ ಗ್ರಹಿಕೆಯನ್ನು • ಅವಕಾಶವಾಗುತ್ತಿತ್ತು. ಅಮೆರಿಕಕ್ಕೆ ಬಂದು ನೆಲೆಸಿದ ವಿವಿಧ ಜನಾಂಗ ಗಳನ್ನು ಗಮನದಲ್ಲಿಟ್ಟುಕೊಂಡು ಅಮೆರಿಕನ್ ಜಾನಪದವನ್ನು ಒಂದು ವಿಶಿಷ್ಟ ಸಿದ್ಧಾಂತದ ನೆಲೆಯಲ್ಲಿ ಅಧ್ಯಯನಿಸಿದ ಅವರು ಭಾರತದ ಸಾಂಸ್ಕೃತಿಕ ವೈವಿಧ್ಯಗಳನ್ನು ಅರ್ಥಮಾಡಿಕೊಂಡು ಆ ಹಿನ್ನೆಲೆಯಲ್ಲಿಯೇ ಈ ಸಂಕಲನವನ್ನು ಅಳೆದು ನೋಡಲು ಸಮರ್ಥರಾಗುತ್ತಿದ್ದರೆ ಎಂಬುದು ಈಗ ಪ್ರಶ್ನೆಯಾಗಿಯೇ ಉಳಿದಿದೆ.

ತಿಳಿಯಲು

**ಅಡಿ ಟಿಪ್ಪಣಿಗಳು :**

1. R. M. Dorson: American Folklore, Chicago University of Chicago press, 1959
2. American Folklore-ಮುನ್ನುಡಿ, ಪುಟ 4
3. ಅದೇ, ಪುಟ 5
4, ಅದೇ, ಪುಟ 245
5. R. M. Dorson : African Folklore, Anchor Books Doubleday and Company inc, Gardencity Newyork-1972
6. African Folklore, p. 4
7, ಅದೇ, ಪುಟ 8
8. ಅದೇ, ಪುಟ 30-31
9. ಅದೇ, ಪುಟ 31
10., ಅದೇ, ಪುಟ 45
11. R. M. Dorson: The British Folklorists, A History, Chicago, University of Chicago Press, 1968.

12. ಬ್ರಿಟಿಷ್ ಫೋಲ್ಲೋರಿಸ್ಟ್-ಎ ಹಿಸ್ಟರಿಯ ಮುನ್ನುಡಿಯಲ್ಲಿ ಡಾರ್ಸನ್ ಹೇಳಿರುವ ಮಾತು.

13. American Folklore Scholarship-A Dialoque of Dissent, Indiana University Press, Bloomington/ and Indiana Polis. 1988. ಇದರ ಕರ್ತೃ ರೋಸ್ ಮೇರಿ ಲೆವಿ ಜಮ್‌ವಾಲ್ಟ್ ಅವರು ಈ ವಿಷಯದ ಉಲ್ಲೇಖ ನೀಡಿದ್ದಾರೆ. ಪುಟ 11

14. Richard M. Dorson (Ed.) Peasant Customs and Savage Myths (2 Vol.) Chicago, University of Chicago Press, 1968

15. Richard M. Dorson Buying the wind-Regional Folklore in the United States, University of Chicago Press, Chicago. 1964

16. Richard M. Dorson (Ed.) Folktales Told around the world, University of Chicago Press, Chicago and London, 1975

17. Folktales Told around the world-ag

18. Folktales from India Ed.-Peter of Claus,

Brenda F Beek, Jawaharlal Handoo, Praphulla- datta Goswami, University of Chicago Press, Chicago, 1987

**ಜಾನಪದ ಶೈಕ್ಷಣಿಕ ಭವಿಷ್ಯ ಕುರಿತು....**

ಅಮೆರಿಕಾದಲ್ಲಿ ಜಾನಪದ ಅಧ್ಯಯನವು ಒಂದು ನಿರ್ಣಾಯಕ ಹಂತ ತಲುಪಿದ ಅವಧಿಯಲ್ಲಿ ಅವರ ಭವಿಷ್ಯ ಆತಂಕಕ್ಕೀಡಾಯಿತು. ಜಾನಪದವು ಇಂದಿನ ಸಮಾಜಕ್ಕೆ ಸಂಗತವಾಗಿಲ್ಲ, ಅದೊಂದು ಅನಗತ್ಯ ವಿಭಾಗ ಎಂಬ ಭಾವನೆಯಿಂದ ಜಾನಪದ ಅಧ್ಯಯನಗಳಿಗಾಗಿ ವಿಶ್ವವಿದ್ಯಾಲಯಗಳಿಗೆ ನೀಡಲಾಗುತ್ತಿದ್ದ ಧನಸಹಾಯವನ್ನು ಕಡಿತಗೊಳಿಸಲಾಗಿತ್ತು. ಈ ಪರಿಸ್ಥಿತಿಯನ್ನು ವಿಶ್ಲೇಷಿಸಿ ಜಾನಪದ ಅಧ್ಯಯನವನ್ನು ಬೆಳೆಸಬೇಕಾದ ಅಗತ್ಯತೆಗಳನ್ನು ಪ್ರಸ್ತಾವಿಸುವ ತುಂಬ ವಿಚಾರಪೂರ್ಣವಾದ ಪ್ರಬಂಧ ವೊಂದನ್ನು 1971ರಲ್ಲಿ ಅಮೆರಿಕನ್ ಫೋಕ್ ಲೋರ್ ಸೊಸೈಟಿಯ ಮುಂದೆ ಡಾರ್ಸನ್ ಮಂಡಿಸಿದರು. ಜಾನಪದವು ತನ್ನ ಸ್ಥಾನವನ್ನು ಉಳಿಸಿಕೊಳ್ಳುವುದಕ್ಕಾಗಿ ಹೋರಾಡಬೇಕಿದೆಯೆ? ಅಥವಾ - ಇತರ ಸ್ಥಾಪಿತ ಶಿಸ್ತುಗಳಿಗೆ ತಲೆಬಾಗಿ ಅವುಗಳ ರೀತಿ ಯನ್ನು ಅಳವಡಿಸಿಕೊಳ್ಳಬೇಕೆ, ಅದರ ಬೆಳವಣಿಗೆಯ ಗತಿಯನ್ನು ಹೀಗೇ ಮುಂದುವರೆಸಿ ಕೊಂಡು ಹೋಗಬೇಕೆ ಎಂಬ ಪ್ರಶ್ನೆಗಳನ್ನು ಡಾರ್ಸನ್ನರು ಸಮಿತಿಯ ಮುಂದೆ ಇಟ್ಟರು. ಜಾನಪದವನ್ನು ಒಂದು ಶೈಕ್ಷಣಿಕ ಶಿಸ್ತಾಗಿ ಏಕೆ ಮುಂದುವರೆಸಿಕೊಂಡು ಹೋಗಲೇ ಬೇಕಾಗಿದೆ ಎಂಬುದನ್ನು ಸಮರ್ಥಿಸುವ ಮೂರು ಮುಖ್ಯ ಅಂಶಗಳನ್ನು ಅವರು ಸ್ಪಷ್ಟ ಪಡಿಸಿದರು.

ಮೊದಲನೆಯ ಸಮರ್ಥನೆಯೇನೆಂದರೆ ಜಾನಪದವು ವಿದ್ಯಾರ್ಥಿಗಳನ್ನು ಸೆಳೆಯ ಬಲ್ಲ ಒಂದು ಅತ್ಯಂತ ಆಕರ್ಷಕವಾದ ಅಧ್ಯಯನ ವಿಷಯ. ಜಾನಪದ ತರಗತಿಗಳಿಗೆ ಸೇರಿಕೊಳ್ಳಲು ಎಲ್ಲ ಕಡೆಯೂ ಉತ್ತಮ ಪ್ರತಿಕ್ರಿಯೆ ಇದೆ. ಬರ್ಕ್‌ಲಿಯಲ್ಲಿ ಅಲನ್ ಡಂಡಸ್ ಅವರ ಜಾನಪದ ತರಗತಿಗಳಿಗೆ ನೂರಾರು ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ನುಗ್ಗುತ್ತಿದ್ದರು ಎಂಬುದನ್ನು ಉಲ್ಲೇಖಿಸುತ್ತಾ, ಕಾಲೇಜು ಶಿಕ್ಷಣ ಬರಡು ಎಂಬ ದೂರು ಕೇಳಿಬರುತ್ತಿರುವ ದರ್ಭದಲ್ಲಿ ಜಾನಪದ ತರಗತಿಗಳಿಗೆ ವಿದ್ಯಾರ್ಥಿಗಳು ಇಷ್ಟೊಂದು ಆಸಕ್ತಿಯಿಂದ ಬರುತ್ತಿದ್ದಾರೆ ಎಂದಮೇಲೆ ಈ ವಿಷಯವನ್ನು ನಾವು ದೊಡ್ಡ ದನಿಯಲ್ಲಿ ಸ್ಪಷ್ಟವಾಗಿ ಪ್ರಚಾರ ಮಾಡಲೇಬೇಕು. ವಿಶ್ವವಿದ್ಯಾಲಯದಲ್ಲಿ ಜಾನಪದ ಅಧ್ಯಯನ ಪ್ರವರ್ಧಮಾನವಾಗುತ್ತಿರುವಂತೆಯೇ ಅದರ ಸಂಸ್ಥೆಗಳೂ ಸಹ ಪ್ರವರ್ಧಿಸುತ್ತಿವೆ. ಫೋಕ್‌ಲೋರ್ ಸೊಸೈಟಿಯಂತೂ ಅದ್ಭುತವಾಗಿ ಬೆಳೆದಿದೆ ಎಂದು ಡಾರ್ಸನ್ ಹೇಳಿದರು.

* "The Academic future of folklore", Folklore: Selected essays 1972.

ಎರಡನೆಯದಾಗಿ, ಜಾನಪದ ಅಧ್ಯಯನವು ಹೊಂದಿರುವ ಮಾನವೀಯ ಮೌಲ್ಯಗಳ ದೃಷ್ಟಿಯಿಂದಲೂ ಅದರ ಅಧ್ಯಯನ ಸಮರ್ಥನೀಯ ಎಂದು ಡಾರ್ಸನ್ ಹೇಳುತ್ತಾರೆ. ದೇಶವು ಇಂದು ಸುಸ್ಥಿತಿಯಲ್ಲಿಲ್ಲದ ಜನರ ಬಗ್ಗೆ. ಬಡವರು-ಕರಿಯರು ಅಲ್ಪಸಂಖ್ಯಾತರು-ಮೂಲ ನಿವಾಸಿಗಳು ಹಾಗೂ ಕಡೆಗಣಿಸಲ್ಪಟ್ಟ ಜನರ ಬಗ್ಗೆ ಕಾಳಜಿ ಹೊಂದಿದೆ. ನಾನು ಜನಪದರನ್ನು ವಿಕ್ಟೋರಿಯನ್ ಜಾನ ಜಾನಪದ ತಜ್ಞರ ಅರ್ಥದ "ಕೆಳಸ್ತರ'ದವರೊಂದಿಗೆ ಸವಿ ಸಮೀಕರಿಸುವುದಿಲ್ಲವಾದರೂ ಇಂತಹ ಸಂಪ್ರದಾಯಾಭಿಮುಖ ವಾದ ಸಮೂಹಗಳಲ್ಲಿ ಜಾನಪದ ತಜ್ಞರು ಅಧ್ಯಯನಿಸುವುದಕ್ಕೆ ಅರ್ಹವಾದ ಸಮರ್ಥ ಅವಕಾಶಗಳಿರುವುದನ್ನು ಗುರುತಿಸಬಲ್ಲೆ....ನನ್ನ ಆಲೋಚನಾಧಾಟಿ ಅನ್ವಯಿಕ ಜಾನಪದದತ್ತ ಪ್ರೇರೇಪಿಸುತ್ತಿರುವಂತೆ ತೋರಬಹುದು. ಮನುಷ್ಯ ಸಮುದಾಯದ ಬಗ್ಗೆ, ಅದರಲ್ಲಿಯೂ ಕಡೆಗಣಿಸಲ್ಪಟ್ಟ ಜನತೆಯ ಬಗ್ಗೆ ಹೆಚ್ಚಿನ ಅರಿವು " ಉಂಟುರಿಂದ ಸಮಾಜ ಸುಧಾರಕರಿಗೆ ಸಹಾಯವಾಗಬಹುದು. ಆದರೆ ಸುಧಾರಣೆ ಮಾಡುವುದು ಜಾನಪದ ತಜ್ಞರ ಕೆಲಸವೆಂದು ನಾನು ಭಾವಿಸುವುದಿಲ್ಲ. ಜಾನಪದ ತಜ್ಞನು ತನ್ನ ಕೆಲಸವನ್ನು ತನ್ನದೇ ಆದ ನಿರ್ದಿಷ್ಟ ನೆಲೆಯ ಮೂಲಕವೇ ಸಮರ್ಥಿಸಿ ಕೊಳ್ಳಲು ಸಾಧ್ಯವಿದೆ. ತನ್ನ ಸಹಜೀವಿಗಳ ಸಾಂಸ್ಕೃತಿಕ ಸತ್ಯಗಳನ್ನು ನಿರ್ಲಿಪ್ತ ವಾಗಿ ಪರಿಶೋಧಿಸುವ ಮೂಲಕ ಅವನು ತನ್ನ ಕೆಲಸವನ್ನು ಸಮರ್ಥಿಸಿಕೊಳ್ಳ ಬಹುದು.

ಜಾನಪದವು ಆದಷ್ಟೂ ಹೆಚ್ಚಿನ ಸ್ವಾಯತ್ತತೆಗಾಗಿ ಹೋರಾಡುವುದು ಅಗತ್ಯ ಎಂದು ಭಾವಿಸುವುದಕ್ಕೆ ಮೂರನೆಯ ಕಾರಣವನ್ನು ಡಾರ್ಸನ್ ಹೀಗೆ ತಾರೆ: ಜಾನಪದವು ಪ್ರತ್ಯೇಕ ಕವಾದ ಹಾಗೂ ಸ್ವತಂತ್ರವಾದ ಮತ್ತು ಇತರ ಮಾನವಿಕ ಹಾಗೂ ಸಮಾಜ ವಿಜ್ಞಾನಗಳಿಗೆ ಸಂಪೂರ್ಣ ಸರಿಸಮಾನವಾದ ಕಲಿಕೆಯ ಕ್ಷೇತ್ರ. ಪಾಂಡಿತ್ಯಪೂರ್ಣವಾದ ಸಾಹಿತ್ಯ, ವಿಶಿಷ್ಟ ಸ್ವರೂಪದ ಪರಿಕಲ್ಪನೆ ಮತ್ತು ತಂತ್ರ ಅಂತರರಾಷ್ಟ್ರೀಯ ತಜ್ಞರ ಸಮೂಹ, ಈ ಯಾವ ದೃಷ್ಟಿಯಿಂದ ಅಳೆದರೂ ಜಾ ಪದವು ಒಂದು ಪೂರ್ಣ ಪ್ರಮಾಣದ ಶೈಕ್ಷಣಿಕ ಕ್ಷೇತ್ರ, "ಒಂದೆರಡು ಉಪನ್ಯಾಸ ಗಳನ್ನು ಕೇಳಿ ಕೆಲವು ಮೂಲ ಗ್ರಂಥಗಳನ್ನು ಓದಿಕೊಂಡುಬಿಟ್ಟರೆ ಸಾಕು, ಯಾವುದೇ ಕ್ಷೇತ್ರದವರೂ ಸಹ ಜಾನಪದದಲ್ಲಿ ತಜ್ಞತೆ ಪಡೆಯಬಹುದು ಎಂದು ಒಂದು ಕಾಲದಲ್ಲಿ ನಾನೂ ಭಾವಿಸಿದ್ದೆ. ಈ ಆಟದಲ್ಲಿ ತೊಡಗಿಸಿಕೊಂಡ 30 ವರ್ಷಗಳ ನಂತರ ನನಗನ್ನಿ ಸುತ್ತಿದೆ. ಅಂತರ್ ಶಿಸ್ತೀಯ ಆದರ್ಶ ಎನ್ನುವುದು ಒಂದು ಭ್ರಮೆ, ಏಕೆಂದರೆ ಒಂದು ಕ್ಷೇತ್ರದ ತಜ್ಞ ಇನ್ನೊಂದು ಕ್ಷೇತ್ರದ ತಜ್ಞನನ್ನು ಎಂದಿಗೂ ನಿಜವಾಗಿ ಅರ್ಥಮಾಡಿ ಕೊಳ್ಳಲಾರ. ಅವನು ತನ್ನ ಕ್ಷೇತ್ರದ ಉಪಶಿಸ್ತುಗಳನ್ನು ಕರಗತ ಮಾಡಿಕೊಳ್ಳು ವುದಕ್ಕೇ ಸಮಯ ಸಾಲುವುದಿಲ್ಲ. ಯಾರೊಬ್ಬನೇ ಆಗಲಿ ಅವನ ಶಿಕ್ಷಣ, ಅರ್ಹತಾ ಪರೀಕ್ಷೆ, ವೃತ್ತಿಪರ ಸಭೆಗಳು ಸಂಶೋಧನ ಪ್ರಬಂಧ ರಚನೆ ಇತ್ಯಾದಿ ಘಟ್ಟಗಳನ್ನು

ಹಾದು ಒರುವಷ್ಟರಲ್ಲಿ ಅವನ ಮಿದುಳಿನ ಮಾಂಸಖಂಡಗಳು ಕ್ಷೀಣಿಸಿರುತ್ತವೆ, ಅವನ ಮಾತಿನ ವಿನ್ಯಾಸಗಳು ಘನೀಭವಿಸಿರುತ್ತವೆ, ಅವನ ಬೌದ್ಧಿಕ ರಕ್ತಧಾರೆ ಗಟ್ಟಿಯಾಗಿ ಮಂದವಾಗಿರುತ್ತದೆ, ಅವನು ತನ್ನ ಅಂತಿಮಗಳಿಗೆಯವರೆಗೂ ಚರಿತ್ರಕಾರ, ರಾಜಕೀಯ ವಿಜ್ಞಾನಿ ಅಥವಾ ಜಾನಪದ ತಜ್ಞನಾಗಿಯೇ ಉಳಿಯುತ್ತಾನೆ. ಅವನಿಗೆ ಪಿಎಚ್.ಡಿ ಯನ್ನು ಒದಗಿಸುವುದು ಸಾಧ್ಯವಾಗದು, ಜಾನಪದ ತಜ್ಞನಿಗೂ ಮತ್ತು ಇತರ ತಜ್ಞರಿಗೂ ಇರುವ ವ್ಯತ್ಯಾಸವೇನೆಂದರೆ ತಾವು ಜಾನಪದದ ಬಗ್ಗೆ ಮಾತಾಡಬಲ್ಲೆವು ಎಂದು ಇತರ ತಜ್ಞರು ತಿಳಿದುಕೊಂಡಿರುತ್ತಾರೆ.... ಆದರೆ ಅನೇಕ ವರ್ಷಗಳ ಸಂಶೋಧನೆಗಳ ನಂತರ ಜಾನಪದ ತಜ್ಞರ ಹತ್ತಿರ ಬಂದಿರುವ ತಜ್ಞರೂ ಜಾನಪದದ ಅತ್ಯಂತ ಮೂಲಭೂತವಾದ ಪರಿಕಲ್ಪನೆಗಳನ್ನು ಕೂಡ ಗ್ರಹಿಸಲಾರರು."

ನಮ್ಮ ಭವಿಷ್ಯ ನಿಂತಿರುವುದು ವಿಶ್ವವಿದ್ಯಾಲಯಗಳಲ್ಲಿ. ವಿಶ್ವವಿದ್ಯಾಲಯದಲ್ಲಿ ತಳಪಾಯ ಇಲ್ಲದ ಕಾರಣಕ್ಕಾಗೇ ಇಂಗ್ಲೆಂಡಿನಲ್ಲಿ ಜಾನಪದ ಅಧ್ಯಯನಕ್ಕೆ ಮಂಕು ಕವಿಯಿತು. ಸರ್ಕಾರದ ಏಜೆನ್ಸಿಗಳಿಂದ ಬರುವಂಥ ಅನುದಾನದಿಂದ ಜಾನಪದ ತಜ್ಞರು ಸತ್ಯದ ನಿರ್ಲಿಪ್ತ ಅನ್ವೇಷಣೆ ಮಾಡುವುದು ಸಾಧ್ಯವಾದೀತೆಂದು ನನಗನ್ನಿಸುವುದಿಲ್ಲ. "ಹೋಗಿ, ಕಾಲೇಜು ವಿಶ್ವವಿದ್ಯಾಲಯಗಳಲ್ಲಿ ಸೇರಿಕೊಳ್ಳಿ ಎಂದೇ ಈಗಲೂ ಸಹ ನಾನು ಜಾನಪದ ತಜ್ಞರಿಗೆ ಹೇಳುತ್ತೇನೆ. ಹೆಚ್ಚು ತರಗತಿಗಳು ಆರಂಭವಾದಷ್ಟೂ ಹೆಚ್ಚಿನ ಪಿಎಚ್.ಡಿಗಳಿಗೆ ಅವಕಾಶಸಿಗುತ್ತದೆ. ಅಮೆರಿಕನ್ ವಿಶ ಮರನ್ ವಿಶ್ವವಿದ್ಯಾಲಯಗಳ ಇಲಾಖಾ ಸಂರಚನೆ ಹೇಗಿರುತ್ತದೆಂದರೆ ಜಾನಪದವು ಇಂಗ್ಲಿಷ್, ಮಾನವಶಾಸ್ತ್ರ, ಇತಿಹಾಸ ಅಥವಾ ವಿದೇಶೀಭಾಷೆ ಅಥವಾ ಸಂಗೀತದ ಇಲಾಖೆಗಳನ್ನು ಆಶ್ರಯಿಸಬೇಕಾಗಿರುತ್ತದೆ. ಜಾನಪದಕ್ಕೆ ಇಲ್ಲಿ ಮಾತ್ರ ಅವಕಾಶ, ಜಾನಪದ ತಜ್ಞನು ನು ಜಾನಪದ ತಜ್ಞನಾಗಿಯೇ ಕೊಡುಗೆ ನೀಡುವುದಕ್ಕೆ ಅವಕಾಶವಿಲ್ಲದ ಸ್ಥಿತಿ ಆದರೆ ಹೀಗೆ ಎರವಲು ತೆಗೆದುಕೊಂಡ ಸಂಸ್ಥೆಗಳು ಅವರು ಜಾನಪದ ತಜ್ಞರಾಗಿಯೇ ಕೊಡುಗೆ ನೀಡುವುದಕ್ಕೆ ಅವಕಾಶ ಮಾಡಿಕೊಡಬೇಕು....ಇಂತಹ ರೋಚಕವಾದ ಶೈಕ್ಷಣಿಕ ವಿಷಯ ನಮ್ಮ ಶಿಕ್ಷಣ ಕ್ರಮದಲ್ಲಿದೆ ಎಂದು ವಿಶ್ವವಿದ್ಯಾಲಯವು ಸಂತೋಷದಿಂದ, ಹೆಮ್ಮೆ ಯಿಂದ ಹೇಳಿಕೊಳ್ಳುವಂತಿರಬೇಕು

ಬಲವಾಗಿ ಹಾಗೂ ಒತ್ತಾಯಪೂರ್ವಕವಾಗಿ ಗಿ ನಾನು ಹರಡಲಿಚ್ಛಿಸುವ ಒಂದು ಸರಳ ಸಂದೇಶವೇನೆಂದರೆ "ಮುಕ್ತವಾದ ಎಲ್ಲ ಕಲಾಕಾಲೇಜುಗಳಲ್ಲಿ ಜಾನಪದವನ್ನು ಬೋಧಿಸಬೇಕು."

**ಕೊನೆಯದಾಗಿ....**

1961ರಲ್ಲಿ ಹುಟ್ಟಿದ ಡಾರ್ಸನ್, 1981 ಸೆಪ್ಟೆಂಬರ್ :11 ರಂದು ಕೊನೆಯುಸಿ ರೆಳೆದರು. ಡಾರ್ಸನ್ನರು ಸಮಕಾಲೀನ ಜಾನಪದ ವಿದ್ವಾಂಸ ವಿಲಿಯಂ ಆರ್. ಬಾಸ್ಕಂ

ಸಹ ಅದೇ ದಿನ ನಿಧನರಾದರು. ಇವರ ಅಧ್ಯಯನ ಮತ್ತು ಮಾರ್ಗದರ್ಶನಗಳಿಂದ ತುಂಬ ಪ್ರಭಾವಿತಳಾಗಿದ್ದ ರೋಸ್ ಮೇರಿ ಲೆವಿ ಜೂಮ್ ವಾಲ್ಟ್ ಎಂಬ ಜಾನಪದ "....with their simultaneous passing.... the present became the past; an era ended...." (American folklore Scholarship 1988 ಮುನ್ನುಡಿಯಲ್ಲಿ)

ಡಾರ್ಸನ್ ಕೊನೆಯವರೆಗೂ ಜಾನಪದಕ್ಕಾಗಿ ದುಡಿದರು. ಉತ್ತರ ಇಂಡಿಯಾನಾದ ಕೈಗಾರಿಕಾ ಜಾನಪದ ಸಂಗ್ರಹ ಅವರು ಮಾಡಿದ ಕೊನೆಯ ಕ್ಷೇತ್ರ ಕಾರ್ಯ (1981) Heart disease and Folklore, ಅವರ ಕೊನೆಯ ಜಾನಪದ ಲೇಖನ.

ಸಂಶೋಧಕರು ಹೆಜ್ಜೆ ಹೆಜ್ಜೆಗೂ ಉಲ್ಲೇಖಿಸುವಂತಹ ಸೈದ್ಧಾಂತಿಕ ಕೊಡುಗೆ ಗಳನ್ನು ಡಾರ್ಸನ್ ನೀಡಲಿಲ್ಲ. ಅಮೆರಿಕಾದ ಹೊಸ ತಲೆಮಾರಿನ ಜಾನಪದ ವಿದ್ವಾಂಸರು ಡಾರ್ಸನ್‌ರನ್ನು ಜಾನಪದದ ಪರಿಚಾರಕ ಎಂದು ಗುರುತಿಸುತ್ತಾರೆಯೇ ಹೊರತು ಸಂಶೋಧಕನೆಂದಲ್ಲ. ಇದು ನಿಜವಿರಬಹುದು. ಆದರೆ ಡಾರ್ಸನ್ನರ ವೈಶಿಷ್ಟ್ಯ ವಿರುವುದು ಜಾನಪದ ಪರಿಚಾರಿಕೆಯ ಕೆಲಸವನ್ನು ಅವರು ಸಂಪೂರ್ಣ ವಿಶ್ವಾಸದಿಂದ, ಸಂತೋಷದಿಂದ ಂದ ಹಾಗೂ ಶ್ರದ್ಧೆಯಿಂದ ಮಾಡಿದರು ಎಂಬುದರಲ್ಲಿ ಸಾಮಾನ್ಯವಾಗಿ ಜಾನಪದದವರ ಬಗ್ಗೆ ವ್ಯಕ್ತವಾಗುತ್ತಿದ್ದ ತಾತ್ಸಾರದಿಂದ ಅವರು ಕುಗ್ಗಲಿಲ್ಲ. ಅದಕ್ಕೆ ಬದಲಾಗಿ ಜಾನಪದದ ವ್ಯಾಪ್ತಿ, ಮಹತ್ವಗಳನ್ನು ಅರ್ಥಮಾಡಿ ಕೊಳ್ಳದಿರುವ ವಿದ್ವಾಂಸರ ಬಗ್ಗೆ ಮರುಕಪಟ್ಟರು. ಜಾನಪದದ ಕೆಲಸವನ್ನು ಮಾಡಲೇ ಬೇಕಾದ ಕೆಲಸ ಎಂಬ ಶ್ರದ್ಧೆಯಿಂದ ಮಾಡಿದರು, ಜಾನಪದಕ್ಕೆ ತಕ್ಕ ಸ್ಥಾನಮಾನ ಕಲ್ಪಿಸಲು ಹಾಗೂ ಅದಕ್ಕೆ ಭದ್ರ ಬುನಾದಿಯನ್ನು ಕಟ್ಟಲು ಅಗತ್ಯವಾದ ಎಲ್ಲ ಕೆಲಸ ಗಳನ್ನು ವ್ಯವಸ್ಥಿತವಾಗಿ ಮಾಡಿದರು, ಫಲಪ್ರದವಾಗಿ ಮಾಡಿದರು.

ಡಾರ್ಸನ್ನರು ಸಾಂಪ್ರದಾಯಿಕ ಪರಿಕಲ್ಪನೆಯ ಜಾನಪದ ಮತ್ತು ಈಗ ಸಂಪೂರ್ಣ ಹೊಸ ಹಾದಿಹಿಡಿದಿರುವ ಜಾನಪದ ಮಾರ್ಗಗಳ ನಡುವಿನ ಕೊಂಡಿಯಾಗಿ ನಿಂ.

ಇತರ ವಿದ್ವಾಂಸರಂತೆ ಯಾವುದಾದರೊಂದು ಸಂಶೋಧನೆಗೇ ಮೀಸಲಾಗಿಟ್ಟು ಕೊಂಡಿದ್ದರೆ ಯಶಸ್ವಿಯಾಗುವುದು ಅವರಿಗೇನೂ ಕಷ್ಟವಾಗಿರಲಿಲ್ಲ. ಅಮೆರಿಕನ್ ಜಾನಪದ, ಆಫ್ರಿಕನ್ ಜಾನಪದ, ಆಧುನಿಕ ಜಗತ್ತಿನಲ್ಲಿ ಜಾನಪದ ಮುಂತಾದ ಅಧ್ಯಯನಗಳಲ್ಲಿ ಅವರ ಸಂಶೋಧಕ ಪ್ರತಿಭೆ ವ್ಯಕ್ತವಾಗಿದೆ. ಆದರೆ ಡಾರ್ಸನ್ ಮತ್ತು ಅವರಂತಹ ಇನ್ನಿತರ ವಿದ್ವಾಂಸರು ಈ ಕ್ಷೇತ್ರವನ್ನು ಹಸನುಗೊಳಿಸುವ ಕೆಲಸ ಮಾಡ ದಿದ್ದರೆ ಜಾನಪದ ಅಧ್ಯಯನ ಇಷ್ಟೊಂದು ಬಹುಮುಖವಾಗಿ ಬೆಳೆಯುವುದಕ್ಕೆ ಸಾಧ್ಯವಾಗುತ್ತಿತ್ತೇ ಎಂದು ಯೋಚಿಸಬೇಕು.

ಜಾನಪದಕ್ಕೆ ಡಾರ್ಸನ್ ನೀಡಿದ ಕೊಡುಗೆಯ ಮಹತ್ವವಿರುವುದು ಇಲ್ಲಿಯೇ

ಜಾನಪದ ಅಧ್ಯಯನದಲ್ಲಿ ಪಾಶ್ಚಾತ್ಯ ವಿದ್ವಾಂಸರುಗಳು ತೋರಿರುವ ಸಾಧನೆ ಬಹುದೊಡ್ಡದು. ಅದರಲ್ಲೂ ಅಮೆರಿಕದ ಇಂಡಿಯಾನ ವಿಶ್ವವಿದ್ಯಾಲಯದಲ್ಲಿನ ವಿದ್ವಾಂಸರ ಪರಂಪರೆ ಈ ಕ್ಷೇತ್ರಕ್ಕೆ ಕೊಟ್ಟಿರುವ ಕೊಡುಗೆ ಬಹುದೊಡ್ಡದು. ರಿಚರ್ಡ್ ಎಂ. ಡಾರ್ಸನ್ ಅವರು ಜನಪದ ಕ್ಷೇತ್ರಕ್ಕೆ ನೀಡಿರುವ ಕೊಡುಗೆ ತುಂಬ ಗಣನೀಯವಾದದ್ದು, ವಿಶ್ವದ ಬೇರೆ ಬೇರೆ ರಾಷ್ಟ್ರಗಳ ಜನಪದ ಕಥೆಗಳನ್ನು ಒಂದೊಂದು ಸಂಕಲನದ ಮೂಲಕ ಅವರು ಸಂಪಾದಿಸಿಕೊಟ್ಟಿದ್ದಾರೆ. ಜೊತೆಗೆ ಆಯಾ ದೇಶಗಳಲ್ಲಿ ನಡೆದ ಜಾನಪದ ಸಂಶೋಧನ ಕಾರ್ಯವನ್ನು ವಿವರವಾಗಿ ಪರಿಚಯಿಸಿ ದ್ದಾರೆ. ಇಂತಹ ಒಬ್ಬ ಗಮನಾರ್ಹ ವಿದ್ವಾಂಸನನ್ನು ಕುರಿತಂತೆ ಒಂದು ಪುಟ್ಟ ಗ್ರಂಥವನ್ನು ರಚಿಸಿಕೊಡುವಂತೆ ಕೇಳಿಕೊಂಡಾಗ ಅತ್ಯಂತ ಸಂತೋಷದಿಂದ ಆ ಕೆಲಸವನ್ನು ಮುಗಿಸಿಕೊಟ್ಟ ಡಾ. ಕೆ. ಆರ್. ಸಂಧ್ಯಾರೆಡ್ಡಿಯವರಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

**ಜೀ. ಶಂ. ಪರಮಶಿವಯ್ಯ**